

ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 26 ಸಂಚಿಕೆ 44 ಅಕ್ಟೋಬರ್ 31, 2004 ಬೆಲೆ ರೂ. 3.00





ಪಠ್ಯ ಪುಸ್ತಗಳಲ್ಲಿ ಇತಿಹಾಸ : ವಿವಾದವೇನು ?





ಮಹಾರಾಷ್ಟ್ರ : ಕೋಮುಶಕ್ತಿಗಳ ನಿರ್ಣಾಯಕ ಸೋಲು






ವೀರಪ್ಪನ್ ಅಂತ್ಯ ಮತ್ತು ಎಸ್.ಟಿ.ಎಫ್.

- ರಾಂದುರ್ಗ : ಮತಾಂಧರು ಹಚ್ಚಿದ ಕಿಚ್ಚು
- ಸಾಕ್ಷರತಾ ಪ್ರೇರಕರಿಂದ ದಿಗ್ಬಂಧನ
- ಭಾನಾಮತಿ - ಅಂಧ ಪಯಣ
- ಸಿಪಿಐ(ಎಂ) ಮಹಾಧಿವೇಶನತ್ತ.....

ಸಿನಿಮಾ : 'ಕಲಾಸಿಪಾಳ್ಯ'ದಲ್ಲಿ ಏನಿದೆ ?



ಮಾನವ ಕುಲದ ಇತಿಹಾಸದ ದಿಕ್ಕನ್ನೇ ಬದಲಿಸಿದ ರಶಿಯಾದ ಅಕ್ಟೋಬರ್ ಮಹಾನ್ ಕ್ರಾಂತಿ ನಡೆದು 87 ವರ್ಷಗಳಾಗುತ್ತಿದೆ. ಕ್ರಾಂತಿ ತಂದ ಅದ್ಭುತ ಬದಲಾವಣೆಗಳು, ವಿಶ್ವದೆಲ್ಲೆಡೆ ಬೀರಿದ ಪರಿಣಾಮ ಸಾಗರ ಸಾಗರದಷ್ಟು. ಆ ಕುರಿತ ಸಾಹಿತ್ಯವೂ ಅಗಾಧ. ಝಾರ್‌ಶಾಹಿ ರಶಿಯಾಕ್ಕು - ಸಮಾಜವಾದಿ ರಶಿಯಾಕ್ಕು ಇರುವ ವ್ಯತ್ಯಾಸಗಳನ್ನು ಮನಮುಟ್ಟುವಂತೆ ಚಿತ್ರಿಸಿರುವುದರಲ್ಲಿಎಸ್.ಅಲೆಕ್ಸೆಯಟ್ ಗಮನಾರ್ಹರು. ಅವರ 'ರಶಿಯನ್ ಇತಿಹಾಸದಿಂದ ಕಥೆಗಳು' ಗ್ರಂಥ ಅಧ್ಯಯನವೇ ಒಂದು ರೋಮಾಂಚನಕಾರಿ. ಅತ್ಯಂತ ಗಂಭೀರ ವಿಷಯಗಳನ್ನು ಸರಳ-ಸುಂದರವಾಗಿ, ಮನ ಮಿಡಿಯುವಂತೆ ಹೇಳುವುದು ಅವರ ವೈಶಿಷ್ಟ್ಯ. ಈ ಕಥೆ ಅವರ ಗ್ರಂಥದಿಂದ ಆಯ್ದದ್ದು. ವರ್ಗ ವೈರುಧ್ಯಗಳ ಸಮಾಜದಿಂದ ವರ್ಗರಹಿತ, ಸಮಾತನೆಯ ಸಮಾಜದ ನಿರ್ಮಾಣದತ್ತ ಕ್ರಾಂತಿಯ ಪರಿಣಾಮ-ಸಾಗುವಿಕೆಯನ್ನು ತೆರೆದಿಡುತ್ತದೆ ಇದು.

ರಷ್ಯನ್ ಗಣತಂತ್ರದ ಪ್ರಜೆ

ಪುಟ್ಟ ದನೀಲ್ಕ ಪೆತ್ರೋಗ್ರಾದ್‌ನ ಲಿತೇಯ್ನಿ ಪ್ರಾಸ್ಪೆಕ್ಟ್‌ನಲ್ಲಿ ಎತ್ತರವಾದ ಕಟ್ಟಡವೊಂದರ ನೆಲಮಾಳಿಗೆಯಲ್ಲಿ ವಾಸಿಸುತ್ತಿದ್ದ. ಅವನು ಹುಟ್ಟಿದ್ದು ಬೆಳೆದಿದ್ದು ಈ ಕಟ್ಟಡದಲ್ಲಿಯೇ. ಆದ್ದರಿಂದ ಇದರಲ್ಲಿ ವಾಸಿಸುತ್ತಿದ್ದ ಎಲ್ಲರನ್ನೂ ಕಂಡು ತಿಳಿದಿದ್ದ.

ಮೊದಲ ಅಂತಸ್ತಿನಲ್ಲಿ ಕೌಂಟೆಸ್ ಷೆರ್ಬಾತ್‌ಸ್ಕಯ ವಾಸಿಸುತ್ತಿದ್ದಳು. ಎರಡನೆಯ ಅಂತಸ್ತಿನಲ್ಲಿ ಪ್ರಿನ್ಸ್ ಪಿರೊಗೋವ್- ಪಿಷ್ಚಾಯೆವ್. ಮೂರನೆಯ ಅಂತಸ್ತಿನಲ್ಲಿ ಉನ್ನತ ಪದವಿಯ ಸರಕಾರೀ ಅಧಿಕಾರಿ ಗೊರೋಖೊವ್ ವಾಸಿಸುತ್ತಿದ್ದ. ನೇರ ಮೇಲಿನ ಅಂತಸ್ತಿನಲ್ಲಿ ಮತ್ತೊಬ್ಬ ಸರ್ಕಾರಿಸ ಅಧಿಕಾರಿ ಅರ್ದಾತೋವ್ ವಾಸಿಸುತ್ತಿದ್ದ. ಸಿವಿಲ್ ಸರ್ವಿಸ್‌ನಲ್ಲಿ ಇವನ ದರ್ಜೆ ಗೋರೋಖೊವ್‌ನ ದರ್ಜೆಗಿಂತ ಸ್ವಲ್ಪ ಕಮ್ಮಿಯಾಗಿದ್ದಿತು. ಹಾಗಾಗಿ ಅಲ್ಲಿ ವಾಸಿಸುತ್ತಿದ್ದವರೆಲ್ಲ ಪ್ರತಿಷ್ಠಿತರಾದ ಪದವಿ ಪಡೆದ ವ್ಯಕ್ತಿಗಳಾಗಿದ್ದರು.

ಕ್ರಾಂತಿಯಾದನಂತರ ಕಳೆದ ಕೆಲವು ದಿನಗಳಲ್ಲಿ ಘಟನೆಗಳು ಬಿರುಗಾಳಿಯಂತೆ ಭರದಿಂದ ಜರುಗಿದ್ದವು- ಅವನ್ನು ಕಂಡು ವಿಸ್ಮಯಗೊಳ್ಳುವಷ್ಟು ಸಮಯವೂ ದನೀಲ್ಕಗಿರಲಿಲ್ಲ. ಆದರೆ ಈ ದಿನ ಏನು ಜರುಗಿತೆಂದರೆ...

ದನೀಲ್ಕನ ತಂದೆ ಮನೆಗೆ ಒಂದು ವೃತ್ತಪತ್ರಿಕೆಯನ್ನು ತಂದ, ಅದನ್ನು ತೆರೆದ, ತನ್ನ ಮಗನತ್ತ ನೋಡಿದ.

''ನೋಡೋ, ಮಗು'' ಅವನೆಂದ. "ಇಂದಿನಿಂದ ನೀನು ರಷ್ಯನ್ ಗಣತಂತ್ರದ ಪ್ರಜೆ. ವದ್ಲಿಮೀರ್ ಉಲ್ಯಾನೋವ್-ಲೆನಿನ್‌ರೇ ಈ ಶಾಸನಕ್ಕೆ ಸಹಿ ಹಾಕಿದ್ದಾರೆ."

ಅದು ಯಾಕೋ, ದನೀಲ್ಕ ಅದನ್ನು ನಂಬದಾದ. ರಷ್ಯನ್ ಗಣತಂತ್ರದ ಪ್ರಜೆ ಎಂದರೆ ಏನು ಸರಿಯಾದ ಅರ್ಥ ಎಂಬುದೂ ಅವನಿಗೆ ತಿಳಿದಿರಲಿಲ್ಲ.

"ಇದು ಸ್ತಾತ್‌ಸ್ಕಿ ಸೋವೇತ್ನಿಕ್ ಪದವಿಗಿಂತ ಹೆಚ್ಚು ಮುಖ್ಯವಾದುದೆ?" (ಅದು ಅರ್ದಾತೊವ್‌ನ ಪದವಿಯಾಗಿದ್ದಿತು.)

(ಸ್ತಾತ್‌ಸ್ಕಿ ಸೋವೇತ್ನಿಕ್- ತ್ಸಾರಿಸ್ಟ್ ರಷ್ಯದಲ್ಲಿ ಸಿವಿಲ್ ಸರ್ವಿಸ್‌ನಲ್ಲಿ ಪದವಿಗಳ ಪಟ್ಟಿಯಲ್ಲಿ ಐದನೆಯದು.)

"ಹೌದು. ಹೆಚ್ಚು ಮುಖ್ಯವಾದುದು" ತಂದೆ ನಸುನಕ್ಕ.

"ತಾಯ್‌ನಿ ಸೋವೇತ್ನಿಕ್ ಗಿಂತ ಹೆಚ್ಚು ಮುಖ್ಯವಾದುದೆ?" (ಅವನು ಗೋರೋಖೋವ್‌ನ ಪದವಿಯನ್ನು ಜ್ಞಾಪಿಸಿಕೊಂಡು ಹಾಗೆ ಕೇಳಿದ.)

"ಹೌದು. ಹೆಚ್ಚು ಮುಖ್ಯವಾದುದು."

"ಕೌಂಟ್‌ಗಿಂತ ಹೆಚ್ಚು ಉನ್ನತವಾದುದೆ?"

"ಹೌದು. ಹೆಚ್ಚು ಉನ್ನತವಾದುದು."

ಪ್ರಿನ್ಸ್‌ಗಿಂತಲೂ ಹೆಚ್ಚು ಉನ್ನತವಾದುದೆ?"

"ಹೌದು. ಹೆಚ್ಚು ಉನ್ನತ, ಹೆಚ್ಚು ಹೆಚ್ಚು ಉನ್ನತ" ತಂದೆ ನಕ್ಕ.

ದನೀಲ್ಕ ಬೀದಿಗೆ ಓಡಿದ. ತನ್ನ ಗೆಳೆಯರನ್ನು ಪರಿಚಯಸ್ಥರನ್ನು ಹುಡುಕಿದ.

"ನಿನಗೆ ಗೊತ್ತ, ನನ್ನ ಪದವಿ ಸ್ತಾತ್‌ಸ್ಕಿಗಿಂತ ಹೆಚ್ಚು ಮುಖ್ಯವಾದುದು, ತಾಯ್‌ನಿಗಿಂತಲೂ ಹೆಚ್ಚು ಮುಖ್ಯವಾದುದು. ಕೌಂಟ್‌ಗಿಂತ, ಪ್ರಿನ್ಸ್‌ಗಿಂತ ಹೆಚ್ಚು ಉನ್ನತವಾದುದು. ನಾನೀಗ ರಷ್ಯನ್ ಗಣತಂತ್ರದ ಪ್ರಜೆ. ಇದನ್ನು ಪತ್ರಿಕೆಗಳಲ್ಲೇ ಬರೆಯಲಾಗಿದೆ. ವ್ಲದೀಮೀರ್ ಉಲ್ಯಾನೊವ್-ಲೆನಿನ್‌ರೇ ಆ ಶಾಸನಕ್ಕೆ ಸಹಿ ಹಾಕಿದ್ದಾರೆ."

ದನೀಲ್ಕ ಅಂದು ಅನೇಕ ಮಿತ್ರರನ್ನು ಸಂಧಿಸಿದ. ಎಲ್ಲರಿಗೂ ತಪ್ಪದೇ ಈ ಸುದ್ದಿ ತಿಳಿಸಿದ. ಕೊನೆಗೆ ಸುಸ್ತಾಗಿ ತನ್ನ ಮನೆಯ ಬಳಿ ಕುಳಿತ. ಯೋಚನೆ ಮಾಡತೊಡಗಿದ: ಉಲ್ಯಾನೊವ್-ಲೆನಿನರು ತನ್ನ ಬಗೆಗೆ. ದನೀಲ್ಕನ ಬಗೆಗೆ, ಹೇಗೆ ತಿಳಿದರು? ಇದರ ಬಗೆಗೆ ಚಿಂತಿಸುತ್ತಿರುವಾಗ ಅವನು ಕೂಡಲೇ ಕೆಂಚು ಕೂದಲ ಕಿರೀಲ್ ತನ್ನ ಕಡೆಗೆ ಓಡಿ ಬರುತ್ತಿರುವುದನ್ನು ಕಂಡ. ಓಡಿ ಬಂದು, ಏದುಸಿರು ಬಿಡುತ್ತ ನಿಂತ. ತಕ್ಷಣವೇ ಮಾತುಗಳು ಅವನ ಬಾಯಿಯಿಂದ ಹೊರಹೊಮ್ಮಿದ್ದವು.

"ನಿನಗೆ ಗೊತ್ತ ನಾನು ಯಾರು ಅಂತ? ನಾನೊಬ್ಬ ರಷ್ಯನ್ ಗಣತಂತ್ರದ ಪ್ರಜೆ!"


ದನೀಲ್ಕಗೆ ಆಶ್ಚರ್ಯದಿಂದ ಮಾತೇ ಹೊರಡದಂತಾಯಿತು.

''ಹೌದಾ? ನೀನು ನಿಜಕ್ಕೂ ಹಾಗಂದುಕೊಂಡಿದೀಯ?'' ಅವನು ಗೇಲಿ ಮಾಡುವ ಧ್ವನಿಯಲ್ಲಿ ಹೇಳಿದ. "ನಾನೇ ಆ ಪ್ರಜೆ. ಪತ್ರಿಕೆಗಳಲ್ಲೆಲ್ಲ ನನ್ನ ಬಗೆಗೆ ಬರೆಯಲಾಗಿದೆ."

"ನಿನ್ನ ಬಗೆಗೆ ಬರೆಲಾಗಿದೆಯೇ?" ಕಿರೀಲ್‌ನೂ ಪರಿಹಾಸ್ಯದ ಧ್ವನಿಯಲ್ಲಿ ಹೇಳಿದ. "ನಿನ್ನ ಬಗೆಗೆ ಬರೆದು ಮುದ್ರಣ ಕಾಗದವನ್ನು ಹಾಳು ಮಾಡುತ್ತಾರೆ ಅಂದುಕೊಂಡೆಯಾ!"

ಇಬ್ಬರ ಮಧ್ಯೆಯೂ ಕದನ ಪ್ರಾರಂಭವಾಯಿತು.

"ನಾನೇ ಆ ಪ್ರಜೆ..." ದನೀಲ್ಕ ಕಿರೀಲ್‌ಗಿಂತ ಜೋರಾಗಿ ಕೂಗಿ ಹೇಳಿದ.



"ಇಲ್ಲ, ನಾನೇ ಆ ಪ್ರಜೆ" ಕಿರೀಲ್ ಇನ್ನೂ ಗಟ್ಟಿಯಾಗಿ ಅರುಚಿದ.

ಆ ಹೊತ್ತಿಗೆ ಸರಿಯಾಗಿ ಒಬ್ಬ ಯುವ ಕಾರ್ಮಿಕ ಅತ್ತ ಬಂದ. ಅವನು ಅವರಿಬ್ಬರನ್ನು ಬಿಡಿಸಿದ. ಇಬ್ಬರೂ ತುಂಬ ಹೊತ್ತು ಮೌನದಿಂದಿದ್ದರು. ಸಮಸ್ಯೆ ಏನೆಂದು ಹೇಳಲು ನಿರಾಕರಿಸಿದರು. ಕೊನೆಗೆ ಹೇಳಿಕೊಂಡರು. ಯುವಕ ನಕ್ಕ. ತನ್ನ ಜೇಬಿನಿಂದ ಒಂದು ವೃತ್ತಪತ್ರಿಕೆಯನ್ನು ಹೊರತೆಗೆದ. ಹುಡುಗರು ಓದತೊಡಗಿದರು- ನಿಧಾನವಾಗಿ, ಕಷ್ಟಪಟ್ಟುಕೊಂಡು.

"ಅಂತಸ್ತುಗಳನ್ನೂ ಸಿವಿಲ್ ಪದವಿಗಳನ್ನೂ ರದ್ದುಗೊಳಿಸುವುದಕ್ಕೆ ಸಂಬಂಧಿಸಿದ ಶಾಸನ" ಅವರು ತಲೆಬರಹ ಓದಿದರು.

ಅಂದಿನಿಂದ ಸದಾಕಾಲಕ್ಕೂ ಎಲ್ಲ ಪದವಿಗಳನ್ನೂ, ದರ್ಜೆಗಳನ್ನೂ, ಉನ್ನತ ಹುದ್ದೆಗಳ ಹೆಸರುಗಳನ್ನೂ ರದ್ದುಗೊಳಿಸಲಾಗಿದೆ, ಎಂದು ಅದು ಮುಂದೆ ತಿಳಿಸಿದ್ದಿತು. ಇನ್ನು ಮುಂದೆ ಕುಲೀನರು, ವರ್ತಕರು, ತಾಯ್‌ನಿ ಮತ್ತು ಸ್ತಾತ್‌ಸ್ಕಿ ಸೊವೇತ್ನಿಕ್‌ಗಳು, ಪ್ರಿನ್ಸ್‌ಗಳು, ಕೌಂಟ್‌ಗಳು, ಯಾರೂ ಇರುವುದಿಲ್ಲ. "ರಷ್ಯದ ಜನತೆಯ ಪ್ರತಿಯೊಬ್ಬ ಸದಸ್ಯನಿಗೂ ಈ ಮೂಲಕ ಒಂದೇ ಪದವಿ ಸಂಸ್ಥಾಪಿಸಲಾಗಿದೆ. ಅದೇ ರಷ್ಯನ್ ಗಣತಂತ್ರದ ಪ್ರಜೆ!" ಎಂದು ತಿಳಿಸಿದ್ದಿತು ಆ ಶಾಸನ.

ಕೆಳಗೆ ಸಹಿ ಹಾಕಲಾಗಿದ್ದಿತು: ಜನತಾ ಕಮಿಸ್ಸಾರ್‌ಗಳ ಕೌನ್ಸಿಲ್‌ನ ಅಧ್ಯಕ್ಷ, ವ್ಲದೀಮಿರ್ ಉಲ್ಯಾನೊವ್(ಲೆನಿನ್).

"ನೋಡಿದಿರಾ. ನೀವಿಬ್ಬರೂ ಸರಿಯೇ" ಯುವಕ ಹೇಳಿದ. "ನೀನೊಬ್ಬ ರಷ್ಯನ್ ಗಣತಂತ್ರದ ಪ್ರಜೆ" ಎಂದು ಅವನು ದನೀಲ್ಕಗೆ ತೋರಿಸುತ್ತ ಹೇಳಿದ. "ಮತ್ತೆ ನೀನೂ ರಷ್ಯನ್ ಗಣತಂತ್ರದ ಪ್ರಜೆ" ಎಂದು ಕಿರೀಲ್‌ನತ್ತ ತಲೆದೂಗಿ ಹೇಳಿದ "ಮತ್ತೆ ನಾನೂ ರಷ್ಯನ್ ಗಣತಂತ್ರದಪ್ರಜೆ, ನಾವೆಲ್ಲ ಈಗ ರಷ್ಯನ್ ಗಣತಂತ್ರದ ಪ್ರಜೆಗಳು ಮತ್ತೆ ವ್ಲದೀಮಿರ್ ಇಲ್ಯಿಚ್ ಲೆನಿನ್‌ರು ಈ ಶಾಸನವನ್ನು ಸಾಮಾನ್ಯ ಪ್ರಜೆಗಳಿಗಾಗಿ ಬರೆದಿದ್ದಾರೆ."

ಶಾಸನ ತನ್ನ ಕುರಿತಷ್ಟೆ ಅಲ್ಲ ಎಲ್ಲರ ಕುರಿತೂ ಬರೆಯಲಾಗಿದೆ ಎಂಬುದನ್ನು ತಿಳಿದು ದನೀಲ್ಕ ಮೊದಲು ಅಸಮಾಧಾನಗೊಂಡ. ಆದರೆ ಅದೆಲ್ಲ ಒಳಿತೇ ಎಂಬುದನ್ನು ಬೇಗನೆಯೇ ತಿಳಿದುಕೊಂಡ. ಹೀಗೆ ಮಾಡಿ ವ್ಲದೀಮಿರ್ ಇಲ್ಯಿಚ್ ಲೆನಿನ್ ಯಾರನ್ನೂ ಮರೆತಿರಲಿಲ್ಲ- ದನೀಲ್ಕನ ತಂದೆ ತಾಯಿಯರನ್ನಾಗಲಿ, ಅವನ ಮಿತ್ರರನ್ನಾಗಲಿ, ಪರಿಚಯಸ್ಥರನ್ನಾಗಲೀ, ಯಾರನ್ನೂ ಮರೆತಿರಲಿಲ್ಲ. ಅವರು ಎಲ್ಲರನ್ನು ನೆನಪಿನಲ್ಲಿಟ್ಟಿದ್ದರು.

ಆದರೆ ಕೌಂಟೆಸ್ ಷೆರ್ಬಾತ್‌ಸ್ಕಯ, ಪ್ರಿನ್ಸ್ ಪಿರೊಗೋ-ಪಿಷ್ಚಾಯೆವ್, ತಾಯ್‌ನಿ ಸೊವೇತ್ನಿಕ್ ಗೊರೋಖೊವ್ ಹಾಗೂ ಸ್ತಾತ್‌ಸ್ಕಿ ಸೊವೇತ್ನಿಕ್ ಅರ್ದಾತೊವ್‌ರಂಥ ಜನರಿಗೆ ಲೆನಿನರ ಶಾಸನ ಎಷ್ಟು ಮಾತ್ರವೂ ಇಷ್ಟವಾಗಲಿಲ್ಲ. ಅವರು ದೇಶವನ್ನು ಬಿಟ್ಟು ಹೊರಹೋದರು. ಎಷ್ಟೋ ಉತ್ತಮ. ಅಂಥವರು ತೊಲಗಿದುದು ಒಳ್ಳೆಯದೇ ಆಯಿತು. ಲಿತೇಯ್ನಿ ಪ್ರಾಸ್ಪೆಕ್ಟ್‌ನ ಆ ಎತ್ತರವಾದ ಕಟ್ಟಡಕ್ಕೆ ಹೊಸ ಜನ ಬಂದರು- ದನೀಲ್ಕನ ತಂದೆತಾಯಿಯರಂಥ ಸಾಮಾನ್ಯ ಜನರು, ದುಡಿಯುವ ಜನರು. ಅವರು ಪ್ರಜೆಗಳಷ್ಟೆ ಅಲ್ಲ ಇಡೀ ದೇಶದ ಪ್ರಭುಗಳೂ ಆದರು. ❐

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಅಕ್ಟೋಬರ್ 29, 2004**
  ರೇಷನ್ ಕಾರ್ಡ್ ಸಂಖ್ಯೆ ಕಡಿತದ ವಿರುದ್ಧ ಕಾರ್ಡ್ ಇಲ್ಲದವರಿಗೆ ನೀಡಲು ಒತ್ತಾಯಿಸಿ ತಾಲ್ಲೂಕು ಕಚೇರಿಗಳ ಮುತ್ತಿಗೆ. ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ಕರೆ
- **ನವೆಂಬರ್ 2,3 ಮತ್ತು 4,2004**
  ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ ಮಂಗಳೂರಿನಲ್ಲಿ, ನವೆಂಬರ್ 4 ರಂದು ಬೃಹತ್ ರ್‍ಯಾಲಿ
  ಮುಖ್ಯ ಅತಿಥಿ : ಕಾಂ.ಮಹಮ್ಮದ್ ಅಮಿನ್, ಪಶ್ಚಿಮ ಬಂಗಾಳ ಸಾರಿಗೆ ಸಚಿವರು
- **ನವೆಂಬರ್ 3,2004**
  'ಭಾರತೀಯ ಕೋಮುವಾದ ಮತ್ತು ಸಾಮ್ರಾಜ್ಯವಾದದೊಂದಿಗಿನ ಸಂಬಂಧ ವಿಚಾರಸಂಕಿರಣ - ಮಂಗಳೂರು ಪುರಭವನ ಸಂಜೆ 5 ಗಂಟೆಗೆ
  ಭಾಗವಹಿಸುವವರು : ಪ್ರಕಾಶ್ ಕಾರಟ್, ಚಿತ್ತಬ್ರತ ಮಜುಂದಾರ್ ಡಾ.ಪಿ.ಹೆಚ್.ಧರ್ಮ, ಜಿ.ಎನ್.ನಾಗರಾಜ್
- **ನವೆಂಬರ್ 3,2004**
  ಡಿವೈಎಫ್ಐ ಬೆಳ್ಳಿಹಬ್ಬದ ಅಂಗವಾಗಿ 2 ಕೋಟಿ ಸಹಿ ಸಂಗ್ರಹದೊಂದಿಗೆ ದೆಹಲಿ ಚಲೊ
  ಸರ್ವರಿಗೂ ಶಿಕ್ಷಣ- ಸರ್ವರಿಗೂ ಉದ್ಯೋಗ, ಸಮಗ್ರ ಭೂಸುಧಾರಣೆ ಇತ್ಯಾದಿಗಳಿಗೆ ಒತ್ತಾಯಿಸಿ

ಸಾದರ ಸ್ವೀಕಾರ





ದುಡಿವ ಕೈಗಳ ಹೋರಾಟದ ಕತೆ	ಲೇ.ವಿಷ್ಣು ನಾಯ್ಕ	ಬೆಲೆ ರೂ.180
ಎಲೆ ಮರೆಯ ಹಣ್ಣುಗಳು	ಲೆ. ಗೀತಾ ವಿಶ್ವನಾಥ್	ರೂ.40
ಸಚಿತ್ರ ಸರಳ ವ್ಯಾಕರಣ	ಪ್ರೊ.ಬಿ.ಎಸ್.ರುಕ್ಕಮ್ಮ	ರೂ.80
ಲೈಂಗಿಕ ಸಾಮರಸ್ಯ	ಡಾ.ಪದ್ಮಿನಿ ಪ್ರಸಾದ್	ರೂ.95
ಮಿತ ಸಂತಾನಕ್ಕೆ ಸರಳ ಮಾರ್ಗಗಳು	ಡಾ.ಹೆಚ್. ಗಿರಿಜಮ್ಮ	ರೂ.20
ಅಪಾರ್ಥಿನಿ	ಲೇ.ಅಮೃತ ಸೋಮೇಶ್ವರ	ರೂ.30
ಸಂಶೋಧನೆಯ ಹಾದಿ	ಲೆ.ದೇವಿ ಪ್ರಸಾದ್ ಚಟ್ಟೋಪಾಧ್ಯಾಯ	ರೂ.40
ವಾರಾಣಾಸಿ	ಲೆ.ಎಂ.ಟಿ.ವಾಸುದೇವನ್ ನಾಯರ್	ರೂ.75
ಪ್ರಾಚೀನ ಭಾರತದಲ್ಲಿ ಶೂದ್ರರು	ಲೆ.ಆರ್.ಎಸ್.ಶರ್ಮ	ರೂ.90

ಪ್ರಕಾಶಕರು : ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560 001, ದೂರವಾಣಿ: 080-22203580-81-82

ಬೀದರ್: ಜಾತ್ಯಾತೀತ ಶಕ್ತಿಗಳು ವಹಿಸಬೇಕಾದ ಎಚ್ಚರ

ಕೋಮುವಾದಿಗಳನ್ನು ದೃಢತೆಯಿಂದ ಎದುರಿಸಬೇಕು

ಬೀದರ್ ಲೋಕಸಭಾ ಉಪಚುನಾವಣೆಯಲ್ಲಿ ಕೋಮುವಾದಿ ಬಿಜೆಪಿ ಸೋತಿದ್ದು ಅತ್ಯಂತ ಮಹತ್ವಪೂರ್ಣ ರಾಜಕೀಯ ಬೆಳವಣಿಗೆ. ಅತ್ತ ಮಹಾರಾಷ್ಟ್ರದಲ್ಲಿಯೂ ಬಿಜೆಪಿ-ಶಿವಸೇನೆ ಕೂಟ ನೆಲಕಚ್ಚಿ ಮುಖಭಂಗ ಅನುಭವಿಸುತ್ತಿರುವ ಸುದ್ದಿ ಬರುತ್ತಿರುವಾಗಲೇ ಆರನೇ ಬಾರಿಗೆ ಆಯ್ಕೆಯಾಗುವ ಅದರ ಕನಸನ್ನು ಮತದಾರರು ತಿರಸ್ಕರಿಸಿ, ನುಚ್ಚುನೂರು ಮಾಡಿದರು. ಈ ಹಿಂದೆ 5 ಬಾರಿ ಸತತವಾಗಿ ದಿ.ರಾಮಚಂದ್ರ ವೀರಪ್ಪನವರು ಅನಾಯಾಸವಾಗಿ ಆಯ್ಕೆಯಾಗುತ್ತಲೇ ಬಂದಿದ್ದರು. ಇದರ ಪರಿಣಾಮ ಆರು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಶಾಸಕರು ಆಯ್ಕೆಯಾಗಿ ಒಂದು ನೆಲೆ ನಿರ್ಮಿಸಿತ್ತು. ಮಾತ್ರವಲ್ಲ ಸಂಘಪರಿವಾರ ಇದನ್ನೇ ಬಳಸಿ ಆ ಪ್ರದೇಶದಲ್ಲಿ ಕೋಮುಗಲಭೆ ಹುಟ್ಟುಹಾಕಿ ದೃಢಗೊಳ್ಳಲು ಮುಂದಾಗಿತ್ತು. ತನಗೆ ಅದೊಂದು ಅಭೇದ್ಯ ಕೋಟೆ ಎಂದೇ ಭಾವಿಸಿದ್ದ ಬಿಜೆಪಿಯನ್ನು ಸೋಲಿಸಿದ್ದು, ಜಾತ್ಯಾತೀತ ಶಕ್ತಿಗಳ ವಿಜಯವೇ ಆಗಿದೆ.

ಎಲ್ಲರನ್ನೂ, ಎಲ್ಲಾ ಕಾಲಕ್ಕೂ ಸದಾ ಮೋಸ ಮಾಡಲಾಗದು ಎಂಬ ಪ್ರಸಿದ್ಧಿ ಮಾತಿದೆ. ಆರಿಸಿ ಹೋದ ಮೇಲೆ ಜನತೆಯ ಕಷ್ಟ ಕೇಳಬೇಕಿಲ್ಲ, ಅತ್ಯಂತ ಹಿಂದುಳಿದ, ಬಸವಳಿದ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ಕಾಳಜಿಯೇ ಇಲ್ಲ. ಅಭಿವೃದ್ಧಿಗಾಗಿ ಬಂದ ಹಣ ಖರ್ಚಾಗದೇ ಹೋದರೂ, ಕುಡಿವ ನೀರಿಲ್ಲದೇ ತತ್ತರಿಸಿದರೂ ನಡೆಯುತ್ತದೆ. ಜಾತಿ-ಮತ ಧರ್ಮದ ಒಡಕಿನ ರಾಜಕಾರಣವನ್ನು ಜನ ಅಂಗೀಕರಿಸಿಬಿಟ್ಟಿದ್ದಾರೆ. ಮುತ್ಸಾನ ನಾಮದ ಬಲ, ಮೇಲ್ಜಾತಿಗಳ, ಜಮೀನ್ದಾರರ ಬೆಂಬಲವೊಂದೇ ಸಾಕು ಎಂಬಂತಹ ಜನವಿರೋಧಿ ರಾಜಕಾರಣವನ್ನು ಈ ಬಾರಿ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ.

ವಿಶೇಷವೆಂದರೆ ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಸೋತು ಹೋದ ಬಳಿಕ ಒಂದು ಜವಾಬ್ದಾರಿ ವಿರೋಧ ಪಕ್ಷವಾಗಿ ಕೆಲಸ ಮಾಡದೇ ಕಾಲುಕೆದರಿ ದುರುದ್ದೇಶಪೂರಿತ ಜಗಳ ತೆಗೆದು ಪಾರ್ಲಿಮೆಂಟ್ ಕಲಾಪಗಳನ್ನು ಹಾಳುಗೆಡಹುತ್ತಲೇ ಬಂತು. ಬಿಜೆಪಿ, ಜನರ ಸಮಸ್ಯೆಗಳನ್ನು ಸಂಸತ್ತಿನಲ್ಲಿ ಎತ್ತದೇ, ಎತ್ತಲೂ ಅವಕಾಶ ಕೊಡದೇ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ಕೆಲಸ ಮಾಡುತ್ತಲೇ ಬಂತು. ಇದನ್ನು ಜನ ಒಪ್ಪಲಿಲ್ಲ. ಮೇಲಾಗಿ ಮತದಾರರ ಜನಾದೇಶವನ್ನು ಸರಿಯಾಗಿ ಅರಿತು (ಬೇಕೆಂದೇ ಮರೆತು) ಪಾಠ ಕಲಿಯದೇ ಇನ್ನೂ ಕೋಮು ಉನ್ಮತ್ತತೆ ಹೆಚ್ಚಿಸಲು, 'ಹಿಂದುತ್ವ'ಕ್ಕೆ ಮರಳುವುದಾಗಿ ಘೋಷಿಸಿತು. ಇದಕ್ಕೂ ಜನ ಮರುಳಾಗಲಿಲ್ಲ. ಅದನ್ನು ದೃಢವಾಗಿ ವಿರೋಧಿಸಿದ್ದಾರೆ, ತಿರಸ್ಕರಿಸಿದ್ದಾರೆ.

ಈ ಚುನಾವಣೆಯಲ್ಲಿನ ಮತದಾನದ ಅಂಕಿ-ಅಂಶಗಳು ಕುತೂಹಲಕಾರಿಯಾಗಿವೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಶೇ.38.35 ಮತಗಳಿಸಿದ್ದಾರೆ. ಈ ಬಾರಿ ಶೇ 29.98ಗಳಾಗಿವೆ. ಅಂದರೆ ಶೇ 8.37 ರಷ್ಟು ಮತಗಳನ್ನು ಕಳೆದುಕೊಂಡಿದೆ. ಇದು ಗಣನೀಯ ಅಂಶ. ಗೆದ್ದಿರುವ ಕಾಂಗ್ರೆಸ್ ಪಕ್ಷ ಶೇ 32.19 ಮತ ಪಡೆದಿದೆ. ಕಳೆದ ಬಾರಿ ಶೇ 35.45 ರಷ್ಟಿದ್ದು ಈ ಸಲ ಶೇ 3.26 ರಷ್ಟು ಮತಗಳು ಕುಸಿದಿವೆ. ಆದರೆ ಜಾತ್ಯಾತೀತ ಜನತಾದಳ ಶೇ 21.24 ರಿಂದ ಶೇ 27.32 ಕ್ಕೆ ಅಂದರೆ ಶೇ 6.08 ಮತಗಳನ್ನು ಹೆಚ್ಚಿಸಿಕೊಂಡಿದೆ. ಹಿಂದೆ ಹಲವು ಕಾರಣಗಳಿಗಾಗಿ ಬಿಜೆಪಿಯನ್ನು ಬೆಂಬಲಿಸಿದ್ದ ಮತದಾರರು ಈ ಬಾರಿ ಸ್ಪಷ್ಟವಾಗಿ ಅದನ್ನು ತಿರಸ್ಕರಿಸಿದ್ದಾರೆ. ಮತದಾನ ಮಾಡಲೂ ಅವರ ಬೆಂಬಲಿಗರು ಪೂರ್ತಿಯಾಗಿ ಬಂದಿಲ್ಲ. ನಿಜ ಅರ್ಥದಲ್ಲಿ ಹಿಂದೆ ಬಿಜೆಪಿ ಗಳಿಸಿದ ಬೆಂಬಲವು ಕಾಂಗ್ರೆಸ್‌ನ-ಎಸ್.ಎಂ.ಕೃಷ್ಣರ ಸರ್ಕಾರದ ನೀತಿಗಳ ವಿರುದ್ಧದ ಮನೋಭಾವದ ಫಲವಾಗಿದೆ.

ಈ ಚುನಾವಣೆಯಲ್ಲಿ ಜೆ.ಡಿ(ಎಸ್) ಮತಗಳ ಪ್ರಮಾಣ ಹೆಚ್ಚಿಸಿಕೊಂಡಿದೆ. ಆಳಂದ, ಬಸವಕಲ್ಯಾಣ, ಹುಮ್ನಾಬಾದ್ ಕ್ಷೇತ್ರಗಳಲ್ಲಿ ಅದರ ಶಾಸಕರಿದ್ದಾರೆ. ಈ ಸಲ ವಿಶೇಷವಾಗಿ ಬೀದರ್‌ನಿಂದ ಗೆದ್ದಿದ್ದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ - ಪಕ್ಷೇತರ ಶಾಸಕ ಬಂಡೆಪ್ಪನವರು ದಳಕ್ಕೆ ಬೆಂಬಲಿಸಿದರು. ಕಾಂಗ್ರೆಸ್ ವಿರೋಧದ ಬಹಳಷ್ಟು ಮತಗಳು ಬಿಜೆಪಿಗೆ ಹೋಗದೇ ಜೆಡಿ(ಎಸ್) ನತ್ತ ಬಂದಿರುವುದು ಗಮನಾರ್ಹ. 'ಕೋಮುವಾದಿಗಳನ್ನು ಸೋಲಿಸಲು ಜೆ.ಡಿ(ಎಸ್) ಸಹ ಮುಖ್ಯ ಪಾತ್ರ ವಹಿಸಿದೆ ಎಂಬ ನಮ್ಮ ಪ್ರದೇಶ ನಮ್ಮ ಅಸ್ತಿತ್ವವನ್ನು ತೋರಿಸಲು ಸಾಧ್ಯವಾಗಿದೆಯೆಂಬ ಮಾತನ್ನು ಅದರ ನಾಯಕರು ಆಡಿದ್ದಾರೆ.

ಈ ಕ್ಷೇತ್ರದಲ್ಲಿ ಬಿಜೆಪಿ ಸೋತಿರುವುದಕ್ಕೆ ಮಹತ್ವವಿದೆ. ತಿರಂಗಯಾತ್ರೆ ಸಾವರ್ಕರ್ ವಿವಾದ, ಯಡಿಯೂರಪ್ಪ ಹುಟ್ಟುಹಬ್ಬದ ಮೂಲಕ ಕರ್ನಾಟಕದಲ್ಲಿ ತಾನೇ ಪ್ರಬಲ, ಪರ್ಯಾಯ ಶಕ್ತಿ ಎಂದು ತೋರಿಸಿಕೊಳ್ಳಲು ಹೆಣಗಿದ್ದರೂ ಜನ ಮರುಳಾಗಿಲ್ಲ. ಇಲ್ಲಿ ಸ್ಥಾನ ಕಳೆದುಕೊಂಡದ್ದು ರಾಷ್ಟ್ರ ಮಟ್ಟದಲ್ಲಿಯೂ ಬಿಜೆಪಿಗೆ ಮುಖಭಂಗ ಅನುಭವಿಸುವ, ಪರಿಣಾಮ ಬೀರಿದೆ.

ಇನ್ನೊಂದೆಡೆ ಕಾಂಗ್ರೆಸ್ ಜೆಡಿ(ಎಸ್)ನ ಮೈತ್ರಿಕೂಟದ ಸರ್ಕಾರವನ್ನು ಕಾದು ನೋಡಲು ಜನ ಬಯಸಿದ್ದಾರೆ ಎಂಬುದೂ ಆಗಿದೆ. ಒಟ್ಟಾರೆ

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

14ನೇ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಎನ್‌ಡಿಎನ ದೇಶದ್ರೋಹಿಕೂಟದ ವಿರುದ್ಧ ಜನತೆಯ ಆಕ್ರೋಶ ಮುಂದುವರಿದಿರುವುದನ್ನು ತೋರಿಸುತ್ತದೆ. ಒಂದು ವೇಳೆ ಬೀದರ್ ಮತ್ತು ಮಹಾರಾಷ್ಟ್ರದಲ್ಲಿ ಬಿಜೆಪಿ ಗೆದ್ದಿದ್ದರೆ ಅದರ ಆಟಾಟೋಪಕ್ಕೆ ಮಿತಿ ಇರುತ್ತಿರಲಿಲ್ಲ. ಪ್ರಪಂಚವನ್ನೇ ಗೆದ್ದಂತೆ ಆಡುತ್ತಿತ್ತಲ್ಲದೆ ಯಡಿಯೂರಪ್ಪನವರು ಕೂಡಲೇ ಚುನಾವಣೆಗಳಿಗೆ ಆಗ್ರಹಿಸಿ ಬಿಡುತ್ತಿದ್ದಾರೇನೋ? ಇಂತಹ ರಾಜಕೀಯ ಮಹತ್ವವಿದ್ದದರಿಂದಲೇ ಜೆ.ಡಿ(ಎಸ್) ಕಾಂಗ್ರೆಸ್ - ನಡುವೆ ಸಹಮತ ಏರ್ಪಟ್ಟು, ಸೆಕ್ಯೂಲರ್ ಮತಗಳು ಒಡೆಯದಂತೆ ಬಿಜೆಪಿ ಸೋಲಿಸುವಲ್ಲಿ ಕಾರ್ಯವೆಸಗಬೇಕೆಂದು ನಿರೀಕ್ಷಿಸಿದ್ದು. ಈ ಕ್ಷೇತ್ರದಲ್ಲಿ ಸಿಪಿಐ(ಎಂ)ನ ಶಕ್ತಿಯೂ ಗಣನೀಯವಾಗಿದ್ದು ಬಿಜೆಪಿಯನ್ನು ಸೋಲಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.

ಈ ಚುನಾವಣೆಯಲ್ಲಿ ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಮತದಾರ ಅತ್ಯಂತ ನಿರಾಸಕ್ತಿ ತೋರಿಸಿರುವುದು. ಮಧ್ಯಾಹ್ನವಾದರೂ ನೀರಸ ಮತದಾನ ಕಂಡಿತು. ಮತದಾನ ಪೂರ್ತಿ ಆದಾಗ ಅದು ಶೇ.42ನ್ನು ದಾಟಲಿಲ್ಲ. ಅಂದರೆ ಶೇ.58 ಜನ ಮತದಾನಕ್ಕೆ ಬರದೇ ವಿರೋಧ ವ್ಯಕ್ತಪಡಿಸಿದ್ದಾರೆ. ಬೇಸರ ತೋರಿದ್ದಾರೆ (ಅಂದು ಹಬ್ಬವಿತ್ತು ಎಂಬುದು ಸಣ್ಣ ಸತ್ಯ ಮಾತ್ರ) ಜನರ ಈ ಇಂಗಿತವನ್ನು ಎಲ್ಲಾ ಪಕ್ಷಗಳೂ ಪರಿಗಣಿಸಬೇಕು. ಇಂತಹ ಮನೋಭಾವದ ಪ್ರತೀಕವಾಗಿ ಜಾತಿ ಸೂತ್ರದ ಫಲವಾಗಿ ಬಿಎಸ್‌ಪಿ ಪಕ್ಷ 36013 ಮತ ಪಡೆದಿರುವುದು ಜಾತಿ ರಾಜಕಾರಣದ ಇನ್ನೊಂದು ಮುಖವನ್ನು ತೋರಿಸುತ್ತದೆ.

ಬಿಜೆಪಿಯನ್ನು ಜನ ತಿರಸ್ಕರಿಸುವಾಗಲೇ ಮೈತ್ರಿಕೂಟದ ಸರ್ಕಾರಕ್ಕೆ ಕಡು ವಿರೋಧ ಇಷ್ಟು ಬಹುವಾಗಿ ಕಾಣದಿದ್ದರೂ ಮತದಾರರಲ್ಲಿ ಯಾವುದೇ ಉತ್ಸಾಹ, ಆದರ ಸೃಷ್ಟಿಗೊಂಡಿಲ್ಲ, ಜನರ ನಿರೀಕ್ಷೆಯ ಹುಂಕಕ್ಕೂ ಎಳಸಿಲ್ಲ, ಈ ಸರ್ಕಾರ ಇನ್ನೂ ಜನರಿಗೆ ಪರಿಹಾರ ಒದಗಿಸಿ ಅವರೊಂದಿಗೆ ಇದ್ದೇವೆ ಎಂಬ ಪೂರ್ಣ ಪ್ರಮಾಣದ ಆಡಳಿತ ಮಾಡದೇ ಹೋಗುವ ಸ್ಥಿತಿಗೆ ಮತದಾರರ ಪ್ರತಿಕ್ರಿಯೆ ತೋರಿದ್ದಾರೆ. ಇಂತಹ

2004 ಸಾರ್ವತ್ರಿಕ ಚುನಾವಣೆ (ಲೋ.ಸ) ಮತಗಳಿಕೆ			2004 ಉಪಚುನಾವಣೆ ಅಕ್ಟೋಬರ್	
ಬಿಜೆಪಿ	312838	ಶೇ38.35	1,83447	ಶೇ 29.98
ಕಾಂಗ್ರೆಸ್	289217	ಶೇ 35.45	1,96,917	32.19
ಜೆ.ಡಿ(ಎಸ್)	1,73,291	ಶೇ 21.24	1,67,128	(-3.26)
ಬಿ.ಎಸ್.ಪಿ	-		36,013	ಶೇ 27.32
ಇತರೆ	40,446	ಶೇ 4.96	28,279	(+6.08)(ಶೇ 5.89)
	8,15,792		6,11,784	ಶೇ-4.62
ಗೆಲುವಿನ ಅಂತರ : 13,470				

ಸನ್ನಿವೇಶದಲ್ಲಿಯೂ ಜನತೆ ಕೋಮುವಾದಿಗಳಿಗೆ ನೀಡಿದ ಪ್ರಹಾರ ಹಾಗೂ ಜಾತ್ಯಾತೀತ ಶಕ್ತಿಗಳಿಗೆ ಪುರಸ್ಕಾರ ಈ ಫಲಿತಾಂಶ. ಕಾಂಗ್ರೆಸ್ ಅಧ್ಯಕ್ಷ ಧರಂಸಿಂಗ್ ಇದು ತಮ್ಮ ಸಾಧನ ಎಂಬಂತೆ ಬೀಗಿ ಮೈ ಮರೆತಲ್ಲಿ ಮುಂದೆ ಬೆಲೆ ತೆರಬೇಕಾದೀತು. ಬಿಜೆಪಿ ಅತೃಪ್ತಿ ಬಳಸುವ ಅಪಾಯ ಇದ್ದೇ ಇದೆ. ಗೆದ್ದ ಮತಗಳ ಅಂತರವೂ ಕೇವಲ 13,500 ಮಾತ್ರ ಎಂಬುದು ಗಮನಿಸಬೇಕು.

ಈ ಚುನಾವಣೆಯಲ್ಲಿ ಮತದಾರರು ನೀಡಿದ ತೀರ್ಪನ್ನು ಎಲ್ಲಾ ಜಾತ್ಯಾತೀತ ಪಕ್ಷಗಳೂ ಗಂಭೀರವಾಗಿ ಪರಿಗಣಿಸಿ ರಾಜ್ಯದಲ್ಲಿ ಬಿಜೆಪಿ ಹಾಗೂ ಸಂಘಪರಿವಾರದ ಕೋಮುವಾದಿ ಆಕ್ರಮಣವನ್ನು ಅತ್ಯಂತ ದೃಢತೆಯಿಂದ ಎದುರಿಸಲು ಮುಂದಾಗಬೇಕು.

ವೀರಪ್ಪನ್ ಹತ್ಯೆಯಾಯಿತು ಇನ್ನು STF ವಿಸರ್ಜಿಸಿ

ಮೂರು ದಶಕಗಳಿಂದಲೂ ಅಟ್ಟಹಾಸದಿಂದ ಮೆರೆಯುತ್ತಿದ್ದ ಕುಖ್ಯಾತ ಕಾಡುಗಳ್ಳ, ನರಹಂತಕ ವೀರಪ್ಪನ್‌ನನ್ನು ಕಾರ್ಯಾಚರಣೆಯಲ್ಲಿ ಎಸ್.ಟಿ.ಎಫ್ ಪೊಲೀಸರು ಹತ್ಯೆಗೈದಿದ್ದಾರೆ. ತಮಿಳುನಾಡಿನ ಧರ್ಮಾಪುರಂ ಜಿಲ್ಲೆಯ ಸತ್ಯಮಂಗಲದ ಬಳಿಯ ಪಾಪರಪಟ್ಟಿ ಅರಣ್ಯ ಪ್ರದೇಶದಲ್ಲಿ ಅಕ್ಟೋಬರ್ 18 ರಂದು ರಾತ್ರಿ 11 ರ ಸುಮಾರಿಗೆ ನಡೆದ ಕಾರ್ಯಾಚರಣೆಯಲ್ಲಿ ವೀರಪ್ಪನ್ ಜೊತೆಗೆ ಆತನ ಬಲಬಂಟರಾದ ಸೇತುಕುಳಿ ಗೋವಿಂದ, ಚಂದ್ರ ಗೌಂಡರ್, ಸೇತುಮಲೈ ಸಹ ಹತ್ಯೆಯಾಗಿದ್ದಾರೆ. ತಮಿಳುನಾಡು ಮತ್ತು ಕರ್ನಾಟಕದ ವಿಶೇಷ ಕಾರ್ಯಪಡೆಯ ಜಂಟಿ ಕಾರ್ಯಾಚರಣೆಯು ಕೊನೆಗೂ ಕಾಡುಗಳ್ಳನನ್ನು ಮಟ್ಟಹಾಕಿತು. ಇದು ಸಾಧನೆ ನಿಜ.

ವೀರಪ್ಪನ್‌ನ ಹತ್ಯೆ ಹೇಗಾಯಿತು? ನಿಜಕ್ಕೂ ಪರಸ್ಪರರಲ್ಲಿ ಗುಂಡಿನ ಚಕಮಕಿ ನಡೆಯಿತೆ? ನಿಜ ಸಂಗತಿಗಳೇನು ಎಂಬ ಪ್ರಶ್ನೆ ಎದ್ದಿದೆ. ಹತ್ತಿರದಿಂದಲೇ ಹತ್ಯೆ ಮಾಡಿರುವ ಅನುಮಾನ ವ್ಯಕ್ತಪಡಿಸಿದ್ದಾರೆ. ಆತನನ್ನು ಯಾಕೆ ಸೆರೆಹಿಡಿಯಲಿಲ್ಲ. ಹಿಡಿಯಬಹುದಿತ್ತು ಎಂದಿದ್ದಾರೆ ಅನೇಕರು. ಜೀವಂತ ಹಿಡಿದಿದ್ದರೆ ಆತನ ವ್ಯವಹಾರ, ಆತನೊಂದಿಗಿನ ಉನ್ನತ ವ್ಯಕ್ತಿಗಳು, ರಾಜಕಾರಣಿಗಳು, ಅಧಿಕಾರಿಗಳ ಸಂಬಂಧಗಳು ಹೊರಬರುತ್ತಿದ್ದವು. ಅದಕ್ಕೆ ಮುಗಿಸಲಾಗಿದೆ ಎಂಬ ಅನಿಸಿಕೆ ಬಲವಾಗಿದೆ. ಅಲ್ಲಿನ ನಿಜ ಸಂಗತಿಗಳ ಬಗ್ಗೆ ಈಗಲೇ ವಿಷಯಗಳು ಹೊರಬರುವುದು ಕಷ್ಟ. ಕಾಲಕ್ರಮೇಣ ವಿಷಯವೆಲ್ಲಾ ಹಳಸಲಾದ ಮೇಲೆ ಒಂದೊಂದಾಗಿ ಹೊರಬಂದಾವು. ಬರದೇ ಹೋದಾವು! ಅಂತೂ ಈ ಬಾರಿ ಎರಡು ಕಡೆಯ ಜಂಟಿ ಪಡೆಗಳು ಬಹಳ ಸಮನ್ವಯದಿಂದ ಕೆಲಸ ಮಾಡಿವೆ. ತುಂಬಾ ಚಾಣಾಕ್ಷತನದಿಂದ ಆತನನ್ನು ಬಲೆಗೆ ಬೀಳಿಸಿಕೊಳ್ಳಲಾಗಿದೆ. ಕಾಡಿನಿಂದ ಹೊರಗೆಳೆದು ಸದೆಬಡಿಯಲಾಗಿದೆ ಒಳ್ಳೆಯದೆ.

ಆದರೆ ಇಂತಹ ಒಬ್ಬ ಕಾಡುಗಳ್ಳನನ್ನು ಬಲಿಹಾಕಲು ಇಷ್ಟು ವರುಷಗಳು ಬೇಕಿತ್ತೇ? ಯಾಕೆ ಈ ವಿಳಂಬ? ಇಚ್ಛಾ ಶಕ್ತಿಯ ಕೊರತೆ - ದೌರ್ಬಲ್ಯಗಳೇನು? ಸಂದರ್ಭಸಾಧಕ, ಭ್ರಷ್ಟ ಸಂಬಂಧಗಳು ಎಂಬ ಪ್ರಶ್ನೆಗೆ ಸರ್ಕಾರವಾಗಲಿ ಕಾರ್ಯಪಡೆಯ ಮುಖ್ಯಸ್ಥರಾಗಲೀ ಉತ್ತರಿಸುತ್ತಿಲ್ಲ ಅವರ ಮೌನವೇ ಅನೇಕ ಅರ್ಥಗಳನ್ನು, ಸತ್ಯಗಳನ್ನು ಹೊರಡಿಸುತ್ತದೆ.

ಇದರೊಂದಿಗೆ ವೀರಪ್ಪ ನನ್ನು ಮುಗಿಸಲಾಯಿತು. ಇಲ್ಲಿಗೆ ಕಾಡುಗಳ್ಳನ ಹಾವಳಿ ಮುಗಿಯಿತು ಎಂದು ನಿಟ್ಟುಸಿರು ಬಿಡಲಾಗುತ್ತಿದೆ. ಕಾರ್ಯಪಡೆಗೆ ಬಹುಮಾನಗಳ ಘೋಷಣೆ ಆಗುತ್ತಲಿದೆ.



ಏಳುವ ಪ್ರಶ್ನೆ ಎಂದರೆ : ವೀರಪ್ಪನ್‌ನ ಅಂತ್ಯ 'ವೀರಪ್ಪನ್‌ಗಳ' ಅಂತ್ಯವೇ? ಹಾಗಾಗಲಿಕ್ಕಿಲ್ಲ. ವೀರಪ್ಪನ್ ಸೃಷ್ಟಿಗೊಂಡದ್ದೇ ವ್ಯವಸ್ಥೆಯ ಫಲ ಪರಿಣಾಮ. ಕಾಡಿನಲ್ಲಿ ದೊರೆಯುವ ಅಮೂಲ್ಯ ಅರಣ್ಯ ಸಂಪತ್ತು ಗಂಧ, ಇತ್ಯಾದಿ ಬೆಲೆಬಾಳುವ ಮರಗಳು, ಕಾಡಿನ ಅಮೂಲ್ಯ ಉತ್ಪನ್ನಗಳು, ಆನೆದಂತ, ಪ್ರಾಣಿಗಳ ಚರ್ಮ, ಆನೆ ದಂತಗಳ ಕಳ್ಳಸಾಗಾಣಿಕೆ ನಡೆಸಿ, ಲೂಟಿ ಮಾಡಲು ವೀರಪ್ಪನ್‌ನಂತಹ ಚೋರರು ಆಳುವ ವರ್ಗಕ್ಕೆ ಬೇಕಿತ್ತು. ಬಲಪಂಥೀಯ ರಾಜಕೀಯ ಮುಖಂಡರು ಅಧಿಕಾರಿಗಳು ಇಂತಹವರನ್ನು ಪೋಷಿಸುತ್ತಾರೆ, ರಕ್ಷಿಸುತ್ತಾರೆ. ವೀರಪ್ಪನ್ ವಿಷಯದಲ್ಲಿಯೂ ಆದದ್ದು ಹೀಗೆ.

ಇಂತಹವರು ಸಂವಿಧಾನ, ಕಾನೂನು, ಸಮಾಜಕ್ಕೆ ಕಂಟಕರಾಗಿ, ಸವಾಲು ಹಾಕಿ ನಿಲ್ಲುತ್ತಾರೆ. ಅಮಾಯಕರು ಇದಕ್ಕೆ ಬಲಿ, ಅಮೂಲ್ಯ ಸಂಪತ್ತಿನ ಲೂಟಿ.

ಆದ್ದರಿಂದಲೇ 'ವೀರಪ್ಪನ್'ಗಳ ಅಂತ್ಯ ಹಾಡಲು ಈ ಸರ್ಕಾರಗಳು ಸಿದ್ಧವೇ? ಎಂಬ ಪ್ರಶ್ನೆ. ಅಂತಹವರು ಹೊಸ ಹುಟ್ಟು ಪಡೆಯದಂತೆ ಆಗಬೇಕು.

ಜನ ಎತ್ತಿದ ಅನುಮಾನ-ಆತನೊಂದಿಗಿನ ಸಂಬಂಧಗಳ ಬಗ್ಗೆ ತನಿಖೆ ನಡೆಸಲು ಮುಖ್ಯಮಂತ್ರಿ, ಧರಂಸಿಂಗ್ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಪೂಜಾರಿ ವಿರೋಧಿಸಿದ್ದಾರೆ.! ಮುಖ್ಯಮಂತ್ರಿಗಳ ಇರಾದೆಯಲ್ಲಿ ಪ್ರಾಮಾಣಿಕತೆ ಇದ್ದೀತೆ? ಕಾದು ನೋಡಬೇಕು. ಆದರೆ ಅಂತಹ ತನಿಖೆ ತಪ್ಪದೇ ವಸ್ತುನಿಷ್ಠವಾಗಿ ನಡೆದು ನಿಷ್ಠುರ ಕ್ರಮ ಜರುಗಬೇಕು. ನಿಜ ಸಂಗತಿಗಳು ಜನರ ಮುಂದೆ ಬರಬೇಕು.

ಇದೇ ಸಂದರ್ಭದಲ್ಲಿ ವಿಶೇಷ ಕಾರ್ಯಾಚರಣೆಡೆಯನ್ನು ಏನು ಮಾಡೋದು? ಅದನ್ನು ವಿಸರ್ಜಿಸಬೇಕೆ? ಅಥವಾ ಮುಂದುವರೆಸಿ ಪಶ್ಚಿಮ ಘಟ್ಟದಲ್ಲಿನ ನಕ್ಸಲೀಯರ ವಿರುದ್ಧ ಕಾರ್ಯಾಚರಣೆಗೆ ಬಳಸಬೇಕೆ ಎಂದು ಚರ್ಚೆ ಎದ್ದಿದೆ. ಇದು ಅಪಾಯಕಾರಿ ಚಿಂತನೆ. ವೀರಪ್ಪನ್ ಪ್ರಕರಣಕ್ಕೆ ನಿಯಮಿಸಿದ್ದ ಈ ಪಡೆಯನ್ನು ಆ ಕಾರ್ಯ ಮುಗಿದಿರುವುದರಿಂದ ಪಡೆಯನ್ನು ವಿಸರ್ಜಿಸಬೇಕು. ಉದಾರೀಕರಣ-ಜಾಗತೀಕರಣದ ಸಂದರ್ಭದಲ್ಲಿ ಇಂತಹ ಕಾರ್ಯಪಡೆಗಳ ರಚನೆ-ಉಳಿಸಿಕೊಳ್ಳುವುದು ಪ್ರಜಾಸತ್ತೆ, ಜನತೆಯ ಹೋರಾಟಕ್ಕೆ ಅಪಾಯಕಾರಿಯಾದುದು. ಈಗೇನೋ ಆ ಪಡೆಗಳನ್ನು ಪಶ್ಚಿಮಘಟ್ಟಕ್ಕೆ ಕಳಿಸುವುದಿಲ್ಲ ಎಂದಿದ್ದಾರೆ ಧರಂಸಿಂಗ್. ಅಷ್ಟು ಮಾತು ಸಾಲದು, ಅವುಗಳನ್ನು ವಿಸರ್ಜಿಸಲೇಬೇಕು.

ಬೀಡಿ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ ಮಂಗಳೂರು ಸಿದ್ಧತೆ

ಹಲವಾರು ಧೀಮಂತ ಹೋರಾಟಗಳ ಪರಂಪರೆಯಿರುವ ಕರಾವಳಿಯಲ್ಲಿ ಬೀಡಿ ಕಾರ್ಮಿಕರ ರಾಷ್ಟ್ರಮಟ್ಟದ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಿದ್ಧತೆಗಳು ಭರದಿಂದ ನಡೆದಿವೆ. ಬೀಡಿ ಕಾರ್ಮಿಕರೇ ಅತ್ಯಧಿಕವಾಗಿರುವ ಮಂಗಳೂರಿನಲ್ಲಿ ಅರ್ಥಪೂರ್ಣಗೊಳಿಸಲು ಹಲವಾರು ಕಾರ್ಯಯೋಜನೆ ರೂಪುಗೊಂಡಿದೆ.


ಬಿ. ಮಾಧವ

ಕರಾವಳಿಯ ಮಂಗಳೂರು ನಗರ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟ (ಸಿಐಟಿಯು)ದ 4ನೇ ಸಮ್ಮೇಳನ ನಡೆಸಲು ಸಜ್ಜಾಗಿ ನಿಂತಿದೆ. 2004ರ ನವೆಂಬರ್ 2 ರಿಂದ 4ರ ತನಕ ಈ ಸಮ್ಮೇಳನ ನಡೆಯಲಿದೆ. ನಗರದ ಗೋಡೆಗಳಲ್ಲಿ ಆಕರ್ಷಕ ಬರಹಗಳಿಂದ, ಚಿತ್ರಗಳಿಂದ ಸಮ್ಮೇಳನ ಸಂದೇಶಗಳನ್ನು ಬಿತ್ತರಿಸಲಾಗಿದೆ. ದಕ್ಷಿಣ ಕನ್ನಡದ ಮುಖ್ಯ ಸ್ಥಳಗಳಲ್ಲಿ ಬ್ಯಾನರು, ಬಾವುಟಗಳಿಂದ ಸಿಂಗರಿಸಲಾಗಿದೆ. ಮಹಿಳಾ ಕಾರ್ಮಿಕರಿಂದಲೇ ತುಂಬಿರುವ ಬೀಡಿ ಕೈಗಾರಿಕೆಯ ಕಾರ್ಮಿಕರನ್ನು ಆಕರ್ಷಿಸುವ, ಸ್ಫೂರ್ತಿ ನೀಡುವ ರೀತಿಯ ತಯಾರಿಗಳು ನಡೆಯುತ್ತಿವೆ.

ಮಂಗಳೂರಿಗೆ ಬೀಡಿ ಕಾರ್ಮಿಕರ ವೀರ ಹೋರಾಟ ನಡೆಸಿರುವ ಪರಂಪರೆ ಇದೆ. ಮಹಿಳೆಯರೇ ಈ ಹೋರಾಟವನ್ನು ನಡೆಸಿದ್ದಿದೆ. ಮಂಗಳೂರಿನಲ್ಲಿ ಬೀಡಿ ಕಾರ್ಮಿಕರ ಮಧ್ಯೆ ಟ್ರೇಡ್ ಯೂನಿಯನ್ ಸ್ಥಾಪಿಸಿದವರೇ ಮಹಿಳೆಯರು ಎನ್ನಬಹುದು. ಅದು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅಲ್ಲದೆ ಬೇರೆ ಯಾರೂ ಅಲ್ಲ. ದೇಶದ ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ಅವರ ಹೆಸರು ದೊಡ್ಡದು. 1934ರ ಕಾಲಘಟ್ಟದಲ್ಲಿ ಶ್ರೀಮತಿ ಕಮಲಾದೇವಿಯವರು ಶ್ರೀಮಂತ ಮನೆತನದಿಂದ ಬಂದಿದ್ದು ಸಮಾಜವಾದಿ ಕಾಂಗ್ರೆಸ್ ಪಕ್ಷದ ನಾಯಕಿಯಾಗಿದ್ದರು. ಬೀಡಿ ಕಾರ್ಮಿಕರನ್ನು ಸಂಘಟಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಅವರನ್ನು ಆಕರ್ಷಿಸುತ್ತಿದ್ದರು. ಮಂಗಳೂರಿನ ಬೀಡಿ ಕಾರ್ಮಿಕರು ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಬೀಡಿ ಫ್ಯಾಕ್ಟರಿಯಲ್ಲಿ ಬರೀ ಪುರುಷ ಕಾರ್ಮಿಕರೇ ದುಡಿಯುತ್ತಿದ್ದರು. ಆದರೆ ಸ್ವಾತಂತ್ರ್ಯ ಸಿಕ್ಕಿದ ನಂತರ ಸರಕಾರ 1948ರಲ್ಲಿ ಕಾರ್ಮಿಕ ಸಂಘಟನೆಗಳ ಮುಖಂಡರನ್ನು ಬಂಧಿಸಿ ಜೈಲಿಗೆ ಕಳುಹಿಸಿದರು. ಬೀಡಿ ಉದ್ದಿಮೆಯ ಮಾಲೀಕರು ಈ ಪರಿಸ್ಥಿತಿ ಲಾಭ ಪಡೆದು ಫ್ಯಾಕ್ಟರಿಯಂತಿದ್ದ ಬೀಡಿ ಉದ್ದಿಮೆಯನ್ನು ಮುಚ್ಚಿ, ಮನೆ ಕೆಲಸ ಆಧಾರದಲ್ಲಿ ಬೀಡಿ ಕಟ್ಟಿಸುವ ಪದ್ಧತಿಯನ್ನು ಪ್ರಾರಂಭಿಸಿದರು. ಇದರಿಂದಾಗಿ ಮಹಿಳೆಯರು ಮನೆ ಮನೆಗಳಲ್ಲಿ ಬೀಡಿ ಸುತ್ತಲು ಅವಕಾಶ ಆಯಿತು. ಪ್ರಸ್ತುತ ಸುಮಾರು ಶೇ.95 ಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಬೀಡಿ ಉದ್ಯಮದಲ್ಲಿ ದುಡಿಯುವವರು ಮಹಿಳೆಯರು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಕೇಂದ್ರವಾಗಿ ಬೀಡಿ ಕಾರ್ಮಿಕರು ಅಸಂಖ್ಯಾತ ಧೀರ ಹೋರಾಟ ನಡೆಸಿದ್ದಾರೆ, ಗೂಂಡಾ ಮತ್ತು ಪೊಲೀಸ್ ಧಾಳಿಗಳಿಗೆ ಈಡಾಗಿದ್ದಾರೆ.

ಶಾಸಕ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ತಯಾರಿ ನಡೆಸುತ್ತಿದೆ. ಹಲವಾರು ಉಪ ಸಮಿತಿಗಳು ತಮ್ಮ ಕೆಲಸ ನಿರ್ವಹಿಸುತ್ತಿವೆ. ಪ್ರತಿನಿಧಿ ಅಧಿವೇಶನ ನಡೆಯುವ ಸ್ಥಳಕ್ಕೆ ಕಾಮ್ರೇಡ್ ಪಿ.ರಾಮಚಂದ್ರರಾವ್ ನಗರ ಎಂದು ಹೆಸರಿಸಲಾಗಿದೆ. ಸಮ್ಮೇಳನ ನಡೆಯುವ ದೊಡ್ಡ ಬಿಲ್ಡಿಂಗ್ 'ತಾಜ್ ಮಹಲ್' ಬಹುಮಹಡಿಯ ಹಾಲ್ ಆಗಿದ್ದು, ಸಮ್ಮರ್‌ಸ್ಯಾಂಡ್ ಬೀಚ್ ರೆಸಾರ್ಟ್ ಉಳ್ಳಾಲದ ಎದುರುಗಡೆ ಇದೆ.

ಸಿಐಟಿಯು ಅಧ್ಯಕ್ಷರಾದ ಕಾಂ. ಎಂ.ಕೆ. ಪಂಧೆಯವರು ನವೆಂಬರ್ 2 ರಂದು ಬೆಳಿಗ್ಗೆ ಸಮ್ಮೇಳನ ಉದ್ಘಾಟಿಸಲಿದ್ದು, ಸಿಐಟಿಯುನ ಉಪಾಧ್ಯಕ್ಷರಾದ ಕಾಂ. ವಿ.ಜೆ.ಕೆ.ನಾಯರ್‌ರವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಸಮ್ಮೇಳನದ ಭಾಗವಾಗಿ ನಗರದ ಪುರಭವನದಲ್ಲಿ ನವೆಂಬರ್ 3 ರಂದು ಸಂಜೆ 5 ಗಂಟೆಗೆ ವಿಚಾರ ಸಂಕಿರಣ 'ಪ್ರಸ್ತುತ ಭಾರತದ ಕೋಮುವಾದ ಮತ್ತು ಸಾಮ್ರಾಜ್ಯಶಾಹಿಯ ಸವಾಲುಗಳು' ಸಂಘಟಿಸಲಾಗಿದೆ. ಸಿಪಿಐ(ಎಂ) ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್



ಕಾರಟ್ ವಿಷಯದ ಮೇಲೆ ಮಾತನಾಡಲಿದ್ದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಚಿತ್ರಬ್ರತ್ ಮಜುಂದಾರ್ (ಎಂ.ಪಿ.), ಡಾ। ಪಿ.ಎಲ್. ಧರ್ಮ ಅಧ್ಯಕ್ಷರು ರಾಜಕೀಯ ಶಾಸ್ತ್ರವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ರವರುಗಳು ಭಾಗವಹಿಸಲಿದ್ದು, ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಜಿ.ಎನ್.ನಾಗರಾಜ್ ರವರು ಅಧ್ಯಕ್ಷತೆ ವಹಿಸಲಿದ್ದಾರೆ. ನವೆಂಬರ್ 4ರಂದು ಸಮ್ಮೇಳನ ಕೊನೆಯಾಗಲಿದ್ದು ಅಂದು ಸಂಜೆ 3ಕ್ಕೆ ನಗರದಲ್ಲಿ ಆಕರ್ಷಕ ಮೆರವಣಿಗೆಯನ್ನು ಸಂಘಟಿಸಲಾಗಿದ್ದು, ನೆಹರೂ ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಲಿದೆ. ಪಶ್ಚಿಮ ಬಂಗಾಳದ ಕಾರ್ಮಿಕ ಸಚಿವ ಕಾಂ. ಮಹಮದ್ ಅಮೀನ್, ... ಕಾರ್ಯದರ್ಶಿ ಕಾಂ. ಕೆ. ಹೇಮಲತಾ, ಶಾಸಕ ಕಾಂ. ಜಿ.ವಿ. ಶ್ರೀರಾಮರೆಡ್ಡಿಯವರುಗಳು ಭಾಷಣ ಮಾಡಲಿದ್ದಾರೆ.

ಸಮ್ಮೇಳನ ತೆಗೆದುಕೊಳ್ಳಲಿರುವ ನಿರ್ಣಯ, ಚರ್ಚೆಗಳಿಗೆ ಬೀಡಿ ಕಾರ್ಮಿಕರು ಬಹಳಷ್ಟು ಕಾತುರದಿಂದ ಇದ್ದಾರೆ. ಅವರ ಹೋರಾಟಗಳು ಜಿಲ್ಲೆ ಹಾಗೂ ರಾಜ್ಯಕ್ಕೆ ಮಾತ್ರ ಸೀಮಿತವಾಗಿವೆ. ಆದರೆ ಬೀಡಿ ಕಾರ್ಮಿಕರ ಸಮಸ್ಯೆ ರಾಷ್ಟ್ರವ್ಯಾಪಿಗೊಂಡಿದೆ. ಬೀಡಿ ಕೈಗಾರಿಕೆಗೆ ರಾಷ್ಟ್ರೀಯ ಕನಿಷ್ಠ ಕೂಲಿ ಇಲ್ಲದೆ ಇರುವ ಲಾಭವನ್ನು ಪಡೆದು ಬೀಡಿ ಉದ್ದಿಮೆಯನ್ನು ಕಡಿಮೆ ಕೂಲಿ ಇರುವ ರಾಜ್ಯಗಳಿಗೆ ಸ್ಥಳಾಂತರಗೊಳಿಸುವ ಬೆದರಿಕೆಯನ್ನು ಬೀಡಿ ಮಾಲಿಕರು ಒಡ್ಡುತ್ತಿದ್ದಾರೆ. ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಕಾನೂನುಬದ್ಧ ಸವಲತ್ತುಗಳನ್ನು ನೀಡಲಾಗುತ್ತಿಲ್ಲ ಮತ್ತು ಅವರನ್ನು ಕಡಿಮೆ ಕೂಲಿಗೆ ದುಡಿಯಲು ಒತ್ತಡ ಹೇರಲಾಗುತ್ತಿದೆ. ಅವರಿಗೆ ವಾರದಲ್ಲಿ ಬರೀ ಎರಡು ದಿನಗಳ ಕೆಲಸ ನೀಡಿ ಇದರ ಪರಿಣಾಮ ವಾರದ ಹೆಚ್ಚಿನ ದಿನಗಳಲ್ಲಿ ಹಸಿವಿನಿಂದ ಇರಬೇಕಾಗಿದೆ.

ಮಂಗಳೂರು ನಗರ ತನ್ನ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಚರಿತ್ರೆ ಮತ್ತು ಕಾರ್ಮಿಕ ವರ್ಗದ ಹೋರಾಟದ ಪರಂಪರೆಯೊಂದಿಗೆ ಅಖಿಲ ಭಾರತ ಬೀಡಿ ಸಮ್ಮೇಳನದ ಪ್ರತಿನಿಧಿಗಳನ್ನು ಮತ್ತು ನಾಯಕರುಗಳನ್ನು ಸ್ವಾಗತಿಸಲು ಕಾತರಿಸುತ್ತಿದೆ. ನೂರಾರು ಕಾರ್ಮಿಕರು, ಅದರಲ್ಲೂ ಮಹಿಳಾ ಕಾರ್ಮಿಕರು ಬೀಡಿ ಕಾರ್ಮಿಕರ ಮನೆ ಮನೆ ಭೇಟಿ ನೀಡಿ ಸಮ್ಮೇಳನದ ಉದ್ದೇಶಗಳನ್ನು ವಿವರಿಸುತ್ತಾ ನಿಧಿ ಸಂಗ್ರಹದಲ್ಲಿ ಈಗಾಗಲೇ ತೊಡಗಿಸಿಕೊಂಡಿದ್ದರೆ. ಸಮ್ಮೇಳನದ ಬಹುಪಾಲು ಖರ್ಚನ್ನು ಬೀಡಿ ಕಾರ್ಮಿಕರಿಂದಲೇ ಸಂಗ್ರಹಿಸಲಾಗುತ್ತಿದೆ. ಸಾಮಾನ್ಯ ಸಾರ್ವಜನಿಕರಿಗೂ ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಕಾಳಜಿ ಇದೆ, ಅವರು ಕೂಡಾ ಯಾವುದೇ ಹಿಂಜರಿತವಿಲ್ಲದೆ ಧನಸಹಾಯ ನೀಡುತ್ತಿದಾರೆ. ಮಂಗಳೂರು ಸಮ್ಮೇಳನ ಬೀಡಿ ಕಾರ್ಮಿಕರಲ್ಲಿ ಸದಾ ನೆನಪಿನಲ್ಲಿ ಉಳಿಯಬಹುದಾಗಿದೆ.

ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಸೆಪ್ಟೆಂಬರ್ 10 ರಂದು ಬಸ್ರೂರು ಪಂಚಾಯತ್‌ನ ಎದುರು ಪ್ರದರ್ಶನ

ಸೆಪ್ಟೆಂಬರ್10 ರಂದು ಸಿಪಿಐ(ಎಂ) ಕುಂದಾಪುರ ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಆರ್ಥಿಕವಾಗಿ ಹಿಂದುಳಿದ ಎಲ್ಲಾ ಬಡವರಿಗೆ ಹಳದಿ ಪಡಿತರ ಚೀಟಿ ವಿತರಣೆ ಮಾಡಬೇಕೆಂದು ಹಾಗೂ ಹೊಸ ಆಸ್ತಿ ತೆರಿಗೆ ರದ್ದು ಮಾಡಿ, ಈ ಹಿಂದಿನಂತೆ ತೆರಿಗೆ ವಸೂಲಿ ಮಾಡಬೇಕೆಂದು ಒತ್ತಾಯಿಸಿ ಬಸ್ರೂರು ಗ್ರಾಮ ಪಂಚಾಯತ್‌ನ ಎದುರು ಬಡ ರೈತರು, ಕಾರ್ಮಿಕರು ಹಾಗೂ ಕೃಷಿ ಕೂಲಿಕಾರರ ಬೃಹತ್ ಮತಪ್ರದರ್ಶನ ನಡೆಯಿತು.

ಮತಪ್ರದರ್ಶನದ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಯು.ದಾಸ.ಭಂಡಾರಿ, ತಾಲೂಕು ಕಾರ್ಯದರ್ಶಿ ಮಹಾಬಲ ಒಡೇರಹೋಬಳಿ, ತಾಲ್ಲೂಕು ಸಮಿತಿ ಸದಸ್ಯರಾದ ಗೋಪಾಲ ಶೆಟ್ಟಿಗಾರ, ಸದಸ್ಯರಾದ ಮಹಾಲಿಂಗ ಕೊಳ್ಕೇರೆ, ಭೋಜರಾಜ, ಸಿಎಂಬಿ ನಾಯರ್, ಎಚ್.ರಾಮ ಮತ್ತು ಲಕ್ಷ್ಮಿ ಪೂಜಾರಿಯವರು ವಹಿಸಿದರು. ಸುಮಾರು 200 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಮತಪ್ರದರ್ಶನಕಾರರನ್ನು ಉದ್ದೇಶಿಸಿ ದಾಸ ಭಂಡಾರಿ, ಮಹಾಬಲ ಒಡೇರಹೋಬಳಿ, ಗೋಪಾಲ ಶೆಟ್ಟಿಗಾರ ಮತ್ತು ಮಹಾಲಿಂಗ ಕೊಳ್ಕೇರೆ ಮಾತನಾಡಿದರು. ತಾತ್ಕಾಲಿಕ ಗುರುತು ಚೀಟಿ ಕೂಡಲೇ ಬದಲಾಯಿಸಿ, ಹಳದಿ ಕಾರ್ಡು ಎಲ್ಲರಿಗೂ ಕೊಟ್ಟು, ಗ್ಯಾಸ್ ಇದ್ದವರಿಗೂ ಸೀಮೆ ಎಣ್ಣೆ ಕೊಡಬೇಕೆಂದು ಆಗ್ರಹಿಸಿದರು.

ರಾಯಚೂರಿನಲ್ಲಿ

'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ಕುರಿತು ವಿಚಾರ ಸಂಕಿರಣ

ಅಕ್ಟೋಬರ್ 6 ರಂದು ಎಲ್ಐಸಿ ವಿಭಾಗೀಯ ಕಛೇರಿಯ ಎದುರುಗಡೆ ಇರುವ ಅನೆಕ್ಸ್ ಪ್ರಾಂಗಣದಲ್ಲಿ ರಾಯಚೂರಿನ ಪೀಪಲ್ ಫಾರ್ ಇಂಡಿಯಾ ವೇದಿಕೆಯ ವತಿಯಿಂದ ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಕುರಿತು ವಿಚಾರ ಸಂಕಿರಣ ಅತ್ಯಂತ ಯಶಸ್ವಿಯಾಗಿ ಜರುಗಿತು.

ಮುಖ್ಯ ವಿಷಯ ಮಂಡಕರಾಗಿ, ಐಕ್ಯರಂಗ ಪತ್ರಿಕೆಯ ಸಂಪಾದಕರಾದ ಎಸ್.ವೈ. ಗುರುಶಾಂತ್‌ರವರು ಮಾತನಾಡುತ್ತಾ ಯುಪಿಎ ಸರ್ಕಾರದ ನೀತಿ-ನಿಲುವಿನ ಮುನ್ನುಡಿಯೇ ಈ ಸಾಮಾನ್ಯ ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಇದನ್ನು ಆಧರಿಸಿ ಸರ್ಕಾರ ಕೆಲಸ ನಿರ್ವಹಿಸಬೇಕಾಗಿದೆ ಎಂದರು. ಕಳೆದ ಮಹಾಚುನಾವಣೆಯಲ್ಲಿ ದೇಶದ ಸ್ವಾವಲಂಭನೆಗೆ ಪೂರಕವಾಗಿ, ಜನಾದೇಶ ಇರುವುದರಿಂದ ಈ ಕಾರ್ಯಕ್ರಮದ ಮೂಲಕ ಜಾತ್ಯಾತೀತತೆಯ ತಳಹದಿಯನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ರಚಿಸಲಾಗಿದೆ ಎಂದರು.

ಈ ಕಾರ್ಯಕ್ರಮವು ಅನೇಕ ಜನಪರವಾದ ಹಾಗೂ ಶಕ್ತಿಶಾಲಿ ಹಾಗೂ ಅದರ ಜನವಿರೋಧಿ ಅಂಶಗಳನ್ನು ಒಳಗೊಂಡಿರುವ ಹಿನ್ನೆಲೆಯನ್ನು ವಿವರಿಸುತ್ತ, ಇಂತಹ ಅಂಶಗಳ ಅನುಷ್ಠಾನದ ಹಿಂದೆ ಎಡಶಕ್ತಿಗಳ ಪಾತ್ರದ ಬಗ್ಗೆ ವಿವರಿಸಿದರು.

ಈ ಮುಂಚೆ ಅವರು ದೇಶದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತ, ಪ್ರಧಾನ ವಿರೋಧ ಪಕ್ಷವಾದ ಬಿಜೆಪಿಯು ಜನತೆಯ ಪ್ರಶ್ನೆಗಳನ್ನು ಬಿಟ್ಟು, ಹಿಂದುತ್ವಕ್ಕೆ ಅಂಟಿಕೊಳ್ಳುವ ಬರೀ ಭಾವೋದ್ರೇಕ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಜನರನ್ನು ಉದ್ರೇಕಗೊಳಿಸುವ ಕಾರ್ಯದಲ್ಲಿ ಮಗ್ನವಾಗಿದೆ. ತಮ್ಮ ಸೋಲನ್ನು ಸ್ವೀಕರಿಸದೇ ಹತಾಶರಾಗಿ ಸಂಸತ್ ಕಲಾಪಗಳನ್ನು ಧಿಕ್ಕರಿಸುತ್ತಿರುವುದು ಅವರ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ತೋರಿಸುತ್ತಿದೆ ಎಂದರು.

ಈ ಮುಂಚೆ ಪೀಪಲ್ ಫಾರ್ ಇಂಡಿಯಾದ ಸಂಚಾಲಕರಾದ ಜೆ. ಸುರೇಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ವೇದಿಕೆಯ ಉಪಾಧ್ಯಕ್ಷರಾದ ಶ್ರೀಧರ್‌ರವರು ವಹಿಸಿಕೊಂಡಿದ್ದರೆ, ಇನ್ನೋರ್ವ ಉಪಾಧ್ಯಕ್ಷರಾದ ರಾಮಣ್ಣ ಹವಳೆ ವಿಚಾರ ಸಂಕಿರಣದಲ್ಲಿ ಭಾಗವಹಿಸಿದರು.

ಕಾರ್ಯಕ್ರಮಕ್ಕೆ, ವಿಮಾ ನೌಕರರ ಸಂಘದ ಜಂಟಿ ಕಾರ್ಯದರ್ಶಿಯಾದ ಜೆ.ಎಂ. ಚಿನ್ನಬಸಯ್ಯ ಸ್ವಾಗತ ಕೋರಿದರೆ, ವಿಭಾಗೀಯ ಘಟಕದ ಕಾರ್ಯದರ್ಶಿ ಜೆ.ಎನ್.ವೆಂಕಟೇಶ್ ವಂದನಾರ್ಪಣೆ ಮಾಡಿದರು.

ಈ ವಿಚಾರ ಸಂಕಿರಣದಲ್ಲಿ ವೇದಿಕೆಯ ಸದಸ್ಯರು, ಕಾರ್ಮಿಕ ಸಂಘಟನೆಗಳ ನಾಯಕರು, ಪತ್ರಕರ್ತರು ಭಾಗವಹಿಸಿ ಚರ್ಚೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದು ವಿಶೇಷವಾಗಿತ್ತು.

- ಜೆ. ಸುರೇಶ್



ಮಹಾರಾಷ್ಟ್ರ ಕೋಮುವಾದಿ ಶಕ್ತಿಗಳ ನಿರ್ಣಾಯಕ ಸೋಲು

ಭಾರತ ಗಣರಾಜ್ಯದ ಜಾತ್ಯಾತೀತ ಬುನಾದಿಯಲ್ಲಿ ಅಚಲ ವಿಶ್ವಾಸ ಉಳ್ಳ ಜನತೆ ತಮ್ಮ ಜನಾದೇಶದ ಮೂಲಕ ಕೋಮುವಾದಿ ಶಕ್ತಿಗಳನ್ನು ನಿರಾಕರಿಸುತ್ತಿದ್ದಾರೆ. ಸಾರ್ವತ್ರಿಕ ಚುನಾವಣೆಗಳ ತಮ್ಮ ಅಭಿಮತವನ್ನು ಇತ್ತೀಚಿನ ಮಹಾರಾಷ್ಟ್ರ ಚುನಾವಣೆಯಲ್ಲಿ ಮತ್ತಷ್ಟು ಸ್ಪಷ್ಟಪಡಿಸಿದ್ದಾರೆ. ಈ ಪ್ರಕ್ರಿಯೆ ಮುಂದುವರಿಯುವುದು ರಾಷ್ಟ್ರ ಹಾಗೂ ಜನತೆಯ ದೃಷ್ಟಿಯಿಂದ ಅಗತ್ಯ. ಈ ಕುರಿತ ಲೇಖನ.

ಶಿವಸೇನೆ- ಬಿಜೆಪಿಯ ಕೋಮುವಾದಿ ಮೈತ್ರಿಕೂಟವು ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗಳಲ್ಲಿ ನಿರ್ಣಾಯಕ ಸೋಲುಂಡಿದೆ. 2004ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಕೋಮುವಾದಿ ಕೂಟದ ಸೋಲು ಒಂದು ಪ್ರತ್ಯೇಕ ಘಟನಾವಳಿ ಮಾತ್ರವಲ್ಲ ಎಂಬುದನ್ನು ಮಹಾರಾಷ್ಟ್ರ ಫಲಿತಾಂಶ ಸಾಬೀತು ಪಡಿಸಿದೆ. ಸಾರ್ವತ್ರಿಕ ಚುನಾವಣೆಗಳಲ್ಲಿನ ಸೋಲು ತಮ್ಮ ಕೋಮುವಾದಿ ವೇದಿಕೆಯ ಸೋಲಲ್ಲ, ಸ್ಥಳೀಯ ಅಂಶಗಳ ಆಧಾರದಲ್ಲಿ ವಿವಿಧ ರಾಜ್ಯಗಳಲ್ಲಿ ಜಾತ್ಯಾತೀತ ಶಕ್ತಿಗಳ ಹೊಮದಾಣಿಕೆ ಆದಕ್ಕೆ ಕಾರಣ ಎಂಬ ಅಂಶವನ್ನು ಒತ್ತಿ-ಒತ್ತಿ ಹೇಳಲು ಆರ್‌ಎಸ್‌ಎಸ್/ಬಿಜೆಪಿ ಹೆಣಗಿದವು. ಆ ಸಂದರ್ಭದಲ್ಲೆ ಒಂದು ವೇಳೆ ಅವರ ವಾದ ಸರಿ ಎಂದು ಭಾವಿಸಿದಲ್ಲೂ ಸಹಾ ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಜಾತ್ಯಾತೀತ ಮತಗಳ ಹಂಚಿಕೆಯಾಗದಂತೆ ತಡೆಯಲು ಮತ್ತದರ ಲಾಭ ಬಿಜೆಪಿಗೆ ಲಭಿಸಿದಂತೆ ಮಾಡಲು ಜಾತ್ಯಾತೀತ ಶಕ್ತಿಗಳು ಸಹಕರಿಸಲು ಕಾರಣ, ಕೋಮುವಾದಿ ಶಕ್ತಿಗಳನ್ನು ಸರ್ಕಾರದಿಂದ ಸಾಧ್ಯವಾಷ್ಟು ದೂರವಿರಬೇಕೆಂಬ ಜನತೆಯ ಒತ್ತಾಸೆಯ ಮೇರೆಗೆ ಎಂಬುದನ್ನು ನಾವು ಅಂದೇ ಗುರುತಿಸಿದ್ದೇವೆ.


ಬದ್ಧತೆ

ಭಾರತ ಗಣರಾಜ್ಯದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಬಲಪಡಿಸಬೇಕೆಂಬ ಬದ್ದತೆಯನ್ನು ಜನತೆ ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಪುನರುಚ್ಚರಿಸಿದ್ದಾರೆ, ಪರಿಣಾಮವಾಗಿ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರಸರಿಸಿದವರು ಜನತೆ.

ಈ ಜನಾದೇಶದ ಮುಂದುವರಿದ ಒತ್ತಾಸೆಯೇ ಮಹಾರಾಷ್ಟ್ರ ಚುನಾವಣೆಗಳ ಫಲಿತಾಂಶ. ಆಡಳಿತ ವಿರೋಧಿ ಅಲೆಯಿಂದ ಪ್ರಭಾವಿತವಾಗಿದೆ ಮಹಾರಾಷ್ಟ್ರದಲ್ಲಿ ಕಾಂಗ್ರೆಸ್-ಎನ್‌ಸಿಪಿ ನೇತೃತ್ವದ ಪ್ರಜಾಸತ್ತಾತ್ಮಕರಂಗ ಮತ್ತೆ



ಅಧಿಕಾರಕ್ಕೆ ಮರಳಿ ಬಂದಿರುವುದು ಗಮನಾರ್ಹವಾದದ್ದು. ನಿರಂತರ ಬರ, ಕಾರ್ಷಿಕ ಬಿಕ್ಕಟ್ಟು, ಸಂಕಷ್ಟದ ರೈತರ ಆತ್ಮಹತ್ಯೆಗಳು ಆಡಳಿತಾರೂಡ ಮೈತ್ರಿಕೂಟದ ವಿರುದ್ಧ ತಿರುಗಲಿವೆ. ಕೋಮುವಾದಿ ಶಕ್ತಿಗಳ ನಂಬಿಕೆಯಾಗಿತ್ತು. ಇದರೊಟ್ಟಿಗೆ ಹೇಳಿಕೊಳ್ಳುವಂತಹ ಆಡಳಿತ ನೀಡದ, ಸರಣಿ ಭ್ರಷ್ಟಾಚಾರ ಹಗರಣಗಳು ಜನತೆಯನ್ನು ಭಾದಿಸಿದ್ದವಾದರು, ಕೋಮುವಾದಿ ಮೈತ್ರಿಕೂಟ ಸೋಲಿಸಬೇಕೆಂಬ ಏಕಮಾತ್ರ ಉದ್ದೇಶದೊಂದಿಗೆ ಜನತೆ ಈ ತೀರ್ಪು ನೀಡಿದ್ದಾರೆ. ಈ ಅಂಶವು ಜಾತ್ಯಾತೀತ



ಭಾರತದ ರಕ್ಷಣೆಗಾಗಿನ ಜನತೆಯ ಬದ್ಧತೆಯನ್ನು ತೋರುತ್ತದೆ.

ವಿಭಜಕ ಯತ್ನ

ಮತ್ತೊಂದು ಗಮನಾರ್ಹ ಅಂಶವೆಂದರೆ ಜಾತ್ಯಾತೀತ ಮತಗಳನ್ನು ವಿಭಜಿಸುವ ಯತ್ನ ನಡೆದರೂ ಅದು ಕೋಮುವಾದಿ ಶಕ್ತಿಗಳಿಗೆ ಫಲಿಸದಿರುವುದು. ಬಿಎಸ್‌ಪಿ ಮತ್ತು ಸಮಾಜವಾದಿ ಪಕ್ಷಗಳು ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಒಂದು ಸ್ಥಾನವನ್ನು ಪಡೆಯದೆ ಸೋಲುಂಡಿದ್ದಾರೆ. ಇವರ ಸ್ಪರ್ಧೆಯಿಂದ ತಮಗೆ ಸೀಟುಗಳ ಲೆಕ್ಕದಲ್ಲಿ ಲಾಭವಾಗಲಿದೆ ಎಂದು ಶಿವಸೇನೆ - ಬಿಜೆಪಿ ಭಾವಿಸಿತ್ತು. ಆದರೆ ಅದು ಕೂಡ ಫಲ ಕೊಡಲಿಲ್ಲ.

ಕೋಮುವಾದಿ ಭಾವನೆಗಳನ್ನು ಕೆರಳಿಸಲೆಂದೆ ತಿರಂಗಾ ಯಾತ್ರೆ, ಸಾವರ್‌ಕರ್ ವಿಷಯ, ಅಫ್‌ಜಲ್ ಖಾನ್ ಸಮಾದಿ ಧ್ವಂಸ ಮಾಡುವ ಯತ್ನ ಮುಂತಾದವನ್ನು ಬಿಜೆಪಿ - ಶಿವಸೇನೆ ಎತ್ತಿದರು ಏನೂ ಪ್ರಯೋಜನವಾಗಲಿಲ್ಲ ಎಂಬುದು ಮತ್ತೊಂದು ಗಮನಾರ್ಹ ಅಂಶ.

ಇಂತಹ ಚಿದ್ರಕಾರಿ - ವಿಭಜಿಕ ರಾಜಕೀಯದಿಂದ ಜನತೆ ಬೇಸತ್ತಿದ್ದಾರೆ. ಆದರೆ ಇದನ್ನು ಒಪ್ಪಿಕೊಳ್ಳಲು ಬಿಜೆಪಿ ತಯಾರಿಲ್ಲ. ಇಂದಿಗೂ ಸಹಾ ಸಾರ್ವತ್ರಿಕ ಚುನಾವಣೆಗಳ ಜನಾದೇಶವನ್ನು ಅರಗಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಿಲ್ಲ, ಮತ್ತದರಿಂದ ಕಲಿಯಬೇಕಾದ ಪಾಠವನ್ನು ಕಲಿಯುತ್ತಿಲ್ಲ. ಬದಲಾಗಿ ಹರಕೆಯ ಕುರಿ ಹುಡುಕಲು ಮುಂದಾಗಿದೆ. ಇನ್ನೊಂದೆಡೆ ತನ್ನ ಸೋಲಿಗೆ ಮುಸ್ಲಿಂ ಅಲ್ಪಸಂಖ್ಯಾತರನ್ನು ಶಿವಸೇನೆ ದೂಷಿಸಿದೆ. ಈ ಮೂಲಕ ತನ್ನ ಕೋಮುವಾದಿ ರಾಜಕೀಯವನ್ನು ಮತ್ತೆ ಮುಂದುವರಿಸಿದೆ.

ಕೇವಲ ಮುಸ್ಲಿಂ ಅಲ್ಪಸಂಖ್ಯಾತರು ಮಾತ್ರವಲ್ಲ ಬಹುದೊಡ್ಡ ಪ್ರಮಾಣದಲ್ಲಿ ಜಾತ್ಯಾತೀತ ಭಾರತೀಯರು ಸಹಾ ಕೋಮುವಾದಿ ಶಕ್ತಿಗಳನ್ನು ನಿರಾಕರಿಸಿದ್ದಾರೆ. ಇದೊಂದು ನಿರ್ಣಾಯಕ ನಿರಾಕರಣೆಯಾಗಿದೆ.

ಅಡ್ವಾಣಿ ಆಯ್ಕೆ ಅರ್ಥ



ಬೊಗಳೆಗಾರ

ಶಿವಸೇನೆ ಮುಸ್ಲಿಂರ ಮೇಲೆ ವಾಗ್ದಾಳಿ ಮುಂದುವರಿಸಿರುವಾಗಲೇ, ಬಿಜೆಪಿ ತನ್ನ ಮೂಲ ಬೇರಿಗೆ ಹಿಂತಿರುಗುವ ಮಾತನಾಡುತ್ತಿದೆ. ಆರ್‌ಎಸ್‌ಎಸ್/ ವಿಹೆಚ್‌ಪಿ / ಬಜರಂಗದಳಗಳು ರಾಜಿರಹಿತ ಕೋಮುವಾದಕ್ಕೆ ಹಿಂತಿರುಗಲು ಬಿಜೆಪಿಗೆ ಒತ್ತಾಯಿಸುತ್ತಿವೆ. ಎಲ್.ಕೆ.ಅಡ್ವಾಣಿಯವರನ್ನು 5ನೇ ಬಾರಿಗೆ ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಬಿಜೆಪಿ ಸ್ಪಂದಿಸಿದ್ಧೆ. ಆ ಮೂಲಕ ಖ್ಯಾತಿ ಹಾಗೂ ಕುಖ್ಯಾತಿಯ ಎರಡನೆ ತಲೆಮಾರಿನ ನಾಯಕತ್ವ ಬೆಳೆಸುವ ತನ್ನ ಹೆಗ್ಗಳಿಕೆಯನ್ನು ಕಸದ ಬುಟ್ಟಿಗೆ ಎಸೆದಿದೆ. ಕೋಮು ದೃವೀಕರಣವನ್ನು ಮತ್ತಷ್ಟು ಮೊನಚುಗೊಳಿಸುವುದರಲ್ಲೆ ತನ್ನ ರಾಜಕೀಯ ಭವಿಷ್ಯ ಅಡಗಿದೆ ಎಂಬ ಸಂದೇಶವನ್ನು ಅಡ್ವಾಣಿ ನಿಯುಕ್ತಿಯ ಮೂಲಕ ಬಿಜೆಪಿ ನೀಡಿದೆ. ಹಾಗಾಗಿ ಮತ್ತೊಮ್ಮೆ ದೇಶವನ್ನು ಕೋಮುಧಂಗೆಗಳು, ಸಾವು, ನೋವಿಗೆ ತಳ್ಳಲು ಅದು ಬಯಸುತ್ತದೆ.

ಆದರೂ ಸಹಾ ಇತ್ತೀಚಿನ ಚುನಾವಣೆಗಳಲ್ಲಿ ಕೋಮುವಾದಿ ಶಕ್ತಿಗಳನ್ನು ಜನತೆ ತಿರಸ್ಕರಿಸಿರುವ ರೀತಿ ಗಮನಿಸಿದಲ್ಲಿ ಆರ್‌ಎಸ್‌ಎಸ್/ಬಿಜೆಪಿಯ ಅಂತಹ ಎಲ್ಲಾ ಯತ್ನಗಳನ್ನು ವಿಫಲಗೊಳಿಸಬೇಕಿದೆ. ಇದನ್ನು ಜನತೆ ಸಾಕಾರಗೊಳಿಸಲಿದ್ದಾರೆ. ಬರಲಿರುವ ವರ್ಷಗಳು ಬಿಜೆಪಿಗೆ ತೀವ್ರ ರಾಜಕೀಯ ಬರವನ್ನುಂಟುಮಾಡಲಿವೆ. 2005ರಲ್ಲಿ ಚುನಾವಣೆಗೆ ಹೋಗಲಿರುವ ಬಿಹಾರ, ಜಾರ್‌ಖಂಡ್, ಹರಿಯಾಣಗಳಲ್ಲಿ ಬಿಜೆಪಿ ಈಗಾಗಲೇ ಬಲಹೀನಗೊಂಡಿದೆ, ಇಂತಹದೆ ಫಲಿತಾಂಶವನ್ನು ಸಹಾ ಅಲ್ಲಿ ಎದುರಿಸಲಿದೆ. ಅಂತೆಯೆ 2006 ರಲ್ಲಿ ಚುನಾವಣೆಗೆ ಹೋಗಲಿರುವ ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡಿನಲ್ಲಂತು ಬಿಜೆಪಿ ಒಂದು ರಾಜಕೀಯ ಶಕ್ತಿಯಾಗಿ ಇಲ್ಲವೆ ಇಲ್ಲ. ಹಾಗಾಗಿ ಬಿಜೆಪಿಯ, ಅರಗಿನ ಅರಮನೆ ಮತ್ತಷ್ಟು ವೇಗವಾಗಿ ಕುಸಿದುಬೀಳಲಿದೆ.

ಭಾರತ ಗಣರಾಜ್ಯದ ಆರೋಗ್ಯಕ್ಕೆ ಇದು ಅತಿ ಅಗತ್ಯ. ಬಹಳ ವರ್ಷಗಳ ನಂತರ ಜನತೆ ತನ್ನ ದೈನಂದಿನ ಸಮಸ್ಯೆಗಳ ಕುರಿತು ಚರ್ಚಿಸುತ್ತಿದ್ದಾರೆ. ಕೋಮುವಾದಿ ಶಕ್ತಿಗಳು ಸೃಷ್ಟಿಸುವ ಇಲ್ಲ ಸಲ್ಲದ ವಿವಾದಗಳನ್ನು ಬದಿಗಿರಿಸುತ್ತಿದ್ದಾರೆ. ವಿದೇಶಿ ನೇರ ಬಂಡವಾಳ, ಉದ್ಯೋಗ ಭರವಸೆ ಯೋಜನೆ ಮುಂತಾದ ಜನ ಚರ್ಚಿತ ವಿಷಯಗಳು ಜನಜೀವನ ಹಾಗೂ ರಾಷ್ಟ್ರದ ಭವಿಷ್ಯದ ಮೇಲೆ ಪರಿಣಾಮ ಬೀರುತ್ತಿವೆ. ಭಾರತದ ಜಾತ್ಯಾತೀತ ಪ್ರಜಾಸತ್ತೆಯನ್ನು ಬಲಿಷ್ಠ ಹಾಗೂ ಚೈತನ್ಯಶೀಲಗೊಳಿಸಲು ಜನತೆಯಲ್ಲಿನ ಪ್ರಸಕ್ತ ಈ ಪ್ರವೃತ್ತಿಯನ್ನು ನಾವು ಬಲಗೊಳಿಸಬೇಕಿದೆ. ○

ದೇಶಭಕ್ತರ ಮೋಸದ ಮುಖ

ತಾವು ಮಾತ್ರವೇ ರಾಷ್ಟ್ರಭಕ್ತರು, ದೇಶಪ್ರೇಮಿಗಳು, ಹಿಂದುಗಳು ನಾವೆಲ್ಲಾ ಒಂದು ಎಂದು ವಂಚನೆಯ ಬೊಗಳೆ ಬಿಡುವ ಕೋಮುವಾದಿಗಳ ಬಳಗವು ಇತ್ತೀಚೆಗೆ ದೇಶದ ಅತ್ಯುನ್ನತ ನ್ಯಾಯಾಲಯವು ನೀಡಿದ ತೀರ್ಪಿನಿಂದಾಗಿ ಇನ್ನೊಮ್ಮೆ ಬಯಲಾಗಿದೆ. ವಾಜಪೇಯಿ ಸರ್ಕಾರವು ವಿತರಿಸಿದ ಪೆಟ್ರೋಲ್ ಬಂಗ್, ಎಲ್‌ಪಿಜಿ ಗ್ಯಾಸ್, ಸೀಮೆ ಎಣ್ಣೆ ವಿತರಕರ ಪಟ್ಟಿಯು ನಿಯಮಗಳಿಗೆ ವಿರುದ್ಧವಾದುದರಿಂದ 297 ಏಜೆನ್ಸಿಗಳನ್ನು ರದ್ದುಗೊಳಿಸಬೇಕೆಂದು ಸುಪ್ರೀಂಕೋರ್ಟ್ ನೇಮಿಸಿದ ಸಮಿತಿಯು, ಅದಲ್ಲಿ ಶೇ 73 ಭಾಗ ಅಂದರೆ 218 ಏಜೆನ್ಸಿಗಳ ವಿತರಣೆ ನಿಯಮಕ್ಕೆ ವಿರುದ್ಧವಾಗಿದೆ ಎಂದು ಹೇಳಿದೆ.

ಕರ್ನಾಟಕ 22 ಏಜೆನ್ಸಿಗಳ ಪೈಕಿ 21 ಬಿಜೆಯುವರಿಗೆ ಸೇರಿದ್ದು, ಒಂದು ಕಾಂಗ್ರೆಸ್‌ನದ್ದು. ಈ ಪಟ್ಟಿಯನ್ನು ಕಳೆದ ವಾರ ಐಕ್ಯರಂಗದಲ್ಲಿ ಪ್ರಕಟಿಸಲಾಗಿತ್ತು.

2002 ರ ಆಗಸ್ಟ್ 1 ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಬಿಜೆಪಿ ಮತ್ತು ಅದರ ಮೈತ್ರಿ ಪಕ್ಷಗಳಿಗೆ ಸೇರಿದ ಮುಖಂಡರ ಕುಟುಂಬದವರಿಗೆ ಹಾಗೂ ಸ್ನೇಹಿತರಿಗೆ ಕಾನೂನಿಗೆ ವಿರುದ್ಧವಾಗಿ ಪೆಟ್ರೋಲ್‌ಬಂಕ್, ಎಲ್‌ಪಿಜಿ ಗ್ಯಾಸ್ ವಿತರಿಸಿದುದರ ಪಟ್ಟಿಯನ್ನು ಪ್ರಕಟಿಸಿತ್ತು. ವಿವಿಧ ರಾಜ್ಯಗಳಿಗೆ ಸೇರಿದ 18 ಪಟ್ಟಿಗಳಲ್ಲಿ ಕೆಲವು ಕಾಂಗ್ರೆಸ್ ಮುಖಂಡರೂ, ಉನ್ನತ ಅಧಿಕಾರಿಗಳೂ ಒಳಗೊಂಡಿದ್ದರು.

2002 ರ ಆಗಸ್ಟ್ 5 ರಂದು, ವಾಜಪೇಯಿ ಸರ್ಕಾರವು ಕಾನೂನು ಬಾಹಿರವಾದ ಏಜೆನ್ಸಿಗಳನ್ನು ಮಾತ್ರ ರದ್ದು ಗೊಳಿಸುವುದರ ಬದಲಾಗಿ 2000 ಜನವರಿಯಿಂದ ನೀಡಲಾದ ಎಲ್ಲಾ 3158 ಏಜೆನ್ಸಿಗಳನ್ನು ರದ್ದುಗೊಳಿಸಿತ್ತು. ಇಡೀ ದೇಶದಲ್ಲಿ ಗೊಂದಲ ಸೃಷ್ಟಿಸುವುದು ಅದರ ಉದ್ದೇಶವಾಗಿತ್ತು. ಆದರೆ ಇದರ ವಿರುದ್ಧ ದೆಹಲಿ ಮತ್ತು ರಾಜಸ್ಥಾನ ಹೈಕೋರ್ಟುಗಳು ತಡೆಯಾಜ್ಞೆ ನೀಡಿದ್ದು, ನಂತರ ಮಧ್ಯ ಪ್ರವೇಶಿಸಿದ ಸುಪ್ರೀಂಕೋರ್ಟ್ ಕಾನೂನುಬಾಹಿರವಾಗಿ ವಿತರಿಸಿದ ಪಟ್ಟಿಯನ್ನು ನೀಡುವಂತೆ ಕೇಂದ್ರ ಸರ್ಕಾರ ಕೇಳಿದರೆ ಬರೀ 30 ವಿತರಕರ ಪಟ್ಟಿ ನೀಡುವುದೇ? ಅದರಲ್ಲಿ ಯಾವುದೇ ರಾಜಕಾರಣಿಯ ಹೆಸರಿರಲಿಲ್ಲ!

ಇದನ್ನು ಒಪ್ಪದ ಸುಪ್ರೀಂಕೋರ್ಟ್ ತಾನೇ ಒಂದು ತನಿಖಾ ಸಮಿತಿಯನ್ನು ರಚಿಸಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದ ವರದಿಯ ಆಧಾರದಲ್ಲಿ ಕಾನೂನು ಬಾಹಿರ ವಿತರಕರ ಪಟ್ಟಿಯನ್ನು ಸಿದ್ಧಗೊಳಿಸಲು ತಿಳಿಸಿದ್ದ ಅದರ ಫಲವೇ 297 ವಂಚಕ ವಿತರಕರ ಪಟ್ಟಿ. ಅದರಲ್ಲಿ ಸಿಂಹಪಾಲು ಬಿಜೆಪಿ ಬಳಗದ್ದು. ಕೋಮುವಾದಿಗಳ ಮೋಸದ ಮುಖಕ್ಕೆ ಇನ್ನೇನು ಉದಾಹರಣೆ ಬೇಕು?

ಹತ್ತನೇ ಯೋಜನೆಯ ಮಧ್ಯಾವಧಿ ಪರಿಶೀಲನೆ ಹೇಳುತ್ತಿರುವುದೇನು?

ಯೋಜನಾ ಆಯೋಗವು ಹತ್ತನೇ ಪಂಚವಾರ್ಷಿಕ ಯೋಜನೆಯ ಮಧ್ಯಾವಧಿ ಪರಿಶೀಲನೆಗೆ ಕಾಯಕಲ್ಪ ಕೈಗೊಂಡಾಗ, ಅದು ಭಾರತ ದೇಶದ ಜನತೆಯ ಬೆಳವಣಿಗೆ ಕಡೆದೆ ಗಮನ ಕೊಡುವುದರ ಬದಲಿಗೆ ವಿಶ್ವಬ್ಯಾಂಕ್, ಐಎಂಎಫ್, ವಿಶ್ವವ್ಯಾಪಾರ ಸಂಘಟನೆಗಳ ಆಶಯುಗಳನ್ನು ಪೂರೈಸುವ ದಸ್ತಾವೇಜಾಗಿದೆ. ವಿಶ್ವ ವ್ಯಾಪಾರ ಸಂಘಟೆ (ಐಎಲ್‌ಓ) ಯ ಶರತ್ತುಗಳನ್ನು ಶೇ 5 ರಷ್ಟು ಕೃಷಿಯ ಮೇಲೆ ಅವಲಂಬಿತವಾಗಿರುವ ಶ್ರೀಮಂತ ದೇಶಗಳೇ ಕಡೆಗಣಿಸುತ್ತಿರುವಾಗ ಶೇ 70 ರಷ್ಟು ಅವಲಂಬಿತವಾಗಿರುವ ಭಾರತ ಏಕೆ ಅದನ್ನು ಪಾಲಿಸಬೇಕು? ಬದಲಾಗಿ ಕೇಂದ್ರ ಸರ್ಕಾರವು ಅಂಗೀಕರಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಸಿಎಂಪಿ) ಆಧಾರದಲ್ಲಿ ದಸ್ತಾವೇಜನ್ನು ಪುನರ್ರಚಿಸಬೇಕು ಎಂದು ಆಗ್ರಹಿಸಿದ್ದಾರೆ ಅಖಿಲ ಭಾರತ ಕೃಷಿಕೂಲಕಾರರ ಸಂಘದ ಸಹಕಾರ್ಯದರ್ಶಿಯಾಗಿರುವ

ಕಾಂ. ಸುನೀತ್ ಚೋಪ್ರಾ

ಯೋಜನಾ ಆಯೋಗ ಹತ್ತನೇ ಪಂಚವಾರ್ಷಿಕ ಯೋಜನೆಯ ಮಧ್ಯಾವಧಿ ಗುಣವಿಮರ್ಶೆ ಮಾಡಲು ನಿರ್ಧರಿಸಿದೆ. ಇದಕ್ಕೆ ಕಾರಣ ಸ್ಪಷ್ಟ. ಈ ಹತ್ತನೇ ಯೋಜನೆಯನ್ನು ಅದರ ಹಿಂದಿನ ಯೋಜನೆಯಂತೆ ಐಎಂಎಫ್/ವಿಶ್ವಬ್ಯಾಂಕ್ ನೀತಿಗಳ ಪ್ರಕಾರ ಅವು ಟಾಂಟಾಂ ಮಾಡಿದ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ವಿಫಲವಾದರೂ ಡಬ್ಲ್ಯುಟಿಓ ಬಲವಂತದಿಂದ ನಡೆಸುತ್ತಿರುವಂತದ್ದು.

ಮಾರುಕಟ್ಟೆಗಳಿಗೆ ಉತ್ತೇಜನೆ ನೀಡಿದರೆ ಉತ್ಪಾದನೆ ತಂತಾನೆ ಮುನ್ನಡೆ ಸಾಧಿಸುತ್ತದೆ ಎಂಬುದು ಈ ನೀತಿಗಳ ನಂಬಿಕೆ. ಆದರೆ ಈ ನಂಬಿಕೆ ಸುಳ್ಳಾಗಿದೆ. ಏಕೆಂದರೆ ಯಾವ ನೀತಿಗಳನ್ನು ಡಬ್ಲ್ಯುಟಿಓ ಅಭಿವೃದ್ಧಿಶೀಲ ದೇಶಗಳ ಮೇಲೆ ಹೇರಬಯಸುತ್ತದೋ ಅದನ್ನು ಪಾಲಿಸಲು ಅಮೆರಿಕಾ, ಯುರೋಪ್, ಜಪಾನ್‌ಗಳೇ ನಿರಾಕರಿಸಿವೆ. ಕೃಷಿಯನ್ನವಲಂಬಿಸಿದ ಜನರ ಸಂಖ್ಯೆ ಈ ದೇಶಗಳಲ್ಲಿ ಶೇ 5 ಕ್ಕೂ ಕಮ್ಮಿಯಿದ್ದರೂ (ಫ್ರಾನ್ಸ್‌ನಲ್ಲಿ ಮಾತ್ರ ಶೇ 15) ಡಬ್ಲ್ಯುಟಿಓ ಪಥ್ಯಗಳನ್ನು ಮುಂದುವರೆದ ಬಂಡವಾಳಶಾಹಿ ದೇಶಗಳು ಪ್ರತಿರೋಧಿಸುತ್ತಿರುವುದು ಶೇ 70 ಕ್ಕೂಹೆಚ್ಚು ಜನ ಕೃಷಿಯನ್ನವಲಂಬಿಸಿರುವ ನಮ್ಮಂತ ದೇಶಗಳ ಕಣ್ಣು ತೆರೆಸಬೇಕು. ಇನ್ನೊಂದು ಸಂಗತಿಯನ್ನು ಗಮನಿಸಬೇಕು. ನಮ್ಮ ಕೃಷಿಯಲ್ಲಿ ತಲೆತೂರಿಸುವ ಮೊದಲು ಬೃಹತ್ ಪ್ರಮಾಣದಲ್ಲಿ ಪರ್ಯಾಯ ಉದ್ಯೋಗವಕಾಶಗಳು ಬೆಳೆದಿರಬೇಕು. ಅಂತಹ ಸಾಧ್ಯತೆ ಸದ್ಯಕ್ಕಂತೂ ಇಲ್ಲ.

ಉತ್ಸಾಹ ಶೂನ್ಯತೆ

ಆದ್ದರಿಂದ ಯೋಜನಾ ಆಯೋಗದ ಈ ಕುರಿತ ನಿಲುವಿನ ದಸ್ತಾವೇಜು ಇದುವರೆಗೆ ಹತ್ತನೇ ಯೋಜನೆಯ ಸಾಧನೆಯ ಬಗ್ಗೆ ನಿರುತ್ಸಾಹದಿಂದ ಮಾತಾಡಿದೆ. ಒಟ್ಟು ಆಂತರಿಕ ಉತ್ಪಾದನೆಯ ಬೆಳವಣಿಗೆ 8.1 ಶೇ. ದರದಲ್ಲಿ ಆಗಬೇಕೆಂಬ ಗುರಿ ಮುಟ್ಟಬಹುದೇ ಎಂದು ಪ್ರಶ್ನಿಸಿದೆ. ಕಳೆದೆರಡು ವರ್ಷಗಳಲ್ಲಿ ಸರಾಸರಿ 11 ಶೇ. ಬೆಳವಣಿಗೆ ದರ ಸಾಧಿಸಿದರೆ ಮಾತ್ರ ಇದು ಸಾಧ್ಯ ಎಂದು ಅದು ಹೇಳಿದೆ. ವಾಸ್ತವವಾಗಿ ಕಳೆದೆರಡು ವರ್ಷಗಳಲ್ಲಿ 6-7 ಶೇ. ಬೆಳವಣಿಗೆ ಮಾತ್ರ ನಿರೀಕ್ಷಿಸಬಹುದಾಗಿದೆ.

ಕೃಷಿಯಲ್ಲಿನ ಪರಿಸ್ಥಿತಿಯಂತೂ ಇನ್ನೂ ಶೋಚನೀಯ. ಹತ್ತನೇ ಯೋಜನೆ ಶೇ 4 ಬೆಳವಣಿಗೆಯ ಗುರಿಯಿಟ್ಟಿತ್ತು. ಆದರೆ ವಾಸ್ತವವಾಗಿ ಈ ದರ 1980-96 ರ ಅವಧಿಯಲ್ಲಿ 3.2 ಶೇ ದಿಂದ 1996-2002 ರ ಅವಧಿಯಲ್ಲಿ ಶೇ 2.6 ಕ್ಕೆ ಇಳಿದಿದೆ. ಹತ್ತನೆ ಯೋಜನೆಯ ಎರಡು ವರ್ಷಗಳಲ್ಲಿ ಇದು 1.8 ಶೇ ಇದ್ದು ಈ ವರ್ಷ 1.5 ಶೇ ದಾಟಲಿಕ್ಕಿಲ್ಲ ಎಂದು ಈ ದಸ್ತಾವೇಜು ಹೇಳಿದೆ. 'ಸರಿಪಡಿಸುವ ನೀತಿಗಳ ಮೇಲೆ ಗಮನ ಕೇಂದ್ರೀಕರಿಸಬೇಕಾಗಿದೆ' ಎಂದು ಅದು ಸರಿಯಾಗಿಯೇ ಹೇಳಿದೆ. ಆದರೆ ಸರಿಪಡಿಸಬೇಕಾದ್ದು ಹಿಂದೆ ಎನ್‌ಡಿಎ ಅನುಸರಿಸಿದ್ದ ನೀತಿಗಳನ್ನು ಎಂಬ ಅರಿವು ಅದಕ್ಕಿದೆಯೇ?

ಅಂತಹ ಅರಿವು ಇದ್ದಂತೆ ಕಾಣಿಸುವುದಿಲ್ಲ. ಏಕೆಂದರೆ ಯೋಜನಾ ಆಯೋಗದ ಉಪಾಧ್ಯಕ್ಷರು ಅದೇ ವಿಶ್ವಬ್ಯಾಂಕ್, ಐಎಂಎಫ್ ನ ಬಂಟನನ್ನು ಯೋಜನಾ ಆಯೋಗದ ಸಂಸ್ಥೆಗಳಲ್ಲಿ ಒಳಗೊಳ್ಳಲು ಮೊದಲು ಯತ್ನಿಸಿದರು. ಇದು ದೇಶದ ಸಾರ್ವಭೌಮತೆಗೆ ಧಕ್ಕೆ ತಂದಿದೆ ಎಂದು ದೇಶದ ಪ್ರಮುಖ ಆರ್ಥಿಕ ತಜ್ಞರು ಪ್ರತಿಭಟಿಸಿದಾಗ ಅವರನ್ನು ಹೊರಗಿಡುವ ಬದಲು ಆ ಸಂಸ್ಥೆಗಳನ್ನೇ ವಿಸರ್ಜಿಸಿದರು.

ಮಾತುಗಳಲ್ಲಾದರೂ

ಈ ನೀತಿಗಳ ಕೆಲವು ಆಧಾರಗಳಂತೂ ಭಯಾನಕ ರೀತಿಯಲ್ಲಿ ತಪ್ಪಾಗಿವೆ ಎಂಬುದನ್ನು ಯೋಜನಾ ಆಯೋಗದ ಈ ದಸ್ತಾವೇಜು ಮಾತುಗಳಲ್ಲಾದರೂ ಒಪ್ಪಿಕೊಂಡಿದೆ. ವಿಶ್ವಬ್ಯಾಂಕ್ ಸಿದ್ಧಾಂತಿಗಳು ಸಲಹೆ ಮಾಡಿದಂತೆ ಸರ್ಕಾರ ಹೂಡಿಕೆಯನ್ನು ಮಾಡದೆ ಹಿಂದೆ ಸರಿದರೂ ಈ ಜಾಗವನ್ನು ಖಾಸಗಿ ಹೂಡಿಕೆ ತುಂಬಲು ನಿರಾಕರಿಸಿತು ಎಂದು ಒಪ್ಪಿಕೊಳ್ಳುವ ಈ ದಸ್ತಾವೇಜು 'ಸ್ವಲ್ಪ ಹಣಕಾಸು ಶಿಸ್ತನ್ನು ಸಡಿಲಿಸಬೇಕಾಗಿ ಬಂದರೂ' ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿ ಬೇಡಿಕೆ ಪ್ರಮಾಣವನ್ನು ನಿರಂತರವಾಗಿ ಹೆಚ್ಚಿಸಬೇಕಾಗುತ್ತದೆ ಎಂದಿದೆ. ಆದರೆ ಕುತೂಹಲದ ಸಂಗತಿಯೆಂದರೆ ಇದು 'ಸಂರಚನಾ ಹೊಂದಾಣಿಕೆ' ಹೇರಿದ ಹೊರೆಗಳನ್ನು ನಿವಾರಿಸಲಿಕ್ಕೆ ಅಲ್ಲ, ಬದಲಾಗಿ ವಾತಾವರಣವನ್ನು ಇನ್ನಷ್ಟು 'ಹೂಡಿಕೆದಾರರಿಗೆ ಅನುಕೂಲಕರ'ವಾಗಿರುವಂತೆ ಮಾಡಲು!


ಕೃಷಿಯಲ್ಲಿ ಬೆಳವಣಿಗೆ ಸಾಧನೆ ಅತಿ ನಿಕೃಷ್ಟ ಎಂದು ಈ ದಸ್ತಾವೇಜು ಒಪ್ಪಿಕೊಂಡಿದ್ದರೂ ಸಾವಿರಾರು ರೈತರ, ಗ್ರಾಮೀಣ ಬಡವರ ಆತ್ಮಹತ್ಯೆಗಳ ಪ್ರಸ್ತಾವವೂ ಇಲ್ಲ. ಬಹುಶಃ ದಸ್ತಾವೇಜು ಅನುಕೂಲ ಮಾಡಿಕೊಡಬಯಸುವ 'ಹೂಡಿಕೆದಾರರು' ಇವರಂತೂ ಆಗಿರಲಿಕ್ಕಿಲ್ಲ!

ಅಷ್ಟೇ ಅಲ್ಲ, ಈ ದಸ್ತಾವೇಜನ್ನು ನೋಡಿದರೆ ರೈತರನ್ನು ಇನ್ನಷ್ಟು ಹಿಂಡುವಂತೆ ಕಾಣುತ್ತದೆ. ಉದಾಹರಣೆಗೆ ಈಗಿರುವ ಜಲಸಂಪನ್ಮೂಲಗಳು, ನೆಲದಡಿಯಲ್ಲಿನ ನೀರಿನ ಮೂಲಗಳು ಇಳಿಯುತ್ತಿರುವಂತೆ ಕಾಣುತ್ತದೆ ಎನ್ನುವ ಈ ದಸ್ತಾವೇಜು ಇದಕ್ಕೆ ರೈತರನ್ನು ದೂಷಿಸುತ್ತದೆ, ಅವರು ವಿದ್ಯುತ್ ಪೂರೈಕೆಯಿಂದಾಗಿ ವಿಪರೀತ ನೀರು ಬಳಸುತ್ತಾರಂತೆ. ದೇಹಕ್ಕೆ ಒಳ್ಳೆಯದಲ್ಲ ಎಂದು ಹೇಳುತ್ತಿರುವ ಹಗುರ ಪೇಯಗಳ ಕಂಪನಿಗಳು ಇಡೀ - ಇಡೀ ಕ್ಷೇತ್ರಗಳ ಜಲಸಂಪನ್ಮೂಲಗಳನ್ನು ಬತ್ತಿಸುತ್ತಿರುವ ಬಗ್ಗೆ ಚಕಾರವಿಲ್ಲ.

ತಪ್ಪು ವಿಶ್ಲೇಷಣೆ

ನೀರಿನ ನಿರ್ವಹಣೆಯಲ್ಲಿ 'ಪರಿಣಾಮಕಾರಿ ಸಮುದಾಯ ಪಾತ್ರ'ದ ಬಗ್ಗೆ ಲಘುವಾಗಿ ಮಾತನಾಡುವ ಈ ದಸ್ತಾವೇಜು "ವಿಕೇಂದ್ರೀಕೃತ ನೀರಾವರಿ ವ್ಯವಸ್ಥೆಗಳನ್ನು' ಯಶಸ್ವಿಯಾಗಿ ನಿರ್ವಹಿಸಲು ನೀರಿನ ಹಕ್ಕುಗಳನ್ನು ವಹಿಸಿಕೊಡಬೇಕು' ಅಂದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡಬೇಕು ಎಂಬ ಪ್ರಸ್ತಾವವನ್ನಿಡುತ್ತದೆ. ಅರ್ಥರ್ ಕಾಟನ್‌ರಿಂದ ಹಿಡಿದು ಕೇವಲ್ ರಾವ್‌ರವರೆಗಿನ ಜಲ ಪರಿಣಿತರೆಲ್ಲಾ ರೈತರ ಪರಿಸ್ಥಿತಿ ಸುಧಾರಿಸಬೇಕೆಂದು ಹಾಕಿಕೊಟ್ಟ ವ್ಯವಸ್ಥೆಯ ಪ್ರಯೋಜನಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಪಡೆಯುವುದನ್ನು ರಾಜ್ಯ ನೀರಾವರಿ ಇಲಾಖೆಗಳು ಕೈಕಟ್ಟಿಕೊಂಡು ನೋಡುತ್ತಿರಬೇಕು. ಈಗಾಗಲೇ ಮಹಾರಾಷ್ಟ್ರ, ಕೇರಳಗಳಲ್ಲಿ ಕಾಣುತ್ತಿರುವಂತೆ ಇಂತಹ ನಿಲುವಿನ ವಿರುದ್ಧ ಹೋರಾಟ ಖಚಿತ.

ಸಗಟು ವ್ಯಾಪಾರಿಗಳು ಮತ್ತು ರಫ್ತುದಾರು ಬರ ಪರಿಸ್ಥಿತಿ ನಿರ್ಮಿಸದಂತೆ ತಡೆದಿರುವ ಅವಶ್ಯಕ ಸರಕುಗಳ ಕಾನೂನು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆ 'ಆಧುನಿಕ ಮಾರುಕಟ್ಟೆ ವ್ಯವಸ್ಥೆಯ ಬೆಳವಣಿಗೆಗೆ ದೊಡ್ಡ ಅಡ್ಡಿ' ಎನ್ನುತ್ತದೆ ಈ ದಸ್ತಾವೇಜು. ಅದರ ಬದಲು 'ಸಾಮಾನ್ಯ ಮಾರುಕಟ್ಟೆ ಚಟುವಟಿಕೆಗಳಿಗೆ ಅಡ್ಡಿಯಾಗದಂತೆ ತುರ್ತು ಸನ್ನಿವೇಶಗಳನ್ನು ನಿಭಾಯಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು' ಎನ್ನುತ್ತದೆ ಅದು. 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ಈ ಕಾನೂನನ್ನು ದುರ್ಬಗೊಳಿಸುವುದಿಲ್ಲ ಎಂದರೂ ಕೃಷಿ ಆದಾಯಗಳನ್ನು ಹೆಚ್ಚಿಸುವುದಕ್ಕೆ ಅಗತ್ಯವಾದ ಬದಲಾವಣೆಗಳ ಪರೀಕ್ಷಣೆ ನಡೆಸಬೇಕು' ಎನ್ನುತ್ತದೆ.


ಪ್ರಧಾನಿ ಮನಮೋಹನ್ ಸಿಂಗ್

ಇಲ್ಲಿ ವ್ಯಕ್ತಪಡಿಸುವ ರೈತರ ಹಿತಾಸಕ್ತಿಯ ಘೋಷಣೆ ಕೇವಲ ಹುಸಿ ಘೋಷಣೆ. ಏಕೆಂದರೆ 'ಬೆಂಬಲ ಬೆಲೆ, ಖರೀದಿ ವ್ಯವಸ್ಥೆ, ಜತೆಗೆ ರಸಗೊಬ್ಬರ, ವಿದ್ಯುತ್ ಶಕ್ತಿ ಮತ್ತು ಕಾಲುವೆ ನೀರಿನಂತಹ ಲಾಗುವಾಡುಗಳಿಗೆ ಸಬ್ಸಿಡಿಗಳಿಂದಾಗಿ ಸಬ್ಸಿಡಿ ಆಧಾರಿತ ಬೆಂಬಲಗಳು ಹೆಚ್ಚಿ ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಇಳಿದಿದೆ ಎನ್ನುತ್ತದೆ ಈ ದಸ್ತಾವೇಜು. ಇದು ಹಸಿ ಸುಳ್ಳು. ಭಾರತದ ರೈತನಿಗೆ ಸಿಗುವ ಸಬ್ಸಿಡಿ ಅಮೆರಿಕಾ, ಜಪಾನ್, ಯುರೋಪಿನ ರೈತರಿಗೆ ಸಿಗುವ ಸಬ್ಸಿಡಿಗಳಿಗೆ ಹೋಲಿಸಿದರೆ ನಗಣ್ಯ ಮಾತ್ರವೇ ಅಲ್ಲ, ಸಾರ್ವಜನಿಕ ಹೂಡಿಕೆಯ ಇಳಿಕೆಗೂ ಈ ಸಬ್ಸಿಡಿಗಳಿಗೂ ಏನೇನೂ ಸಂಬಂಧವಿಲ್ಲ. ಇವೆರಡನ್ನು ಜತೆಗೆ ಇಟ್ಟಿರುವುದು ಮೂಲಭೂತ ಅಪ್ರಾಮಾಣಿಕತೆಯನ್ನು ತೋರಿಸುತ್ತದೆ. ಅದರ ನಿಜ ಉದ್ಯೋಗ ಗ್ರಾಮೀಣ ಜನಸಮೂಹಗಳು ಬದುಕುಳಿಯಲು ಮಾಡಿರುವ ಕಾನೂನುಗಳನ್ನು ಧ್ವಂಸಗೊಳಿಸುವುದು ಮತ್ತು ಸಹಕಾರಿಗಳು ಹಾಗೂ ಖಾಸಗಿಯವರು ಆಧುನಿಕ ಮಾರುಕಟ್ಟೆಗಳನ್ನು ಹಾಕಲು ಅವಕಾಶ ನೀಡುವುದು'

ಇಲ್ಲಿ 'ಆಧುನಿಕ' ಎಂಬ ಪದ ಬಳಕೆಯಲ್ಲೇ ಅಪ್ರಾಮಾಣಿಕತೆಯಿದೆ. ಭಾರತದಲ್ಲಿ ಅರ್ಧದಷ್ಟು ಜನ ಬಡತನರೇಖೆಯ ಕೆಳಗಿದ್ದಾರೆ. ಇವರೆಲ್ಲರ ಮೇಲೆ ಖಾಸಗಿ ಕಂಪನಿಗಳ ಹಿಡಿತವೇ ಅದರ ಉದ್ದೇಶ. ಇದು ನಮ್ಮ ಜನಗಳ ಆರೋಗ್ಯಕ್ಕೆ ಗಂಭೀರ ಅಪಾಯ ತರಲಿದೆ. ಎಷ್ಟರ ಮಟ್ಟಿಗೆಯೆಂದರೆ ಆಫ್ರಿಕಾದ ಸಹರಾ ಪ್ರದೇಶದಲ್ಲಿನ ವಿನಾಶಲೀಲೆಯನ್ನು ಊಹಿಸಬಹುದು.


ಜನ-ಪರ ಯೋಜನೆಗಳಲ್ಲಿ ಕಡಿತ

ಆಹಾರ ಭದ್ರತೆಯ ವಿಷಯದಲ್ಲೂ ಯೋಜನಾ ಆಯೋಗದ ಈ ದಸ್ತಾವೇಜಿನಲ್ಲಿ ಇಂತಹುದೇ ನಿಲುವು. ಇದೇ ಟಿಪಿಡಿಎಸ್, ಅಂತ್ಯೋದಯ ಅನ್ನ ಯೋಜನಾ, ಮಧ್ಯಾಹ್ನದ ಊಟದ ಯೋಜನೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಕೂಲಿಗಾಗಿ ಕಾಳು ಯೋಜನೆ ಇವನ್ನೆಲ್ಲ 'ತರ್ಕಬದ್ಧ' ಗೊಳಿಸಬೇಕಂತೆ! ಈ ಯೋಜನೆಗಳ ವ್ಯಾಪ್ತಿಯನ್ನು ಕಡಿತ ಮಾಡಬೇಕೆಂಬುದೇ ಈ 'ತರ್ಕಬದ್ಧ'ತೆಯ ನಿಜವಾದ ಅರ್ಥ ಎಂದು ನಮಗೆ ಗೊತ್ತಿದೆ. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗೆ ಸಾಮಾಜಿಕ ನ್ಯಾಯದ ಹತ್ತನೇ ಯೋಜನೆಯ ಗುರಿಗಳು ಈಡೇರಲಿಕ್ಕಿಲ್ಲ ಎಂದು ಹೇಳುವುದಕ್ಕೇ ಈ ದಸ್ತಾವೇಜು ತೃಪ್ತಿಪಟ್ಟುಕೊಳ್ಳುವಂತಿದೆ. ಶಿಕ್ಷಣದ ಬಗ್ಗೆಯೂ ಇಂತಹುದೇ ನಿಲುವು.

ಭೂ ವಿತರಣೆ ಮತ್ತು ಬುಡಕಟ್ಟು ಜನಗಳಿರುವ ಅರಣ್ಯ ಅಭಿವೃದ್ಧಿಯ ಪ್ರಶ್ನೆಯನ್ನು ಕುರಿತಾದ ಯೋಜನೆಯ ಪ್ರಸ್ತಾವಗಳನ್ನು ಬಹಳ ಹಗುರವಾಗಿ ಕಾಣಲಾಗಿದೆ 'ಸ್ಥಳೀಯ ಸಮುದಾಯಗಳಿಗೆ ಭೂ ಒಡೆತನ ನೀಡದಿರುವುದು ಒಂದು ದೊಡ್ಡ ಅಡ್ಡಿ' ಎಂದು ಅದಕ್ಕೆ ಕಂಡರೂ ಅದರ ಕಣ್ಣು ನೆಟ್ಟಿರುವುದು ಭೂಮಾಲಕರ ಕೈಯಲ್ಲಿರುವ ಜಮೀನಲ್ಲ, ಸಾರ್ವಜನಿಕ ವಲಯದ ಘಟಕಗಳ ಕೈಯಲ್ಲಿರುವ ಜಮೀನು ಮಾತ್ರ. ಇದೇ ಗ್ರಾಮೀಣ ಆರ್ಥಿಕದ ಪರಿವರ್ತನೆಗೆ ಅಡ್ಡಿಯಂತೆ!

ಕೇಂದ್ರ ಈಗ ಟಾಂಟಾಂ ಮಾಡುತ್ತಿರುವ ಉದ್ಯೋಗ ಖಾತರಿ ಯೋಜನೆಯ ಬಗ್ಗೆಯೂ ಈ ದಸ್ತಾವೇಜು, ಈ ಯೋಜನೆಗೆ 21,000 ರಿಂದ 40,000 ಕೋಟಿ ರೂ.ಗಳು ಬೇಕಾದೀತೆನ್ನುವ ಅದು ಇದನ್ನು ಅನುಸರಿಸುವುದು 'ಒಟ್ಟಾರೆ ಸಂಪನ್ಮೂಲ ಚಿತ್ರ ಮತ್ತು ಇತರ ವಲಯಗಳ ಬೇಡಿಕೆಗಳ' ಮೇಲೆ ಅವಲಂಬಿಸಿದೆ ಎನ್ನುತ್ತದೆ. ಯೋಜನಾ ಆಯೋಗದ ದೃಷ್ಟಿಯಲ್ಲಿ ಈ ಕುರಿತಾದ ಮಸೂದೆ ಕೇವಲ ಕಣ್ಣೊರೆಸಲು, ಅದರ ಮರೆಯಲ್ಲಿ ಈಗಾಗಲೇ ನಮ್ಮ ಆರ್ಥಿಕದ ಬಹುಪಾಲು ವಲಯಗಳಿಗೆ ವಿನಾಶ ತಂದೊಡ್ಡಿದ್ದರೂ ಅವೇ ಆರ್ಥಿಕ ನೀತಿಗಳನ್ನು ಮುಂದುವರೆಸ ಲಾಗುತ್ತದೆ ಎಂಬುದು ಸ್ಪಷ್ಟ.

ಯೋಜನಾ ಆಯೋಗದ ಈ ದಸ್ತಾವೇಜು ವಿದ್ಯುಚ್ಛಕ್ತಿ, ಕಾನೂನು, 2003 ನ್ನು ಹಾಡಿ ಹೊಗಳುತ್ತದೆ ಮತ್ತು ಅದನ್ನು ಅನ್ವಯಿಸದಂತೆ ತಡೆಯುವ ರಾಜ್ಯ ಸರ್ಕಾರಗಳ 'ಅಗ್ಗದ ಜನಪ್ರಿಯತೆ'ಯ ನಿಲುವನ್ನು ಟೀಕಿಸುತ್ತದೆ. ಬಹುಶಃ ಎನ್ರೋನ್ ಅನುಭವ, ಅದಕ್ಕೆ ಅರ್ಥವಿಲ್ಲದ್ದು. ವಿದೇಶಿ ನೇರ ಹೂಡಿಕೆಯ ಬಗ್ಗೆ ಹಾಗೂ ಈಗಿರುವ ಕಾರ್ಮಿಕ ಕಾನೂನುಗಳ ಬದಲಾವಣೆಯ ಕರೆಗಳು ಸಾಕಷ್ಟು ಬಲವಾಗಿ ಸ್ಪಷ್ಟವಾಗಿ ಇವೆ. ಈಗಿರುವ ಕಾನೂನುಗಳ ಅಡೆ-ತಡೆಗಳೇನೂ ಇಲ್ಲದೆ ಭಾರತೀಯ ಜನತೆಯನ್ನು ಶೋಷಿಸಲು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡಲಾಗುವುದು ಎಂಬುದು ಸ್ವಯಂವೇದ್ಯ. ಇದು ಈಗಾಗಲೇ ಹತಭಾಗ್ಯ ಜನ ತಮ್ಮ ಮಕ್ಕಳನ್ನು ಮಾರುತ್ತಿರುವ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಮತ್ತು ಎರಡು ಹೊತ್ತಿನ ಕೂಳನ್ನೂ ಪಡೆಯಲಾಗದ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿರುವವರ ಪರಿಸ್ಥಿತಿಗಳನ್ನು ಹೇಗೆ ಉತ್ತಮಗೊಳಿಸುತ್ತದೆ ಎಂಬುದನ್ನು ನೀವೇ ಊಹಿಸಿಕೊಳ್ಳಬೇಕು. ನಮ್ಮ ಆರ್ಥಿಕ ತಜ್ಞರು ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗೆ ಯೋಜನಾ ಆಯೋಗದ ಅಡಿಯಾಳುತನಕ್ಕೆ ಸವಾಲು ಹಾಕಿರುವುದು ಸಂತೋಷದ ಸಂಗತಿ. ಜನತೆ ಸಮಾನ ಕನಿಷ್ಠ ಕಾರ್ಯಕ್ರಮದ ಅಂಶಗಳನ್ನು ಮಾರ್ಗದರ್ಶನವಾಗಿ ಇಟ್ಟುಕೊಂಡು ಈ ನೀತಿಗಳಿಗೆ ಸವಾಲು ಹಾಕಿ, ಅದನ್ನು ತಮ್ಮ ಅನುಕೂಲಕ್ಕೆ ಪರಿವರ್ತಿಸಿಕೊಳ್ಳಬೇಕು. ಬೇರಾವ ಮಾರ್ಗವೂ ಇಲ್ಲ.



ಪಠ್ಯ ಪುಸ್ತಕಗಳಲ್ಲಿ ಇತಿಹಾಸ - ವಿವಾದವೇನು?

ರ್ಣಟಕದಲ್ಲಿ ಇತಿಹಾಸದ ಠ್ಯ ಪುಸ್ತಕಗಳಲ್ಲಿ ವಸ್ತು ವರಗಳಿಗೆ ಸಂಬಂಧಿಸಿ ವಾದ ಎದ್ದಿದೆ. ಇದು ರೋಪ-ಪ್ರತ್ಯಾರೋಪದ ಟ್ಟಕ್ಕೆ ತಲುಪಿರುವಾಗ ಅದರ ್ಯಾಸತ್ಯತೆಗಳನ್ನು ವಲೋಕಿಸಿದ್ದಾರೆ ವಿದ್ಯಾರ್ಥಿ ಯಕ ಆರ್.ರಾಮಕೃಷ್ಣ

ಇತ್ತೀಚಿನ ದಿನಗಳಲ್ಲಿ ಶಾಲಾ ಪಠ್ಯಪುಸ್ತಕಗಳ ಳಿನ ಕುರಿತ ವಿವಾದದ ಧೂಳು ಮತ್ತೊಮ್ಮೆ ಲೆದ್ದಿದೆ. ಭಾರತೀಯ ಜನತಾಪಕ್ಷ (ಬಿಜೆಪಿ)ಯ ತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಷ್ಟು ವೂ ಈ ವಿವಾದದ ಸಂಬಂಧ ತೀವ್ರ ವಾಗ್ವಾದ ರ್ಚೆಗಳು ನಡೆಯುತ್ತಿದ್ದವು ಎಂಬುದನ್ನು ಇಲ್ಲಿ ಪಿಸಿಕೊಳ್ಳಬಹುದು. ರಾಷ್ಟ್ರೀಯ ಸ್ವಯಂ ಸೇವಕ ಘದ ವಿಷಪೂರಿತ ಮತಾಂಧ ವಿಚಾರಗಳನ್ನು ್ಯಂತ ಕುತಂತ್ರ-ಪ್ರಜಾಪ್ರಭುತ್ವ ವಿರೋಧಿ ಾನಗಳಲ್ಲಿ ಪಠ್ಯಗಳಲ್ಲಿ ತುರುಕುವ ವ್ಯವಸ್ಥೆ, ಯತ್ನವು ನಡೆಯತೊಡಗಿದಾಗ ರಾಷ್ಟ ಜ್ಞಾವಂತ ಜನತೆ, ಇತಿಹಾಸಕಾರರು - ಸಮಾಜ ಸ್ತಜ್ಞರು ಆಗ ಪ್ರಖರ ಸೈದ್ಧಾಂತಿಕ ಸಮರವನ್ನೇ ಡಿದ್ದರು. ಭಾರತ ವಿದ್ಯಾರ್ಥಿ ಫೆಡರೇಷನ್ FI) ಕರ್ನಾಟಕ ರಾಜ್ಯದಲ್ಲಿ, ರಾಷ್ಟದಲ್ಲೂ ಈ ೀಮುವಾದ ವಿರೋಧಿ ಸಂಘರ್ಷದಲ್ಲಿ ಂದಿತ್ತು ಎಂಬ ಅಂಶವನ್ನು ನಾವು ಇಲ್ಲಿ ಪಿಸಿಕೊಳ್ಳಬೇಕು.

ಈಗ ಕರ್ನಾಟಕ ರಾಜ್ಯದ ಶಾಲಾ ಪಠ್ಯಗಳ ತು ಎದ್ದಿರುವ ವಿವಾದವೂ ಇದಕ್ಕೆ ನೇರವಾಗಿ ಬಂಧಿಸಿದ್ದಾಗಿದೆ. ಎಸ್ಸೆಫ್ಐ ಮತ್ತು ಇತರ ಹಲವು ಜ್ಞಾವಂತರ ಪ್ರತಿರೋಧದಿಂದಾಗಿ ಕರ್ನಾಟಕದ ಲಾ ಪಠ್ಯಗಳಲ್ಲಿ ಈಗ ಹಲವು ಬದಲಾವಣೆಗಳು ವೆ. ಕೋಮುವಾದದ ವಿಷವನ್ನು ಪಠ್ಯದಿಂದ ರ್ಣ ನಿವಾರಿಸಿಲ್ಲವಾದರೂ ಈ ಬಗ್ಗೆ ಹಲವು ಂಗಳನ್ನು ಕೈಗೊಳ್ಳಲಾಗಿದೆ. ಡಾ. ಸೂರ್ಯನಾಥ ಮತ್ ಎಂಬ ಇತಿಹಾಸಕಾರರೆಂಬುವವರು ಈಗ ಾರೆತ್ತಿದ್ದಾರೆ. ಪತ್ರಿಕೆಯ ವಾಚಕರ ವಾಣಿಗಳ ೂಲಕ ವ್ಯಾಪಕವಾಗಿ ಈ ಸಂಬಂಧ ್ಷೆಯನ್ನೆತ್ತಲು 'ಸಂಘ'ಟಿತ ಯತ್ನ ನಡೆದಿದೆ. ಘ ಪರಿವಾರದ ಅಂಗವಾದ ಅಖಿಲ ಭಾರತ ್ಯಾರ್ಥಿ ಪರಿಷತ್ ಈ ಎಲ್ಲಾ ಯತ್ನವನ್ನು ಣದ 'ರಾಷ್ಟ್ರೀಕರಣ', 'ಭಾರತೀಕರಣ'ದ ಸರಿನಲ್ಲಿ ಈ ಕೇಸರೀಕರಣವನ್ನು ರ್ಥಿಸಿಕೊಂಡು ಬೊಬ್ಬಿಡುತ್ತಿದೆ.

ಈ ವಿವಾದದ ಸಂಬಂಧ ಪತ್ರಿಕೆಗಳಲ್ಲಿ ಹಲವು ಖನಗಳೂ, ಸಂಪಾದಕೀಯಗಳು ಟಗೊಂಡಿವೆ. ಪಠ್ಯಪುಸ್ತಕ ರಚನಾ ಸಮಿತಿಯ ಜಿ - ಹಾಲಿ ಪ್ರಮುಖರ ಸಂದರ್ಶನಗಳು ಸ್ಪರ ಆರೋಪ ಪ್ರತ್ಯಾರೋಪಗಳು ನಡೆದಿವೆ. ಕೋಮುವಾದ-ಕೇಸರೀಕರಣವನ್ನು ತೊಡೆದು ಕುವ ಜವಾಬ್ದಾರಿ ಹೊತ್ತಿರುವವರೂ ಸಹ ರ ಪರವಾಗಿ ಸಮರ್ಥವಾಗಿ ಬಹಿರಂಗ ಾರ ಮಂಡಿಸಲು ಅಸಮರ್ಥರಾಗಿರುವುದು ವಿವಾದನೀಯ ವಿಷಯಗಳಲ್ಲಿ ಒಂದು.

ತ್ತು ಹಿಂದೆ - ಏನಾಗಿದೆ ಈಗ ?

ಇತ್ತೀಚಿನ ಕೇಸರೀಕರಣಗೊಂಡ ಪಠ್ಯಗಳಲ್ಲಿನ ವು ವಿವರಗಳನ್ನು ಇಲ್ಲಿ ನೀಡಲಾಗಿದೆ. ಈ ರಗಳನ್ನು ಗಮನಿಸಿದ ಯಾವುದೇ ಇತಿಹಾಸದ ್ಯಾರ್ಥಿ ಅದು 'ಮನುಸ್ಮೃತಿ'ಯ ಅನಾಗರೀಕ - ಾಜಿಕ ಮೌಲ್ಯಗಳ ಆಧಾರದ 'ಹಿಂದೂ ರಾಷ್ಟ' ನೆಯನ್ನು ಸಮಾಜದ ಮೇಲೆ ಹೇರುವ ವ್ಯವಸ್ಥಿತ ುತ್ನ ಮತ್ತು ಅನ್ಯಮತ ದ್ವೇಷ-ಅಸಹನೆಯನ್ನು ಚರಿಸಿ ಸಮಾಜದಲ್ಲಿ ಫ್ಯಾಸಿಸ್ಟ್ ಧಿಕಾರವನ್ನು ಹೇರುವ ಪ್ರಯತ್ನ ಎಂಬುದನ್ನು ಸದೇ ಹೋದರೆ ಅವರ ಅಜ್ಞಾನಕ್ಕಾಗಿ ನಾವು ದ ಬಗೆಗೆ ಮರುಕ ಪಡಬಹುದಷ್ಟೇ.

ಸತೀ ಪದ್ಧತಿಯ ಸಮರ್ಥನೆ

6ನೇ ತರಗತಿಯ 'ಸಮಾಜ ವಿಜ್ಞಾನ'ದಲ್ಲಿ ರಜಪೂತರ ಕುರಿತ ಪಾಠ ಸತಿಪದ್ಧತಿಯನ್ನು ಬಣ್ಣಿಸಲು ಬಳಸಿದ ಶಬ್ದಗಳು 'ಸ್ವಾಭಿಮಾನ' ಮತ್ತು 'ಧೈರ್ಯ'. ಯಾವುದೇ ನಾಗರಿಕ ಸಮಾಜ ಸತೀ ಪದ್ಧತಿಯಂತಹ ಕ್ರೂರ ಅನಾಗರಿಕ ಪದ್ಧತಿಯನ್ನು ಪಠ್ಯಪುಸ್ತಕಗಳು ಯಾವುದೇ ಕಾರಣಕ್ಕಾದರೂ ಸರಿ ಸಮರ್ಥಿಸುವುದನ್ನು ಸಹಿಸುವುದು ಸಾಧ್ಯವೇ? ಪ್ರಗತಿಪರ ವ್ಯಕ್ತಿ, ಸಂಘಟನೆಗಳ ವಿರೋಧದಿಂದಾಗಿ ಹೊಸ ಪಠ್ಯದಲ್ಲಿ ಈ ವಿಚಾರ ಕೈಬಿಡಲಾಗಿದೆ. ಸತೀ ಪದ್ಧತಿಯನ್ನು ಸ್ಪಷ್ಟವಾಗಿ ಒಂದು ಸಾಮಾಜಿಕ ಅನಿಷ್ಟವೆಂದು ಸಾರಲಾಗಿದೆ.

ಜಾತಿ ವ್ಯವಸ್ಥೆಯನ್ನು ಮರೆ ಮಾಚುವ ವ್ಯವಸ್ಥಿತ ಹುನ್ನಾರ

ಕೇಸರೀಕರಣಗೊಂಡ ಪಠ್ಯಗಳು ಬೌದ್ಧ ಧರ್ಮ-ಜೈನ ಧರ್ಮಗಳ ಉದಯದ ಕುರಿತು ಹೇಳುವುದೇನು? ಅಂದಿನ ಸಂದರ್ಭದಲ್ಲಿ ತಾರಕಕ್ಕೇರಿದ ಜಾತಿ ಶ್ರೇಣೀಕರಣ - ಅಸಮಾನತೆ - ಪುರೋಹಿತಶಾಹಿ ಶೋಷಣೆ, ಧಾರ್ಮಿಕ ಢಂಬಾಚಾರ - ಹಿಂಸೆಗಳ ವಿರುದ್ಧ ಜನರ

ಶಾಲಾ ಮಕ್ಕಳಿಗೆ ಆಗಲಿ ಸಾಮಾಜಿಕ, ಆರ್ಥಿಕ ಶೋಷಣೆ, ಅನ್ಯಾಯ-ವಂಚನೆಗಳನ್ನು ಮುಂದಾದರೂ ನಿವಾರಿಸುವ ಚಿಕಿತ್ಸಕ ದೃಷ್ಟಿ ಬೆಳೆಸಬೇಕೇ? ಅಥವಾ ಅವುಗಳನ್ನು ಬೆಂಬಲಿಸಿ ಬಲಪಡಿಸುವ ಅಥವಾ ಮರೆಮಾಚಿ ನಿರ್ಲಕ್ಷಿಸುವ ನೀತಿಯನ್ನು ಬೆಳೆಸಬೇಕೆ?

ಪ್ರತಿಭಟನೆಯ ಮೂರ್ತರೂಪವಾಗಿ ಬೌದ್ಧ-ಜೈನ ಧರ್ಮಗಳು ಬೆಳೆದುಬಂದವು ಎಂಬ ಚಾರಿತ್ರಿಕ ಸತ್ಯವನ್ನು ಮರೆ ಮಾಚಿ ಆ ಹೊತ್ತಿಗಾಗಲೇ ಉಪ ನಿಷತ್ತುಗಳು 'ಜ್ಞಾನ ಮಾರ್ಗ'ದ ಮೂಲಕ ಮೋಕ್ಷ ಸಾಧನೆಯನ್ನು, ಆತ್ಮಜ್ಞಾನವನ್ನು ಪ್ರತಿಪಾದಿಸಿದ್ದವು. ಇದು ಬೌದ್ಧ-ಜೈನ ಧರ್ಮಗಳ ಸ್ಥಾಪನೆಗೆ ಪ್ರೇರಣೆ ನೀಡಿದವೆಂದು ಪ್ರತಿಪಾದಿಸಲಾಗಿದೆ.

ಇದೇ ಐದನೇ ತರಗತಿಯ ಪಠ್ಯದಲ್ಲಿ ಆರ್ಯರ ಮೂಲ 'ಮಧ್ಯ ಏಷ್ಯಾ' ಎಂಬ ಪ್ರಸ್ತಾಪವನ್ನೇ ಮಾಡದೇ ಆರ್ಯರು ಭಾರತದ ಮೂಲ ನಿವಾಸಿಗಳನ್ನು ಎಂದೂ ಆರ್ಯರ ನಾಗರಿಕತೆ - ಹರಪ್ಪ -ಮಹೆಂಜೋದಾರೋ ನಾಗರಿಕತೆ ಎರಡೂ ಒಂದೇ ಎಂದು ಇತಿಹಾಸವನ್ನು ಅತ್ಯಂತ ವಿಕೃತವಾಗಿ ತಿರುಚಲಾಗಿದೆ. ಯಾವುದೇ ಖಚಿತ ಸಾಕ್ಷಿ-ವೈಜ್ಞಾನಿಕ ಪುರಾವೆಗಳಿಲ್ಲದೆ ಇದ್ದರೂ ಸ್ವರಸ್ವತಿ ಎಂಬ ನದಿಯೊಂದು ಇತ್ತು ಎಂದು ಖಚಿತವಾಗಿ ಸಾರಲಾಗಿದೆ. ಇಂತಹ ಚಾರಿತ್ರಿಕ ವಿಕೃತಿಗಳನ್ನು ಸರಿಪಡಿಸುವ ಸಂಬಂಧ ಕರ್ನಾಟಕದಲ್ಲಿ ತಜ್ಞರ ಸಮಿತಿಗಳು ನೇಮಕವಾಗಿದ್ದರೂ, ಅವರೇ ಏನೇ ವರದಿ ಶಿಫಾರಸ್ಸುಗಳನ್ನು ಕೊಟ್ಟಿದ್ದರೂ ಈಗಲೂ ಪರಿಷತ ಪಠ್ಯದಲ್ಲಿಯೂ ಹಲವಾರು ವಿಕೃತಿಗಳನ್ನು ತಿದ್ದದೇ ಹಾಗೆಯೇ ಉಳಿಸಲಾಗಿದೆ. ಸರ್ಕಾರ ಈ ಬಗ್ಗೆ ಗಂಭೀರ ಮುತುವರ್ಜಿ ವಹಿಸಲ್ಲವೆಂಬುದು ಎಸ್ಸೆಫೈನ ತೀವ್ರ ಆಕ್ಷೇಪವಾಗಿದ್ದರೆ, ಡಾ. ಸೂರ್ಯನಾಥ ಕಾಮತ್‌ರ ಆಕ್ಷೇಪ - ಹಳಹಳಿಕೆ ಬೇರೆಯೇ ಆಗಿದೆ.

ಅವರ ಘನ ಮಾರ್ಗದರ್ಶನ ಸಮಿತಿ ರಚಿಸಿದ್ದ, ಪಠ್ಯಗಳಲ್ಲಿನ ಸತಿ ವೈಭವೀಕರಣದ ಅಂಶಗಳನ್ನು ತೆಗೆಯುವುದು ಜಾತಿ ಶ್ರೇಣೀಕರಣ - ಸಾಮಾಜಿಕ ಅಸಮಾನತೆ ಪುರೋಹಿತಶಾಹಿ ವಂಚನೆ ಕುರಿತು ಸರಿಯಾಗಿ ನಿರೂಪಿಸುವುದು ಮುಂತಾದ ಬದಲಾವಣೆಗಳನ್ನು ಎಷ್ಟು ಮಾತ್ರವೂ ಅವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇಲ್ಲ ಸಲ್ಲದ ನೆಪ ಹುಡುಕಿ ಹರಿಹಾಯುತಿದ್ದಾರೆ.

7ನೇ ತರಗತಿಯ ಪಠ್ಯ ಪುಸ್ತಕಗಳಲ್ಲಿ 'ವೀರ' ಸಾವರ್‌ಕರ್, ಭಗತ್ ಸಿಂಗ್ ಮುಂತಾದವರ ಚಿತ್ರ ಮತ್ತು ವಿವರಗಳನ್ನು ತೆಗೆಯಲಾಗಿದೆ ಎಂಬುದು ಕಾಮತ್‌ರವರ ಆಕ್ಷೇಪಗಳಲ್ಲಿ ಒಂದು. ಪಠ್ಯ ಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದ ಉಪಸಮಿತಿಯ ಪ್ರಮುಖರಾದ ಎಸ್. ಶೆಟ್ಟರ್ ಈ ಬಗೆಗೆ ಸ್ಪಷ್ಟನೆ ನೀಡಿದ್ದಾರೆ. ಭಗತ್ ಸಿಂಗ್ ಕುರಿತ ವಿವರಗಳನ್ನು 10ನೇ ತರಗತಿಯ ಪಠ್ಯದಲ್ಲಿ (ಮುಂದೆ) ಸೇರ್ಪಡೆಗೊಳಿಸಲಾಗುವುದು. ಸಾವರ್‌ಕರ್ ಕುರಿತು ಈಗಾಗಲೇ ಪ್ರೌಢಶಾಲೆ ಪಠ್ಯಗಳಲ್ಲಿ ಪ್ರಸ್ತಾಪ ಇದೆ. ಹಾಗಾಗಿ ಕೈಬಿಡಲಾಗಿದೆ. ಡಾ. ಕಾಮತ್‌ರ ಮಾರ್ಗದರ್ಶನದ ಸಮಿತಿ ರಚಿಸಿದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ಬ್ರಾಹ್ಮಣೇತರ ವ್ಯಕ್ತಿಗಳ ಹಾಗೂ ಚಳುವಳಿಗಳಿಗೆ ಸರಿಯಾದ ನ್ಯಾಯ ಸಿಕ್ಕಿಲ್ಲವೆಂಬ ಗಂಭೀರ ಅಂಶವನ್ನು ಎಸ್.ಶೆಟ್ಟರ್ ಹೊರಗೆಳೆದಿದ್ದಾರೆ. ಈ ದೃಷ್ಟಿಯಿಂದಲೂ ಪಠ್ಯಗಳ ವಿಮರ್ಶೆ ಅಗತ್ಯವಾಗಿತ್ತು.

ಆದರೆ ಇಲ್ಲಿ ಒಂದು ವಿಷಯ ಗಮನಿಸಬೇಕು. ಕಾಮತ್‌ರವರು ಭಗತ್ ಸಿಂಗ್, ಸಾವರ್ ಕರ್ ಪರವಾಗಿ ಮಾತನಾಡುತ್ತಿದ್ದರೂ ಅವರ ಅಂತರಂಗದ ಪ್ರೀತಿ ಇರುವುದು ಸಾವರ್‌ಕರ್ ಕುರಿತು. ಇದು ಪಠ್ಯದಲ್ಲಿಯೂ ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. 'ವಂದೇ ಮಾತರಂ' ಎನ್ನುತ್ತಾ ನೇಣುಗಂಬವೇರಿದ ಕ್ರಾಂತಿಕಾರಿಗಳ ಬಗೆಗೆ ಎಲ್ಲ ವಿವರ ಇದೆ. ಆದರೆ ಭಗತ್ ಸಿಂಗ್‌ರ 'ಇನ್‌ಕ್ವಿಲಾಬ್' ಘೋಷಣೆಯ ಬಗೆಗೆ ಯಾವುದೇ ಚಕಾರವಿಲ್ಲ.

ಕಾಮತ್ ಮಾರ್ಗದರ್ಶನದ ಪಠ್ಯದಲ್ಲಿ ದೇಶ ವಿಭಜನೆಗೆ ಕೇವಲ ಮುಸ್ಲಿಂ ಲೀಗ್ ಮತ್ತು ಬ್ರಿಟೀಷರ ಒಡೆದು ಆಳುವ ತಂತ್ರಗಳು ಮಾತ್ರ ಕಾರಣವೆಂಬಂತೆ ಚಿತ್ರಿಸಲಾಗಿದೆ. ಪರಿಷತ ಪಠ್ಯದಲ್ಲಿ ಇವುಗಳ ಜೊತೆಗೆ ದೇಶ ವಿಭಜನೆಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪಾತ್ರವನ್ನು, ದೇಶದ ಐಕ್ಯತೆಗೆ ಆರ್‌ಎಸ್‌ಎಸ್ ನ ಹಿಂದೂ ರಾಷ್ಟ್ರದ ಕಲ್ಪನೆ ನೀಡಿದ ಆಘಾತವನ್ನು ಗುರುತಿಸಲಾಗಿದೆ. ಎಲ್ಲಬಗೆಯ ಕೋಮುವಾದವನ್ನು ಸಮಾನವಾಗಿ ಗುರುತಿಸಬೇಕೆಂಬ ಧೋರಣೆಗೆ ಪೂರಕವಾಗಿ ಆರ್‌ಎಸ್‌ಎಸ್ ನಿಜವಾದ ಕೋಮುವಾದಿ ಸ್ವರೂಪವನ್ನು ಪಠ್ಯವು ಗುರುತಿಸಿರುವುದೇ ಕಾಮತ್‌ರ ತೊಳಲಾಟದ ಮತ್ತೊಂದು ಮೂಲ ಕಾರಣವಾಗಿದೆ.

ಹೀಗೆ ಪಠ್ಯ ಪುಸ್ತಕಗಳಲ್ಲಿ ಕೋಮು ಪಕ್ಷಪಾತದ ಧೋರಣೆ ಮುಂದುವರಿದರೆ ಸಮಾಜದ ಮೇಲೆ ಆಗಬಹುದಾದ ಗಂಭೀರ ದುಷ್ಪರಿಣಾಮಗಳ ಬಗೆಗೆ ಸ್ವಲ್ಪವಾದರೂ ಕಣ್ಣೋಟವುಳ್ಳವರು ಇದನ್ನು ನಿರ್ಲಕ್ಷಿಸುವುದು ಸಾಧ್ಯವೇ.

ರಾಜಕೀಯ ರಹಿತ ಶಿಕ್ಷಣ - ಎಂಬ ಸಿನಿಕತನ

ಪಠ್ಯಪುಸ್ತಕಗಳಲ್ಲಿ ರಾಜಕೀಯ ಬೆರೆಸಲಾಗಿದೆ ಎಂಬುದು ಆರೋಪ - ಪ್ರತ್ಯಾರೋಪಗಳಲ್ಲಿನ ಒಂದು ಮುಖ್ಯ ಅಂಶ. ಹಲವು ಪತ್ರಿಕೆಗಳ ಸಂಪಾದಕೀಯಗಳೂ ಲೇಖನಗಳೂ ಇದನ್ನೇ ಟೀಕಿಸಿ ರಾಜಕೀಯ ರಹಿತ ಪಠ್ಯನೀತಿ ಪ್ರತಿಪಾದಿಸಿವೆ. ಡಾ. ಕಾಮತ್‌ರವರಂತೂ ಶಿಕ್ಷಣ ಎಡಪಂಥೀಯ ಪ್ರಭಾವಕ್ಕೆ ತುತ್ತಾಗಿ ಹಾನಿಗೊಳಗಾಗಿದೆ ಎಂದು ಪ್ರಲಾಪಿಸಿದ್ದಾರೆ.

ನಿಜವಾಗಿಯೂ ರಾಜಕೀಯ ರಹಿತ ಇತಿಹಾಸ - ರಾಜಕೀಯ ರಹಿತ ಶಿಕ್ಷಣ ಎಂಬುದು ಸಾಧ್ಯವೇ ಎಂಬುದು ಒಂದು ಗಂಭೀರ ಪ್ರಶ್ನೆಯಾಗಿದೆ.

ಗುಪ್ತರ ಕಾಲವನ್ನು ಎಲ್ಲ ಪಠ್ಯಗಳೂ 'ಸುವರ್ಣಯುಗ'ಗಳೆಂದು ವೈಭವೀಕರಿಸುತ್ತಿರುವ ಸಂಬಂಧದಲ್ಲಿ ಲಿಂಗ ಅಸಮಾನತೆ - ಸಾಮಾಜಿಕ - ಆರ್ಥಿಕ ಅಸಮಾನತೆಯನ್ನು ಅಮಾನವೀಯ - ಕರಾಳ ಕಟ್ಟಳೆಗಳನ್ನು ಪ್ರತಿಪಾದಿಸುವ 'ಮನುಸ್ಮೃತಿ'ಯು ಪ್ರಬಲಗೊಂಡು ಆಳವಾಗಿ ಬೇರುಬಿಟ್ಟ ಗುಪ್ತರ ಕಾಲವನ್ನು ಸುವರ್ಣಯುಗ ಎಂದು ಕರೆಯುವುದು ಹೇಗೆಂದು ನೀವು ಪ್ರಶ್ನೆ ಎತ್ತಿದರೆ ನಿಮ್ಮನ್ನು ಎಡಪಂಥೀಯ ಕಮ್ಯುನಿಸ್ಟರೆಂದು ದೂರಲಾಗುತ್ತದೆ.

ಇದರಲ್ಲಿ ದೂರುವಂತದ್ದೇನಿದೆ. ಗುಪ್ತರ ಕಾಲವನ್ನು ಸುವರ್ಣಯುಗ ಎನ್ನುವುದು ಆಳುವ ವರ್ಗದ ಪರವಾದ ದೃಷ್ಟಿಕೋನ. ರಾಜಮಹಾರಾಜರು ಪುರೋಹಿತರು ವ್ಯಾಪಾರಸ್ಥರು ಮುಂತಾದ ಶೋಷಕರಿಗೆ ಅದು ಸುವರ್ಣ ಯುಗವೇ ಹೌದು. ಗುಪ್ತರ ಕಾಲದಲ್ಲಿ ಅಸ್ಪೃಶ್ಯರ-ಮಹಿಳೆಯರ-ಕೆಳಜಾತಿಯ ಜನರ ಹಾಗೂ ದುಡಿಯುವ ಜನರ ಬದುಕು ಹೇಗಿತ್ತು ಎಂದು ಪ್ರಶ್ನಿಸುವುದು ದುಡಿಯುವ ವರ್ಗದ ದೃಷ್ಟಿ. ಇದರಲ್ಲಿ ಯಾವುದು ಜನಪರ ದೃಷ್ಟಿ. ಯಾವುದು ನಮಗೆ ಬೇಕಾದದ್ದು. ಇವು ಸ್ಪಷ್ಟವಾಗಿ ರಾಜಕೀಯ ದೃಷ್ಟಿಕೋನ ಚಿಂತನೆಗಳಿಗೆ ಸಂಬಂಧಿಸಿದ ವಿಚಾರ. ಇದರಲ್ಲಿ ರಾಜಕೀಯ ರಹಿತವಾದದ್ದು ಎಂಬ ವಿಚಾರ ಇಲ್ಲ. ನಾವು ಯಾರ ಪರ ಎಂಬುದರ ಮೇಲೆ ನಮ್ಮ ದೃಷ್ಟಿ ತೀರ್ಮಾನವಾಗುತ್ತದೆ. ಹೀಗಾಗಿಯೇ ಇತಿಹಾಸ-ಆರ್ಥಿಕತೆ-ಸಮಾಜ ಎಲ್ಲವನ್ನು ನೋಡುವ ದೃಷ್ಟಿಕೋನದಲ್ಲಿ ಸ್ಪಷ್ಟವಾಗಿ ವ್ಯತ್ಯಾಸಗಳಿವೆ. ಶಾಲಾ ಮಕ್ಕಳಿಗೆ ಆಗಲಿ ಸಾಮಾಜಿಕ, ಆರ್ಥಿಕ ಶೋಷಣೆ, ಅನ್ಯಾಯ-ವಂಚನೆಗಳನ್ನು ಮುಂದಾದರೂ ನಿವಾರಿಸುವ ಚಿಕಿತ್ಸಕ ದೃಷ್ಟಿ ಬೆಳೆಸಬೇಕೇ? ಅಥವಾ ಅವುಗಳನ್ನು ಬೆಂಬಲಿಸಿ ಬಲಪಡಿಸುವ ಅಥವಾ ಮರೆಮಾಚಿ ನಿರ್ಲಕ್ಷಿಸುವ ನೀತಿಯನ್ನು ಬೆಳೆಸಬೇಕೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಿದೆ. ○



ವೇದಿಕೆಯಲ್ಲಿ ಮನವಿ ಸ್ವೀಕರಿಸಲು ಬಂದ ಸಚಿವ ಶ್ರೀನಿವಾಸಗೌಡರೊಂದಿಗೆ ಕೆ.ಮಹಾಂತೇಶ್, ಉಮೇಶ್, ಶ್ರೀರಾಮರೆಡ್ಡಿ ಇತರರು

ಉದ್ಯೋಗ ನಾಶಕ್ಕೆ ಮುಂದಾಗಬೇಡಿ

ಧರಂ ಸಿಂಗ್ ಸರ್ಕಾರಕ್ಕೆ ಯುವಜನರ ಎಚ್ಚರಿಕೆ

ನಮ್ಮ ಬದುಕು ಬೀದಿ ಪಾಲು ಮಾಡಬೇಡಿ, ಕನಸುಗಳ ಕೊಲ್ಲದಿರಿ ಎಂದು ರಾಜಧಾನಿಗೆ ಆಗಮಿಸಿತು ಸಾವಿರಾರು ಯುವಜನರ ದಂಡು. ಅಲ್ಲಿ ಆಳುವವರನ್ನು ಮಣಿಸುವ ಹೋರಾಟದ ಛಲವಿತ್ತು. ಸಂಘಟನಾ ಬಲವಿತ್ತು. ರಾಜ್ಯಾದ್ಯಂತ ಹರಿದುಬಂದ ಈ ಯುವಸಮೂಹ ಎಲ್ಲರ ಗಮನ ಸೆಳೆಯಿತು. ಮಾಧ್ಯಮಗಳು ಕಣ್ಣು ಮುಚ್ಚಿ ಕುಂತ ಆ ರ್‍ಯಾಲಿಯ ಬಗ್ಗೆ ಸಂಘಟನೆಯ ಕಾರ್ಯದರ್ಶಿಯವರಿಂದ ವರದಿ.

ಅಕ್ಟೋಬರ್ 15 ರ ಮಧ್ಯಾಹ್ನ 1.30 ರ ಸಮಯ ನಮ್ಮ ರ್‍ಯಾಲಿ ಇನ್ನೇನೂ ಬನಪ್ಪ ಪಾರ್ಕ್‌ನತ್ತ ಸಾಗುತ್ತಿತ್ತು. ಪಕ್ಕದಲ್ಲಿ ಬಂದ ಸಿವಿಲ್ ಡ್ರಸ್‌ನಲ್ಲಿದ್ದ ಪೊಲೀಸ್‌ನೊಬ್ಬ ಹೇಳಿದ 'ಸಾರ್ ಈ ವರ್ಷದಲ್ಲಿ ಸುಮಾರು ಮುನ್ನೂರು - ನಾನ್ನೂರು ರ್‍ಯಾಲಿಗಳನ್ನು ನೋಡಿದ್ದೇನೆ. ಆದರೆ ಇಷ್ಟೊಂದು ಶಿಸ್ತುಬದ್ಧ ರ್‍ಯಾಲಿಯನ್ನು ನಾನು ನೋಡಲೇ ಇಲ್ಲ' ಅದೂ ಸಾವಿರಾರು ಸಂಖ್ಯೆಯಲ್ಲಿ ಯುವಜನರೇ ಭಾಗವಹಿಸಿದ ಈ ರ್‍ಯಾಲಿ ಇಷ್ಟೊಂದು ಶಿಸ್ತುಬದ್ಧವಾಗಿ ಸಾಗಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ.

ಹೌದು! ಯುವಜನರೆಂದರೆ ನಮ್ಮ ಸಮಾಜ ಅವರನ್ನು ನೋಡುವ ದೃಷ್ಟಿಕೋನವೆ ಹಾಗಿರುತ್ತದೆ. ಯಾರೋ ಪುಂಡರು, ಕಿಡಿಗೇಡಿಗಳು ನಡೆಸುವ ಸಮಾಜಘಾತುಕ ಕೃತ್ಯಗಳನ್ನೇ ಇಡೀ ಯುವಜನರ ಮೇಲೆ ಹಾಕಿ, ಆ ವಿಭಾಗ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಮರೆಮಾಚುವ ವ್ಯವಸ್ಥಿತ ಪಿತೂರಿ ಸಮಾಜದಲ್ಲಿ ನಡೆಯುತ್ತಲೇ ಇದೆ. ಹೀಗಾಗಿಯೇ ಗಣೇಶ, ಅಣ್ಣಮ್ಮ ಅಯ್ಯಪ್ಪ, ರಾಜ್ಯೋತ್ಸವ ಹಾಗೂ ಚುನಾವಣೆಗಳ ಹೆಸರಿನಲ್ಲಿ ನಮ್ಮ ಯುವಜನರನ್ನು ಅರಾಜಕೀಯಗೊಳಿಸಿ - ಅಪ್ರಬುದ್ಧರನ್ನಾಗಿಸಿ, ಅವರನ್ನು ಭಾವನಾತ್ಮಕವಾಗಿ ಉದ್ರೇಕಿಸಿ, ತಮ್ಮ ಎಲ್ಲಾ ಸಮಾಜವಿರೋಧಿ ಕೃತ್ಯಗಳಿಗೆ ಬಳಸಿ, ನಂತರ ಸಿಪ್ಪೆ ಮಾಡಿ ಬೀದಿಗೆ ಎಸೆಯುವ ಪರಿಪಾಠ ತೀವ್ರವಾಗಿ ಬೆಳೆದಿರುವುದು ಈ ದಿನಗಳಲ್ಲಿ.

ವ್ಯವಸ್ಥಿತ ಸಂಘಟನೆಯೊಂದಿಗೆ ಗುರುತಿಸಿಕೊಂಡ ಯುವಜನರು ಒಂದು ಶಿಸ್ತುಬದ್ಧ ಮೆರವಣಿಗೆ, ರ್‍ಯಾಲಿ ನಡೆಸುತ್ತಾರೆಂದರೆ ಅದನ್ನು ಆಶ್ಚರ್ಯದಿಂದ ನೋಡುವುದರಲ್ಲಿ ತಪ್ಪಿಲ್ಲ! ಈ ಕಾರಣದಿಂದಾಗಿಯೇ ನಮ್ಮ ರ್‍ಯಾಲಿಯನ್ನು ಗಮನಿಸಿದ ಪೊಲೀಸ್ ಆ ಮಾತು ಹೇಳಿರಬಹುದು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೇತೃತ್ವದಲ್ಲಿ ಅಕ್ಟೋಬರ್ 15 ರಂದು ಸಂಘಟಿಸಲಾಗಿದ್ದ 'ಬೃಹತ್ ವಿಧಾನಸೌಧ ಚಲೋ' ಕಾರ್ಯಕ್ರಮದಲ್ಲಿ ರಾಜ್ಯದಲ್ಲಿ ಮೂಲೆ-ಮೂಲೆಗಳಿಂದ ಆಗಮಿಸಿದ್ದ ಸಹಸ್ರಾರು ನಿರುದ್ಯೋಗಿ ಯುವಜನರು, ಸಾಕ್ಷರತಾ ಪ್ರೇರಕರು, ಕೃಪಾಂಕ ನೌಕರರು, ಬಿ.ಇಡಿ, ಬಿ.ಪಿ.ಇಡಿ, ಚಿತ್ರಕಲಾ ಪದವೀಧರರು, ಗ್ರಂಥಾಲಯ ಮೇಲ್ವಿಚಾರಕರು ಹೀಗೆ ಸುಮಾರು ನಾಲ್ಕು ಸಾವಿರಕ್ಕಿಂತಲೂ ಅಧಿಕ ಯುವಜನರು ಇದೇ ಪ್ರಥಮ ಬಾರಿಗೆ ಡಿವೈಎಫ್‌ಐ ನೇತೃತ್ವದಡಿ ಒಂದಾಗಿ ಭಾಗವಹಿಸಿದ್ದರು.

ಅಂದು ಮಧ್ಯಾಹ್ನ 12.30 ಕ್ಕೆ ಡಿವೈಎಫ್‌ಐ ನ ಶ್ವೇತ ಪತಾಕೆಗಳನ್ನು ರಾಜ್ಯ ಪದಾಧಿಕಾರಿಗಳು ಎತ್ತಿ ಹಿಡಿದು ಮುನ್ನಡೆಯುತ್ತಿದ್ದಂತೆ ಅದರ ಹಿಂದೆ ಆಕರ್ಷಕ ಭಿತ್ತಿಪತ್ರ, ಬಾವುಟಗಳು, ವಿವಿಧ ಜಿಲ್ಲೆಯ ಬ್ಯಾನರ್‌ಗಳನ್ನು ಹಿಡಿದ ಸಾವಿರಾರು ಯುವಜನರು ಹೆಜ್ಜೆ ಹಾಕುತ್ತಾ ಮುನ್ನಡೆದರು. ನಿರುದ್ಯೋಗ ಭತ್ಯೆಗಾಗಿ, ನೇಮಕಾತಿಯಲ್ಲಿ ಅರ್ಜಿ ಶುಲ್ಕ, ಡಿ.ಡಿ. ಮತ್ತು ಪೋಸ್ಟಲ್ ಆರ್ಡರ್ ರದ್ದತಿಗಾಗಿ, ನೇಮಕಾತಿ ಮೇಲಿನ ನಿರ್ಬಂಧ ರದ್ದತಿಗಾಗಿ, ಖಾಲಿ ಹುದ್ದೆಗಳ ಭರ್ತಿ, ಸಾಕ್ಷರತಾ ಪ್ರೇರಕರ ಗೌರವ ಧನ ಬಿಡುಗಡೆಗಾಗಿ, ಗ್ರಾಮ ಪಂಚಾಯತಿಯಿಂದ ಗ್ರಂಥಾಲಯ ಮೇಲ್ವಿಚಾರಕರ ಬೇಡಿಕೆಗಳ ಈಡೇರಿಕೆಗಾಗಿ, ಕೃಪಾಂಕ ನೌಕರರ ಮರುನೇಮಕ ಹಾಗೂ ಶಾಶ್ವತ ಪರಿಹಾರಕ್ಕಾಗಿ, ಶಿಕ್ಷಕರ ನೇಮಕಾತಿಯಲ್ಲಿ ಎಲ್ಲಾ ಬಿ.ಇಡಿ, ಪದವೀಧರರಿಗೆ ಸಮಾನ ಅವಕಾಶಕ್ಕಾಗಿ, ಹಾಗೂ ಖಾಸಗಿ ವೃತ್ತಿಪರ ಶಿಕ್ಷಣ ಸಂಸ್ಥೆಗಳ ನಿಯಂತ್ರಣಕ್ಕಾಗಿ, ಸಮಗ್ರಕೇಂದ್ರೀಯ ಶಾಸನವನ್ನು ಜಾರಿಗೊಳಿಸಲಿಕ್ಕಾಗಿ ಆಗ್ರಹಪಡಿಸಿ, ಸೆಪ್ಟೆಂಬರ್ 15 ರಿಂದಆರಂಭಗೊಂಡ 'ಐದು ಲಕ್ಷ ಯುವಜನರ ಸಹಿ ಸಂಗ್ರಹ ಹಾಗೂ ಪ್ರಚಾರಾಂದೋಲನ ಅಕ್ಟೋಬರ್ 15 ರಂದು ಬೃಹತ್ ವಿಧಾನಸೌಧ ಚಲೋ ನಡೆಸುವುದರೊಂದಿಗೆ ರಾಜ್ಯದಲ್ಲಿ ಮುಕ್ತಾಯಗೊಂಡಿತು. ರಾಜ್ಯದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಸಮ್ಮಿಶ್ರ ಸರ್ಕಾರದ ಮುಂದೆ ಈ ಮೇಲ್ಕಂಡ ಯುವಜನರಸ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಪಡಿಸಿ ಈ ರ್‍ಯಾಲಿಯನ್ನು ಸಂಘಟಿಸಲಾಗಿತ್ತು.



ಅದು ಮಧ್ಯಾಹ್ನ ಧಾರಕಾರವಾಗಿ ಸುರಿದ ಮಳೆಗೆ ಮೈಯೊಡ್ಡಿ ಸಾವಿರಾರು ಜನರು ಗಟ್ಟಿಯಾಗಿಯೇ ನಿಂತು ಸಭೆಯನ್ನು ಯಶಸ್ವಿಗೊಳಿಸಿದರು.

ಪಾಠ ಕಲಿಂತು, ನೀತಿಗಳನ್ನು ಬದಲಿಸಿ!

ಬನ್ನಪ್ಪ ಪಾರ್ಕಿನಲ್ಲಿ ನಡೆದ ಬಹಿರಂಗ ಸಭೆಗೆ ಮುಖ್ಯಮಂತ್ರಿಗಳ ಪರವಾಗಿ ಆಗಮಿಸಿದ್ದ ಕೃಷಿ ಸಚಿವ ಶ್ರೀನಿವಾಸ ಗೌಡರಿಗೆ ನಿರುದ್ಯೋಗಿ ಯುವಜನರು, ಸಾಕ್ಷರತಾ ಪ್ರೇರಕರು ಹಾಗೂ ಕೃಪಾಂಕ ನೌಕರರ ಪರವಾಗಿ ಮನವಿ ಸಲ್ಲಿಸಲಾಯಿತು. ರಾಜ್ಯದಲ್ಲಿ ಹಿಂದಿನ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಅನುಸರಿಸಿದ ವಿಶ್ವಬ್ಯಾಂಕ್ ನಿರ್ದೇಶಿತ ಆರ್ಥಿಕ ನೀತಿಗಳ ಪರಿಣಾಮವಾಗಿ, ವಿಪರೀತವಾಗಿ ನಿರುದ್ಯೋಗ ಹೆಚ್ಚಳವಾಗಿರುವುದು, ವಿಶೇಷವಾಗಿ ರೇಷ್ಮೆ, ಹೈನುಗಾರಿಕೆ, ಮೀನುಗಾರಕೆಗಳಲ್ಲಿ ಲಕ್ಷಾಂತರ ಉದ್ಯೋಗಗಳು, ನಾಶವಾಗಿರುವುದು. ಆ ನೀತಿಗಳಿಂದಾಗಿ ಕೃಷಿ ಕ್ಷೇತ್ರ ಸಂಪೂರ್ಣವಾಗಿ ದಿವಾಳಿಯಾಗಿ ನೂರಾರು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು. ಸುಮಾರು 6 ಲಕ್ಷದಷ್ಟಿದ್ದ ಸರ್ಕಾರಿ ನೌಕರರ ಸಂಖ್ಯೆಯನ್ನು ಆಡಳಿತ ಸುಧಾರಣೆ ಹೆಸರಿನಲ್ಲಿ 4 ಲಕ್ಷಕ್ಕೆ ಇಳಿಸಿರುವುದು, ಆ ಮೂಲಕ ಒಟ್ಟಾರೆ ಯುವಜನರಿಗೆ ಎಲ್ಲಾ ರೀತಿಯ ಅವಕಾಶಗಳಿಂದ ವಂಚಿತರನ್ನಾಗಿಸಿದ ನೀತಿಗಳು ಆ ಸರ್ಕಾರವನ್ನು ಸಂಪೂರ್ಣ ನೆಲಕಚ್ಚುವಂತೆ ಮಾಡಿದವು. ಎಸ್.ಎಂ.ಕೃಷ್ಣ ಸರ್ಕಾರದ ಆ ಸೋಲಿನಿಂದ ಸಮ್ಮಿಶ್ರ ಸರ್ಕಾರ ಪಾಠ ಕಲಿಯಬೇಕು. ಮತ್ತು ಬದಲಿ ನೀತಿಗಳನ್ನು ಅನುಸರಿಸುವತ್ತ ಗಮನ ನೀಡಿ ಯುವ ಸಮುದಾಯವನ್ನು ರಕ್ಷಿಸುವಂತಹ ಕ್ರಮಗಳನ್ನು ಧರಂಸಿಂಗ್ ಸರ್ಕಾರ ಅನುಸರಿಸಬೇಕೆಂದು ಸರ್ಕಾರಕ್ಕೆ ಸಲ್ಲಿಸಲಾದ ಮನವಿಯಲ್ಲಿ ಆಗ್ರಹಪಡಿಸಲಾಯಿತು.

ಮನವಿಯನ್ನು ಸ್ವೀಕರಿಸಿದ ಸಚಿವರು ಮಾತನಾಡಿ ಈ ಬೇಡಿಕೆಗಳ ಬಗ್ಗೆ ನನಗಂತೂ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅವುಗಳನ್ನು ಈಡೇರಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಗಂಭೀರವಾಗಿ ಮಾತನಾಡುತ್ತೇನೆ ಎಂಬ ಭರವಸೆ ನೀಡಿದರು. ಈ ರ್‍ಯಾಲಿ ಹಾಗೂ ಬಹಿರಂಗ ಸಭೆಗೆ ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದ ಡಿವೈಎಫ್‌ಐ ಕೇಂದ್ರ ಸಮಿತಿ ಜಂಟಿ ಕಾರ್ಯದರ್ಶಿ ಹಾಗೂ ಕೇರಳ ರಾಜ್ಯ ಕಾರ್ಯದರ್ಶಿ ಕಾಂ.ಪ್ರದೀಪ್ ಕುಮಾರ್ ಮಾತನಾಡಿ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಎನ್‌ಡಿಎ ಸರ್ಕಾರ ಅನುಸರಿಸಿದ ಆರ್ಥಿಕ ನೀತಿಗಳ ಪರಿಣಾಮವಾಗಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ತೀವ್ರಗೊಂಡಿದೆ. ಒಂದು ಕಡೆ ಲಕ್ಷಾಂತರ ಕೈಗಾರಿಕೆಗಳು ನೆಲ ಕಚ್ಚುತ್ತಿವೆ. ಮತ್ತೊಂದೆಡೆ ಭಾರತದ ಕೃಷಿ ಕ್ಷೇತ್ರ ಸಂಪೂರ್ಣ ನಾಶಗೊಂಡಂತಾಗಿದೆ. ಈ ಕಾರಣದಿಂದಾಗಿಯೇ ದೇಶದ ಜನತೆ ಎನ್‌ಡಿಎ ಸರ್ಕಾರವನ್ನು ಸಂಪೂರ್ಣವಾಗಿ ಸೋಲಿಸಿದರು ಎಂಬ ಸತ್ಯವನ್ನು ನೆನಪು ಮಾಡಿಕೊಡುವ ಉದ್ದೇಶದಿಂದಲೇ ನವೆಂಬರ್ 3 ರಂದು ಡಿವೈಎಫ್‌ಐ ಕೇಂದ್ರ ಸಮಿತಿ ತನ್ನ ಬೆಳ್ಳಿ ಹಬ್ಬದ ಅಂಗವಾಗಿ ಒಂದು ಲಕ್ಷ ಯುವಜನರ ರ್‍ಯಾಲಿಯನ್ನು ದೆಹಲಿಯಲ್ಲಿ ಸಂಘಟಿಸುತ್ತಿದ್ದು, ಈ ರ್‍ಯಾಲಿ ನಂತರ ಪ್ರಧಾನಮಂತ್ರಿ ಮನಮೋಹನ್ ಸಿಂಗರ್‌ರವರನ್ನು ಭೇಟಿ ಮಾಡಿ ಉದ್ಯೋಗ ಖಾತ್ರಿ ಯೋಜನೆಗಳನ್ನು ಜಾರಿಗೊಳಿಸಲು ಅಗತ್ಯ ಕ್ರಮವಹಿಸುವ ಬಗ್ಗೆ ಆಗ್ರಹಪಡಿಸುವಾಗುವುದು ಎಂದರು.

ಶಾಸಕರಾದ ಕಾಂ. ಜಿ.ವಿ.ಶ್ರಿ ಮಾತನಾಡಿ, ರಾಜ್ಯದಲ್ಲಿ ಈ ಎದುರಿಸುತ್ತಿರುವ ಈ ಆರ್ಥಿಕ ಬಿ ಆಡಳಿತ ನಡೆಸಿದ ಎಸ್.ಎಂ.ಕೃಷ್ಣ ಸರ್ಕಾರವೇ ನೇರ ಹೊಣೆ. ಆ ಸರ್ಕಾರ ಕಷ್ಟವನ್ನು ಕೇಳುವ ಕಿವಿಯಾಗಲಿ ಬಗ್ಗೆ ಮಾತನಾಡುವ ಬಾಯಿಯಾಗಲಿ ಒಂದು ರೀತಿಯಲ್ಲಿ ಈ ಸರ್ಕಾರ ಜ್ಞಾನೇಂದ್ರಿಯಗಳು ಸತ್ತು ಹೋಗಿದ್ದ ಅದೇ ಜಾಡಿನಲ್ಲಿ ಹೊರಟಿರುವ ಧರಂಸಿ ಸಿದ್ದರಾಮಯ್ಯನವರ ಸಮ್ಮಿಶ್ರ ಸರ ಸರಿದಾರಿಗೆ ತರುವ ಕೆಲಸವನ ಹೋರಾಟಗಳು ಮಾತ್ರವೇ ಮಾಡಲು ನಿಟ್ಟಿನಲ್ಲಿ ರಾಜ್ಯದ ಯುವಜನರ ಪ್ರಶ್ನೆ ನೀವು ನಡೆಸುತ್ತಿರುವ ಹೋರಾಟ ಸಂಪೂರ್ಣ ಬೆಂಬಲವಿದೆ, ವಿಧಾನಸಭೆಯಲ್ಲಿ ಈ ಪ್ರಶ್ನೆಗಳನ್ನು ನಿಮ್ಮ ಬೆಂಬಲಕ್ಕಿರುತ್ತೇನೆ ಎಂದರು.

ಸಭೆಯನ್ನುದ್ದೇಶಿಸಿ ಡಿವೈಎಫ್‌ಐ ಕಾರ್ಯದರ್ಶಿ ಎಸ್.ವೈ.ಗುರ ಮಾತನಾಡುತ್ತಾ ಹಿಂದಿನ ಸಕಾ ಯುವಜನತೆಯ ಮೇಲೆ ಹೇರಿರುವ ಹೊರೆಗಳನ್ನು ಇಳಿಸಿಕೊಳ್ಳಲು ಇಂದು ಯ ಹೆಣಗಾಡಬೇಕಾಗಿದೆ. ನಿರುದ್ಯೋಗದಂತ ಸಮಸ್ಯೆಯಿಂದ ಬಳಲುತ್ತಿರುವ ಯು ಕನಿಷ್ಟ ಭತ್ಯೆಯನ್ನಾದರೂ ನೀಡಿ ಸ ಆಸರೆಯಾಗಬೇಕಿದೆ. ಆದರೆ ಸಕಾ ಶ್ರೀಮಂತರಿಗೆ ಮಾತ್ರ ಹೆಚ್ಚು ರಿಯಾಯ ನೀಡುವಲ್ಲಿ ತೋರಿಸುವ ಆಸಕ್ತಿಯನ್ನು ಯ ಮೇಲೆ ತೋರಿಸದಿರುವುದು ಖಂ ಯುವಜನರೆಂದ ಚುನಾವಣೆ ಸವ ಬಳಸಿ ಬಿ ವಸ್ತುವ ತಾ ಮತ್ತೊಂದೆಡೆ ಯು ಅಗತ್ಯವಿರುವ ಉದ್ಯೋಗ ಪ್ರ ಮಾತನಾಡುವ ಹೋಗದೆ, ಕೇವ ಧರ್ಮದ ಹ ಅಡ್ಡದಾರಿಗೆ ಕೊ ನಮ್ಮ ಸಮಾ ಛಿದ್ರಗೊಳಿಸು ಹುನ್ನಾರ ಗ ನಡೆಸಲಾಗುತ್ತದೆ. ಈ ಬಗ್ಗೆ ಎಚ್ಚರ ಇರಬೇಕೆಂದು ಅವರು ಕರೆ ನೀಡಿದರು

ಬಹಿರಂಗ ಸಭೆಯ ಅಧ್ಯಕ್ಷ ಡಿವೈಎಫ್‌ಐ ರಾಜ್ಯ ಅಧ ಕೆ.ಎನ್.ಉಮೇಶ್ ವಹಿಸಿದ್ದರು ಕಾರ್ಯದರ್ಶಿ ಕೆ.ಮಹಾಂತೇಶ್ ಪ್ರಸ ಮಾತನಾಡಿದರು. ಬೆಂಗಳೂರು ಜಿಲ್ಲಾ ಎಸ್.ಲಕ್ಷ್ಮಣ್ ಕುಮಾರ್ ಸ್ವಾಗತಿಸಿದ ಉಪಾಧ್ಯಕ್ಷ, ಎನ್.ಎಲ್.ಭರ ವಂದಿಸಿದರು. ದ.ಕನ್ನಡದ ಜಿಲ್ಲಾಧ್ಯಕ್ಷ ಕುಮಾರ್ ಬಜಾಲ್ ಕಾಯ ನಿರೂಪಿಸಿದರು.

● ಕೆ.ಮಹ

ರಾಮದುರ್ಗ ಗಲಭೆ

ಹಿಂದೂ-ಮುಸ್ಲಿಂ ಮತಾಂಧರು ಹಚ್ಚಿದ ಕಿಚ್ಚು

ಗಣೇಶ ಹಬ್ಬದ ಸಂದರ್ಭದಲ್ಲಿ ನಡೆದ ಈ ಗಲಭೆಗಳು, ಹಿಂದೂ-ಮುಸ್ಲಿಂ ಮತಾಂಧರ ಕೃತ್ಯಗಳು ತರುವ ಹಾನಿಯನ್ನು ಬಿಂಬಿಸುತ್ತವೆ. ಅಲ್ಲಿನ ವಾತಾವರಣ ತಿಳಿಗೊಳಿಸುವಲ್ಲಿ ಶ್ರಮಿಸಿದ ಸಿಪಿಐ(ಎಂ) ನಾಯಕ ವಿ.ಪಿ.ಕುಲಕರ್ಣಿಯವರಿಂದ ಘಟನೆಗಳ ನೈಜ ವರದಿ

ಈ ಸಲದ ಗಣೇಶೋತ್ಸವ ರಾಮದುರ್ಗಕ್ಕೆ ಸಂಕಷ್ಟಗಳ ಸರಮಾಲೆಯನ್ನೇ ತಂದಿಟ್ಟಿತು. ಸೆಪ್ಟೆಂಬರ್ 27, ಗಣೇಶನನ್ನು ವಿಸರ್ಜಿಸುವ ದಿನ. ಪಟ್ಟಣದ ಎಲ್ಲಾ ಗಣೇಶ ಮೂರ್ತಿಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಮಲಪ್ರಭೆಯಲ್ಲಿ ವಿಸರ್ಜಿಸುವುದು ವಾಡಿಕೆ.

ಸೆಪ್ಟೆಂಬರ್ 27 ರಾತ್ರಿ 9 ಘಂಟೆಗೆ ಆರಂಭವಾದ ಮೆರವಣಿಗೆ ಮಸೀದಿ ಬಳಿ ಬಂದಾಗ ರಾತ್ರಿ 10.30 ನೇರವಾಗಿ ಹೋಗುವ ಬದಲು ಮಸೀದಿ ಬಳಿ ಗಂಟೆಗಟ್ಟಲೆ ಪಟಾಕಿ ಸಿಡಿಸುವುದು, ಅವಾಚ್ಯ ಘೋಷಣೆ ಕೂಗುವುದು ನಡೆದಿತ್ತು. ಸುಮಾರು 11 ಘಂಟೆಗೆ ಮೆರವಣಿಗೆ ಮುಂದೆ ಒಂದು ಖಾಲಿ ಬಾಟಲಿ ಎಲ್ಲಿಂದಲೋ ತೂರಿ ಬಂತು. ಇದನ್ನೇ ಕಾಯುತ್ತಿದ್ದವರಂತೆ ಮೆರವಣಿಗೆಕಾರರು ಕಲ್ಲು ತೂರಾಟ ಆರಂಭಿಸಿಯೇ ಬಿಟ್ಟರು. ಪೋಲೀಸರ ಮೇಲೆ, ಮಸೀದಿ ಬಳಿ ನಿಂತಿದ್ದ ಮುಸಲ್ಮಾನರ ಮೇಲೆ ಕಲ್ಲುಗಳ ಸುರಿಮಳೆ. ಬಾಟಲಿ ಎಲ್ಲಿಂದ ಬಿತ್ತು? ಯಾರು ತೂರಿದರು? ಇಷ್ಟು ಪ್ರಮಾಣದಲ್ಲಿ ಕಲ್ಲುಗಳು ಎಲ್ಲಿಂದ ಬಂದವು? ಇವೆಲ್ಲಾ ಇಂದಿಗೂ ಪ್ರಶ್ನೆಗಳಾಗೇ ಉಳಿದಿವೆ.

ಪೋಲೀಸರು ಭಾರೀ ಶ್ರಮಪಟ್ಟು ಗಲಭೆ ನಿಯಂತ್ರಿಸಿ ಮೆರವಣಿಗೆಯನ್ನು ಕೊನೆಮುಟ್ಟಿಸಿ ನಿಟ್ಟುಸಿರು ಬಿಟ್ಟರು. ಕಲ್ಲು ತೂರಾಟದಲ್ಲಿ ಗಾಯಗೊಂಡವರಲ್ಲಿ ಪೋಲೀಸರೂ ಸೇರಿದ್ದರು.

ಬಂಧನ ಪತ್ರ:

ಮರುದಿನ ಬೆಳಿಗ್ಗೆಯಿಂದ ಎಲ್ಲಾ ಶಂಕಿತರನ್ನು ಬಂಧಿಸುವ ಕೆಲಸವನ್ನು ಪೋಲೀಸರು ಆರಂಭಿಸಿದರು. ಉಭಯ ಕೋಮುಗಳೂ ಸೇರಿ ಬಂಧಿತರಾದವರ ಸಂಖ್ಯೆ 30. ತಮ್ಮನ್ನು ಬಂಧಿಸಬಹುದು ಎಂಬ ಶಂಕೆಯಿಂದ ನೂರಾರು ಜನ ಊರುಬಿಟ್ಟರು. ಪಟ್ಟಣದಲ್ಲಿ 144ನೇ ಕಲಂ ಜಾರಿ ಮಾಡಲಾಯಿತು.

ಸುಮಾರು 5 ದಿನ ಇದೇ ಬಿಗುವಿನ ವಾತಾವರಣ, ನಾಗರೀಕರು ಸರಾಗವಾಗಿ ಚಟುವಟಿಕೆ ನಡೆಸದ ಸ್ಥಿತಿ, ವ್ಯಾಪಾರ ವಹಿವಾಟು ಬಂದ್ ಆದವು. ರೈತರು ವ್ಯವಹಾರಕ್ಕಾಗಿ ರಾಮದುರ್ಗಕ್ಕೆ ಬರಲು ಹಿಂದೇಟು ಹಾಕಿದರು. ಪೊಲೀಸರು ಬೇಟೆ ಮುಂದುವರೆಸಿ ಒಟ್ಟು 42 ಜನರನ್ನು ಬಂಧಿಸಿದರು.

ಹಿನ್ನೆಲೆ : ಸುಮಾರು 20 ವರ್ಷಗಳ ಹಿಂದೆ ಇಂಥದೇ ಪರಿಸ್ಥಿತಿ ಉಂಟಾಗಿತ್ತು. ಅಂದಿನಿಂದ ಉಭಯ ಕೋಮುಗಳ ಮಧ್ಯೆ ಸಂಬಂಧದಲ್ಲಿ ಬಿರುಕಾಗಿತ್ತು. ಪರಿಸ್ಥಿತಿ ಸಾಧಾರಣ ಸ್ಥಿತಿಗೆ ಬರಲೇ 10 ವರ್ಷಗಳು ಹಿಡಿದಿದ್ದವು.

3-4 ವರ್ಷಗಳಿಂದ ಭಜರಂಗ ದಳವು ರಾಮದುರ್ಗ ತಾಲೂಕಿನಲ್ಲಿ ಚಟುವಟಿಕೆ ಆರಂಭಿಸಿದೆ. ಚಟುವಟಿಕೆ ಎಂದರೆ ಮುತಾಲಿಕನನ್ನು ಕರೆಸಿ ಭಾಷಣ ಮಾಡಿಸುವುದು, ಹಳ್ಳಿ, ಹಳ್ಳಿಗಳಲ್ಲಿ, ಪಟ್ಟಣದಲ್ಲಿ ಭಜರಂಗ ದಳದ ಬೋರ್ಡು ಬರೆಸುವುದು, ಅವಾಚ್ಯ ಕರಪತ್ರ ಹಾಕಿಸುವುದು, ಗುಂಪುಗೂಡಿ ಮುಸಲ್ಮಾನರನ್ನು ನಿಂದಿಸುವುದು ಇವೆಲ್ಲಾ.

ರಾಜ್ಯಾದ್ಯಂತ ಕುತೂಹಲ ಕೆರಳಿಸಿದ್ದ ಪ್ರಕರಣ - ಚರ್ಚುಗಳ ಮೇಲೆ ಬಾಂಬ್ ಹಾಕುವುದು. ಮುಸಲ್ಮಾನ ಉಗ್ರರ ಸಂಘಟನೆಯ ಇದರ ಸೂತ್ರದಾರ ರಾಮದುರ್ಗ ತಾಲೂಕಿನ ಬಟಕುರ್ಕಿ ಎಂಬ ಗ್ರಾಮದವನು. ಈ ಪ್ರಕರಣ ಬಯಲಿಗೆ ಬಿದ್ದ ಮೇಲೆ (ಈ ಪ್ರಕರಣದ ವಿಚಾರಣೆ ರಾಮದುರ್ಗ ಕೋರ್ಟಿನಲ್ಲಿ ಇನ್ನೂ ನಡೆಯುತ್ತಿದೆ) ತಾಲೂಕಿನಲ್ಲಿ ಭಜರಂಗ ದಳದವರಿಗೆ ಚಾಲನೆ ಸಿಕ್ಕಂತಾಯಿತು.

ತಾಲೂಕಿನ ಪ್ರಮುಖ ಗ್ರಾಮಗಳಾದ ಕಡಕೋಳ, ಸುರೇಬಾನ, ಬಟಕುರ್ಕಿಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಿ ಇಡೀ ತಾಲೂಕಿನ ವಾತಾವರಣ ಹದಗೆಡಿಸಲಾಗಿತ್ತು. ರಾಮದುರ್ಗದಲ್ಲಿ ಪ್ರಮೋದ ಮುತಾಲಿಕ ಬಂದು ವಿಷ ಕಾರಿ ಹೋದನಂತರ ಉಂಟಾದ ಗಾಯ ಮಾಯಲು ವರ್ಷಗಳೇ ಬೇಕು ಎಂದು ಅಂದೇ ಅನಿಸಿತ್ತು.

ವಾತಾವರಣ ಕಲಷಿತಗೊಳಿಸುವ ಒಂದೆರಡು ಘಟನೆಗಳೂ ನಡೆದವು.

ಚಿಲಮೂರು ಎಂಬ ಪುಟ್ಟ ಗ್ರಾಮವಿದೆ. ಇಲ್ಲಿಯ ಮೊಹರಮ್ ಆಚರಣೆ ಸುಪ್ರಸಿದ್ಧ. ಇಡೀ ಗ್ರಾಮದಲ್ಲಿ ಒಂದೇ ಒಂದು ಮುಸ್ಲಿಂ ಕುಟುಂಬ ಇಲ್ಲದಿದ್ದರೂ ಚಿಲಮೂರು ಗ್ರಾಮದವರು ಮೊಹರಮ್‌ನ್ನು ಸಂಭ್ರಮದಿಂದ ಆಚರಿಸುತ್ತಿದ್ದರು.

ಹಸೇನ-ಹುಸೇನರ ಹಾಗೂ ಬೀಬಿ ಫಾತೀಮಾರ ಮೂರು ಹಿತ್ತಾಳೆಯ ಪ್ರತಿಮೆಗಳನ್ನು ಮೆರಸುವುದು ಮೊಹರಮ್‌ನ ಒಂದು ಪ್ರಮುಖ ಅಂಶ. ಉತ್ಸವ ಮುಗಿದ ಮೇಲೆ ಈ ಮೂರ್ತಿಗಳನ್ನು ಸ್ಥಳೀಯ ದರ್ಗಾದಲ್ಲಿ ಬಚ್ಚಿಟ್ಟು ಸುತ್ತಿಡುತ್ತಾರೆ. ಒಂದು ಬೆಳಿಗ್ಗೆ ದರ್ಗಾದ ಗೋಪುರಗಳನ್ನು ಉರುಳಿಸಲಾಗಿತ್ತು. ಈ ಘಟನೆ ಊರಲ್ಲಿ ಉದ್ರಿಕ್ತ ವಾತಾವರಣ ಉಂಟುಮಾಡಿತ್ತು. ಪೋಲೀಸರು ಭಾರೀ ಶ್ರಮ ಪಟ್ಟು ಈ ಕೃತ್ಯ ನಡೆಸಿದವರನ್ನು ಬಂಧಿಸಿದ್ದರು. ಎಲ್ಲರೂ ಭಜರಂಗದಳದವರು.

ರಾಮದುರ್ಗದಲ್ಲಿ ಮೆಹಬೂಬ ಸುಧಾನಿ ಎಂಬ ಸಂತನ ಹೆಸರಿನಲ್ಲಿ ದರ್ಗಾ ಇದೆ. ಹಿಂದೂ ಮುಸಲ್ಮಾನರು ಕೂಡಿ ಆರಾಧಿಸುತ್ತಾರೆ. ಒಂದು ಬೆಳಿಗ್ಗೆ ಇಲ್ಲಿಯ ಎಲ್ಲಾ ಝುಂಡಾಗಳನ್ನು (ಧಾರ್ಮಿಕ) ಕಿತ್ತು ಹಾಕಿಸಲಾಗಿತ್ತು. ಈ ಘಟನೆಯೂ ನಗರದಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟುಮಾಡಿತ್ತು. ಕೆಲವು ಮುಸಲ್ಮಾನ ಯುವಕರೇ ಈ ಕೃತ್ಯ ನಡೆಸಿದ್ದು ಎಂಬ ಊಹೆಯಿದೆ.

ಬಟಕುರ್ಕಿ ಈಗಿನ ಶಾಸಕರ ಹುಟ್ಟಿದೂರಾಗಿದೆ. ಸುಮಾರು 1 ವರ್ಷದಿಂದ ಅಲ್ಲಿಯ ಮುಸಲ್ಮಾನರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಮಸೀದಿಯಲ್ಲಿ ಧ್ವನಿವರ್ಧಕ ಬಳಸಲು ತಕರಾರು, ಮುಸಲ್ಮಾನರು ಸ್ವಚ್ಛಂದವಾಗಿ ಇರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಧಾರ್ಮಿಕ ಪದ್ಧತಿಗಳನ್ನು ಅರಿಯಲು ಮುಸಲ್ಮಾನ ಯುವಕರು ಇಸ್ಥಮಾ ಎಂಬ ಚಟುವಟಿಕೆ ನಡೆಸುತ್ತಾರೆ. ಹತ್ತಿಪ್ಪತ್ತು ಯುವಕರು ಬೇರೆ ಊರುಗಳ ಮಸೀದಿಗೆ ಹೋಗಿ ಅಲ್ಲಿಯೇ ವಾಸಿಸಿ ನಮಾಜು ಕ್ರಮ ಇತ್ಯಾದಿ ಕಲಿಯುವ ಚಟುವಟಿಕೆ ನಡೆಸುತ್ತಾರೆ. ಈ ಇಸ್ಥಮಾಕ್ಕೆ ಹೋಗಿ ಬಂದ ಬಟಕುರ್ಕಿ ಮುಸಲ್ಮಾನ ಯುವಕನೊಬ್ಬ ವಾಪಸು ಬರುವಾಗ ಗಡ್ಡಬಿಟ್ಟಿದ್ದ, ವೇಷದಲ್ಲೂ ಬದಲಾವಣೆಯಾಗಿತ್ತು.

ಈ ಯುವಕನ ಹಿಂದೂ ಸ್ನೇಹಿತರು ತಮ್ಮ ಗೆಳೆಯನ ಹೊಸ ಅವತಾರ ನೋಡಿ ಛೇಡಿಸಿದ್ದಾರೆ. ಮುಸಲ್ಮಾನ ಉಗ್ರನ ಹಾಗೆ ಕಾಣುತ್ತಿ; ಗಡ್ಡ ತೆಗೆ ಎಂದಿದ್ದಾರೆ. ಆ ಯುವಕ ಗಡ್ಡ ಬೋಳಿಸಿಕೊಂಡಿದ್ದಾನೆ. ಇದು ಆ ಯುವಕರ ಮಧ್ಯೆ ನಡೆದ ಒಂದು ಸಾಮಾನ್ಯ ಘಟನೆ.

ಈ ಘಟನೆಯ ಮುಂದಿನ ತಿರುವು ಭಾರೀ ಗಂಡಾಂತರಕಾರಿಯಾಯಿತು. ಈ ಯುವಕ ರಾಮದುರ್ಗಕ್ಕೆ ಬಂದಾಗ ಆತನ ಇಸ್ಥಮಾ ಆಕ್ಷೇಪಿಸಿದ್ದಾರೆ. ನಿಜ ಪರಿಸ್ಥಿತಿ ಬದಲು ಆ ಯುವಕ ಕಥೆ ಕಟ್ಟಿ ಹಿಂದೂಗಳು ಹೇಳುವ ತನ್ನ ಗಡ್ಡವನ್ನು ಬಲಾತ್ಕಾರದಿಂದ ಬೋಳಿಸಿದ್ದಾರೆ ಎಂದುಬಿಟ್ಟ. ಆತನ ಉಡಾಫೆ ಮಾತು ಹತ್ತಾರು ರೆಕ್ಕೆಪುಕ್ಕ ಕಟ್ಟಿಕೊಂಡು ಹರಡಿದಾಗ ರಾಮದುರ್ಗದ ಎಲ್ಲಾ ಮುಸಲ್ಮಾನರು ಉದ್ರಿಕ್ತರಾಗಿ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿ ಘಟನೆಗೆ ಕಾರಣರಾದವರನ್ನು ಬಂಧಿಸಲು ಒತ್ತಾಯಿಸಿದರು. 8-10 ಜನರನ್ನು ಬಂಧಿಸಿ ಮೊಕದ್ದಮೆ ಹೂಡಲಾಯಿತು.

ಈ ಎಲ್ಲಾ ಘಟನೆಗಳು ಗಣೇಶೋತ್ಸವದ ಮುಂಚೆ ನಡೆದದ್ದು. ಈ ಸಲ ಗಣೇಶ ಸುಸೂತ್ರ ಹೋಗುವುದಿಲ್ಲ ಎಂಬ ಶಂಕೆ ಶಾಂತಿ ಬಯಸುವ ಎಲ್ಲರ ಮನಸ್ಸಿನಲ್ಲೂ ಮೊದಲೇ ಇತ್ತು. ಆತಂಕ ನಿಜವಾಗಿಬಿಟ್ಟಿತು.

ಮಧ್ಯಪ್ರವೇಶ

ಕಲ್ಲು ತೂರಾಟದಲ್ಲಿ ಕೆಲವರನ್ನು ಬಿಟ್ಟರೆ ಉಳಿದವರು ಗಲಭೆಗೆ ಸಂಬಂಧವಿಲ್ಲದವರು. ಬಜರಂಗದಳದ ಮುಖಂಡರು ಮಾತ್ರ ಹೊರಗೇ ಇದ್ದಾರೆ.

ಈ ಬಿಗುವಿನ ವಾತಾವರಣ ಶಾಂತಗೊಳಿಸಿ ಸಾಮಾನ್ಯ ಸ್ಥಿತಿಗೆ ತರಲು ಸ್ಥಳೀಯ ಸಿಪಿಐ(ಎಂ) ತುಂಬಾ ಪ್ರಯತ್ನಿಸಿದೆ. ದ.ಸಂ.ಸ ಗೆಳೆಯರು ಹಾಗೂ ಕೆಲವು ಗಣ್ಯರನ್ನು ಸೇರಿಸಿ ಅಕ್ಟೋಬರ್ 1 ರ ಸಂಜೆ ಒಂದು ಸಭೆ ನಡೆಸಲಾಗಿದೆ. 20 ಜನರನ್ನು ಆಮಂತ್ರಿಸಿದ್ದರೆ ಪಾಲ್ಗೊಂಡವರ ಸಂಖ್ಯೆ ಸುಮಾರು 100.

ಆರಂಭದಲ್ಲಿ ಸಭೆಯ ಉದ್ದೇಶದ ಬಗ್ಗೆ ವ್ಹಿ.ಪಿ.ಕುಲಕರ್ಣಿ ಸಂಪೂರ್ಣ ವಿವರಣೆ ನೀಡಿದರು. ಗಲಭೆಗಳಿಗೆ ಅವಕಾಶ ಸಿಕ್ಕರೆ

ಪುಟ 11 ಕ್ಕೆ

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

ಚಂಪಾ ಗೆಲ್ಲಬೇಕು

ಕನ್ನಡದ ಬೆಳವಣಿಗೆಗೆ ಎರಡು ಗಂಭೀರ ಅಪಾಯಗಳಿವೆ. ಒಂದು ಸಾಮ್ರಾಜ್ಯಶಾಹಿ ಪ್ರಣೀತ ಜಾಗತೀಕರಣ, ಇನ್ನೊಂದು ಹಿಂದಿ-ಹಿಂದು-ಹಿಂದುತ್ವ ಎಂಬ ಕೋಮುವಾದ. ಈ ಎರಡೂ ಅವಳಿ-ಜವಳಿಗಳು ನಾಡಿನ ಬದುಕು-ಭಾಷೆಗಳ ಬೆಳವಣಿಗೆ-ಅದರ ಉಳಿವಿಗೆ ಮಾರಕವಾದವು. ಈ ಸವಾಲುಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾಗಿ ಗುರುತಿಸಬೇಕು. ಸವಾಲುಗಳನ್ನೆತ್ತಿ ಚಳುವಳಿ ಬೆಳೆಯಬೇಕು.



ಪ್ರೊ. ಚಂದ್ರಶೇಖರ ಪಾಟೀಲ

ಆದರೆ ಕರ್ನಾಟಕದಲ್ಲಿ ಕನ್ನಡ ಚಳುವಳಿಯು ಈ ಸವಾಲುಗಳನ್ನು ಅಷ್ಟು ಗಂಭೀರವಾಗಿ ಗ್ರಹಿಸಲಿಲ್ಲ. ಕೆಲ ಸಂದರ್ಭಗಳಲ್ಲಿ, ಕೆಲವರು ಗ್ರಹಿಸಿದರೂ ಅಪಾಯದ ಮಟ್ಟ ಹಾಗೂ ಅದರ ಹಾನಿಕಾರಕ ಸತ್ಯವನ್ನು ಪೂರ್ಣವಾಗಿ ಪರಿಗಣಿಸಲಿಲ್ಲ. ಹೀಗಾಗಿ ಕನ್ನಡ ಚಳುವಳಿಯ ಚಿಂತನೆಗಳು 60-70 ರ ದಶಕದಲ್ಲೇ ಬಹುತೇಕ ಉಳಿದುಬಿಟ್ಟಿವೆ. ಪರಿಣಾಮವಾಗಿ ಆ 'ಅವಳಿಗಳ' ಧಾಳಿಗೆ ತುತ್ತಾಗಲಾಗುತ್ತಿದೆ.

ಇಂತಹ ಸನ್ನಿವೇಶದಲ್ಲಿ ಕನ್ನಡ ಸಾಹಿತ್ಯ ಪರಿಷತ್ (ಕಸಾಪ) ಗೆ ಚುನಾವಣೆಗಳು ಘೋಷಿತವಾಗಿವೆ. ಸಾಹಿತ್ಯ ಪರಿಷತ್‌ನ್ನು ಕೇಸರೀಕರಣ ಗೊಳಿಸುವ ಪ್ರಕ್ರಿಯೆ ಹೆಚ್ಚಿತು. ಈಗಲೂ ಅಂತಹ ಅಪಾಯ ಇಲ್ಲದಿಲ್ಲ.

ಈಗ ಘೋಷಿತವಾಗಿರುವ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪ್ರೊ. ಚಂದ್ರಶೇಖರ ಪಾಟೀಲರು(ಚಂಪಾ) ಮತ್ತೆ ಸ್ಪರ್ಧೆ ಮಾಡುತ್ತಿದ್ದಾರೆ. ಅವರೊಂದಿಗೆ ಪ್ರಗತಿಪರ ಗೆಳೆಯರ ಬಳಗವೂ ಅಲ್ಲಿದೆ. ಹಲವಾರು ದಶಕಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಪ್ರಗತಿಪರತೆಯ ಗಟ್ಟಿ ಧ್ವನಿ ಎತ್ತಿದವರು, ಬಂಡಾಯ ಸಾಹಿತ್ಯ ಚಳುವಳಿಯ ಪ್ರಮುಖರು ಚಂಪಾರವರು. ಜನಪರ ಚಳುವಳಿಯಲ್ಲಿ ಗುರುತಿಸಿಕೊಂಡು, ಭಾಗಿಯಾದವರು ಅವರು. ಚಂಪಾರವರ ಪ್ರಮುಖ ಶ್ರಮದ ಫಲವಾಗಿರುವ (ಸಂಪಾದಕರೂ ಆಗಿರುವ) 'ಸಂಕ್ರಮಣ' ಪತ್ರಿಕೆ, ನಾಡಿನ ಸಾಹಿತ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ಹಲವಾರು ಬಾರಿ ನೇತೃತ್ವ ವಹಿಸಿದೆ.

ಕರ್ನಾಟಕ-ಕನ್ನಡದ ಒಟ್ಟು ಹಿತಾಸಕ್ತಿಗಳ ಕುರಿತು ಚಿಂತಿಸುವಾಗಲೂ ಜಾಗತೀಕರಣ-ಕೋಮುವಾದದ ಸವಾಲುಗಳು ಕೇವಲ ಕನ್ನಡಕ್ಕೆ ಮಾತ್ರವಲ್ಲ ಭಾರತೀಯ ಇತರೆ ಭಾಷೆಗಳಿಗೂ, ಭಾಷಿಕರಿಗೂ ಬಂದಿದೆ. ಹಾಗಾಗಿ ಎಲ್ಲಾ ಭಾಷಿಕರೂ ಸೇರಿಯೇ ಅವುಗಳನ್ನು ಎದುರಿಸಬೇಕಿದೆ.

ಈ ದಿಕ್ಕಿನಲ್ಲಿ ಕಸಾಪದ ಅಧ್ಯಕ್ಷತೆಗೆ ಚಂಪಾರವರ ಆಯ್ಕೆ ಅತ್ಯಗತ್ಯ. ಈ ಬಾರಿ ಅವರು ಗೆಲ್ಲಬೇಕು, ಗೆಲ್ಲಿಸಬೇಕು ಎಂಬುದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ ರಾಜ್ಯ ಕಾರ್ಯದರ್ಶಿ ಮಂಡಳಿಯ ತೀರ್ಮಾನ ಮತ್ತು ಅದಕ್ಕಾಗಿ ಶ್ರಮಿಸಲು ಎಲ್ಲಾ ಪ್ರಗತಿಪರರಲ್ಲಿಯೂ ಮನವಿ. ಮತದಾನ ಅಕ್ಟೋಬರ್ 31 ಕ್ಕೆ.

ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ

ಎಲ್ಲೆಲ್ಲೂ ಉಸಿರಬೇಕು
ನಮ್ಮ ನುಡಿ ಕನ್ನಡ
ಸಿರಿನಾಡನು ಕಟ್ಟಲಿಕ್ಕೆ
ಬರ್ರಿ ನಮ್ಮ ಸಂಗಡ

ಕೈಯ ತುಂಬ ಕೆಲಸ ಬೇಕು
ಬೇಕು ಹೊಟ್ಟೆಗನ್ನ
ಅಕ್ಷರಗಳ ಕನ್ನ ಕೊರೆದು
ಬರಲಿ ಅರಿವು-ಚಿನ್ನ

ಮೈಯ ತುಂಬ ಬಟ್ಟೆ ಬೇಕು
ನೆತ್ತಿಗೊಂದು ಆಸರ
ಭೂಮಿ ತುಂಬ ಬಿತ್ತಬೇಕು
ತನ್ನ ಬೆಳಕು ನೇಸರ

ತಲೆಯ ತುಂಬ ಬೆಂಕಿ ತುಂಬಿ
ಮಿಂಚಬೇಕು ಕಂಗಳು
ಎದೆಯ ತುಂಬಿ ತುಳುಕಬೇಕು
ಪ್ರೀತಿಯ ಬೆಳದಿಂಗಳು

ಇಂಥ ನಾಡು ಕಟ್ಟಬೇಕು
ಬರ್ರಿ ನಮ್ಮ ಸಂಗಡ
ಎಲ್ಲೆಲ್ಲೂ ಮೊಳಗಬೇಕು
ಕನ್ನಡ ಕನ್ನಡ
ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ

○ ಚಂಪಾ (ಪ್ರಣಾಳಿಕೆಯಿಂದ)



ರಾಜ್ಯದ ಮೂಲೆಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಪ್ರೇರಕ-ಸಹ ಪ್ರೇರಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಸುಮಾರು ನಾಲ್ಕು ಗಂಟೆಗಳ ಕಾಲ ಮುತ್ತಿಗೆ ಹಾಕಿ ನಿರ್ದೇಶನಾಲಯದ ಅಧಿಕಾರಿಗಳಿಗೆ ಬೆವರಿಳಿಸಿದರು. ಅವರ ಅಹವಾಲುಗಳೇನು?

ಲೋಕ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿಗಳಿಗೆ
ಸಾಕ್ಷರತಾ ಪ್ರೇರಕರಿಂದ ದಿಗ್ಬಂಧನ

ಸ್ವಯಂ ಸೇವಾ ಮನೋಭಾವದಿಂದ ಕೆಲಸ ಮಾಡುತ್ತಿರುವ ಪ್ರೇರಕರಿಗೆ - ಸಹ ಪ್ರೇರಕರಿಗೆ ವಾರದ ರಜೆ ಯಾಕೆ? ಹೀಗೆಂದು ಪ್ರಶ್ನಿಸುವವರು ಸಾರ್ವಜನಿಕರಲ್ಲ. ಸರ್ಕಾರ ನೀಡುವ ಎಲ್ಲಾ ಸಂಬಳ-ಸವಲತ್ತುಗಳನ್ನು ತಿಂದು ತೇಗುವ ಲೋಕ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿಗಳು!

ಅಕ್ಟೋಬರ್ 16 ರಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ರಾಜ್ಯ ಲೋಕ ಶಿಕ್ಷಣ ನಿರ್ದೇಶನಾಲಯಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಪ್ರೇರಕ-ಸಹ ಪ್ರೇರಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಸುಮಾರು ನಾಲ್ಕು ಗಂಟೆಗಳ ಕಾಲ ಮುತ್ತಿಗೆ ಹಾಕಿ ನಿರ್ದೇಶನಾಲಯದ ಅಧಿಕಾರಿಗಳಿಗೆ ಬೆವರಿಳಿಸಿದರು.

ಪರಾರಿಯಾದ ನಿರ್ದೇಶಕಿ!


ಅಕ್ಟೋಬರ್ 7 ರಂದೇ ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ರಾಜ್ಯ ಸಮಿತಿಯಿಂದ ಒಂದು ಪತ್ರವನ್ನು ನಿರ್ದೇಶಕಿ ಡಾ. ನಾಗಲಾಂಬಿಕ ದೇವಿಯವರಿಗೆ ಕಳಿಸಲಾಗಿತ್ತು. ಆ ಪತ್ರದಲ್ಲಿ ರಾಜ್ಯದ 14 ಸಾವಿರಕ್ಕಿಂತ ಹೆಚ್ಚು ಮುಂದುವರಿಕೆ ಶಿಕ್ಷಣ ಕೇಂದ್ರಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಪ್ರೇರಕರು - ಸಹಪ್ರೇರಕರು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ವಿವರಿಸಲಾಗಿತ್ತು. ಮುಂದುವರಿಕೆ ಶಿಕ್ಷಣ ಕೇಂದ್ರಗಳು ಮುಂದೆ ವ್ಯವಸ್ಥಿತವಾಗಿ ನಡೆಯಬೇಕೆಂದಾದರೆ ಬಾಕಿ ಇರುವ ಗೌರವಧನ ಪಾವತಿ, ವಾರದ ರಜೆ ಮತ್ತು ಶೇ 70 ರಷ್ಟಿರುವ ಮಹಿಳೆಯರಿಗೆ ಅವಶ್ಯಕವಿರುವ ಹೆರಿಗೆ ರಜೆ, ಇತ್ಯಾದಿ 8 ಬೇಡಿಕೆಗಳನ್ನು ಈಡೇರಿಸಲು ಅಗತ್ಯಕ್ರಮ ಕೈಗೊಳ್ಳಬೇಕು. ಅಕ್ಟೋಬರ್ 16 ರಂದು ಸಾವಿರಾರು ಪ್ರೇರಕರು ತಮ್ಮ ಕಛೇರಿ ಎದುರು ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಖುದ್ದಾಗಿ ಆಗಮಿಸಿ ನಮ್ಮ ಮನವಿಗೆ ಸ್ಪಂದಿಸಬೇಕೆಂದು ಕೋರಲಾಗಿತ್ತು.

ಆದರೆ ಹಿಂದೆ ಕೊಪ್ಪಳ ಜಿಲ್ಲಾಧಿಕಾರಿಯಾಗಿದ್ದ ಡಾ. ನಾಗಲಾಂಬಿಕ ದೇವಿ, ಆಗ 40 ದಿನಗಳ ಕಾಲ ಅಲ್ಲಿಯ ಪ್ರೇರಕರು, ಸಹ ಪ್ರೇಕರು ಅನಿರ್ದಿಷ್ಟ ಕಾಲ ಹೋರಾಟ ನಡೆಸುತ್ತಿದ್ದಾಗಲೂ ಇದೇ ರೀತಿ, ಸಮಸ್ಯೆಗೆ ಯಾವುದೇ ಉತ್ತರ ನೀಡದೆ ಬೆಂಗಳೂರಿಗೆ ಪರಾರಿಯಾಗಿದ್ದರು! ಈಗ ಪುನಃ ಅದೇ ಸರದಿ! ನಾವು ನೀಡಿದ ಬೇಡಿಕೆಗಳಿಗೆ, ನಮ್ಮ ಮನವಿಯಂತೆ 'ಅಸಮರ್ಪಕ ಮತ್ತು ಅಮಾನವೀಯ' ರೀತಿಯಲ್ಲಿ 'ಬೇಡಿಕೆಗಳಿಗೆ ನಿರ್ದೇಶನಾಲಯದ ಉತ್ತರ' ಎಂಬ ಶಿರೋನಾಮೆಯಡಿ ಉತ್ತರ ತಯಾರು ಮಾಡಿದ ದೇವಿ, ಅದನ್ನು ಜಂಟಿ ನಿರ್ದೇಶಕ ಡಾ. ರಾಜಾನಾಯ್ಕ ಎಂಬುವರ ಕೈಗಿಟ್ಟು, ಬಂದಿದ್ದನ್ನು ಅನುಭವಿಸಿಕೋ ಎಂದು ರಜೆ ಹಾಕಿ ಪರಾರಿಯಾದರು!

ಅಧಿಕಾರಿಗಳಿಗೆ ಛೀಮಾರಿ!

ಸುಮಾರು ಒಂದು ಗಂಟೆಗೂ ಅಧಿಕ ಸಮಯದವರೆಗೆ ಸಾವಿರಾರು ಪ್ರೇರಕರು ಸುರಿಯುತ್ತಿರುವ ಮಳೆಯನ್ನು ಲೆಕ್ಕಿಸದೇ ಘೋಷಣೆಗಳನ್ನು ಕೂಗುತ್ತಾ ಕಛೇರಿ ಎದುರು ಕುಳಿತಿದ್ದರೂ ಯಾವುದೇ ಉತ್ತರ ಅತ್ತ ಕಡೆಯಿಂದ ಬರಲಿಲ್ಲ! ಇದರಿಂದ ಆಕ್ರೋಶಕ್ಕೊಳಗಾದ ಪ್ರತಿಭಟನಾಕಾರರು ತೀವ್ರ ರೀತಿಯ 'ದಿಗ್ಬಂಧನದಂತಹ' ಹೋರಾಟದ ಎಚ್ಚರಿಕೆಯನ್ನು ನೀಡುತ್ತಿದ್ದಂತೆ ಕಳ್ಳ ನರಿಗಳಂತೆ ಪೊಲೀಸಿನವರ ಬೆಂಗಾವಲಿನಲ್ಲಿ ಜಂಟಿ ನಿರ್ದೇಶಕರಾದ ಡಾ. ರಾಜಾನಾಯಕ್, ಮಾರಪ್ಪ ಹಾಗೂ ಪೂಜಾರಿ ಹೊರಗೆ ಬಂದರು. ಬಂದವರೆ ನಿರ್ದೇಶಕರು ರಜೆಯಲ್ಲಿರುವ ಕಾರಣ ನಾವು ನಿಮ್ಮ ಬೇಡಿಕೆಗಳಿಗೆ ಯಾವುದೇ ರೀತಿಯಲ್ಲಿ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ ಎಂದರು. ಇದರಿಂದ ಆಕ್ರೋಶಗೊಂಡ ಪ್ರೇರಕರು, ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಸುಮಾರು 45 ನಿಮಿಗಳ ಕಾಲ ಅವರಿಗೆ ಒಳ ಹೋಗದಂತೆ ದಿಗ್ಬಂಧನ ವಿಧಿಸಿ ನೀವು ತಮ್ಮ ಜೊತೆ ಕುಳಿತುಕೊಳ್ಳುವಂತೆ ಆಗ್ರಹಪಡಿಸಿದರು. ನಿರ್ದೇಶಕಿಯನ್ನು ಕರೆಸುವಂತೆ ಮತ್ತು ಮೇಲಧಿಕಾರಿಗಳನ್ನು ಕರೆತರುವಂತೆ ಒತ್ತಾಯ ತೀವ್ರಗೊಳಿಸತೊಡಗಿದರು.

ಪ್ರತಿಭಟನೆ ತೀವ್ರ ಸ್ವರೂಪಕ್ಕೆ ಹೋಗುತ್ತಿದ್ದಂತೆ ಬೆದರಿದ ಅಧಿಕಾರಿಗಳು ನಿರ್ದೇಶಕಿ ತಯಾರು ಮಾಡಿ ನೀಡಿದ್ದ ಟಿಪ್ಪಣಿಯನ್ನು ಹೊರ ತೆಗೆದರು! ಆದರೆ ಲಿಖಿತವಾಗಿದ್ದ ಟಿಪ್ಪಣಿಯನ್ನು ಯಥಾರೀತಿ ಓದಿದರೆ ನಮಗೆ 'ದೇವರೇ ಗತಿ' ಎಂಬ ತೀರ್ಮಾನಕ್ಕೆ ಅವರು ಬಂದಿದ್ದರು. ಹಾಗಾಗಿಯೇ ಅಲ್ಲಿರುವ ಉತ್ತರವನ್ನೇ ವಿರೂಪಗೊಳಿಸಿ ಹೇಳಲು ಪ್ರಯತ್ನ ನಡೆಸಿದರು. ಅಂದರೆ ನಿರ್ದೇಶನಾಲಯ ನಮ್ಮ ಬೇಡಿಕೆಗಳಿಗೆ ಯಾವುದೇ ಪರಿಹಾರವನ್ನು ಕಂಡು ಹಿಡಿದಿರಲಿಲ್ಲ ಮಾತ್ರವಲ್ಲ ಅದು ಪ್ರೇಕರನ್ನು ಕೇವಲ ಗುಲಾಮರಂತೆ ದುಡಿಸಿಕೊಳ್ಳಲು ಯಾವ ತಂತ್ರ ಬೇಕೋ ಅದನ್ನೇ ಮಾಡಿತ್ತು. ಇದರಿಂದ ಪ್ರೇರಕರ ಆಕ್ರೋಶ ಮುಗಿಲು ಮುಟ್ಟಿತು. ಕೆಲವರು ಆ ಅಧಿಕಾರಿಗಳ ಕೈಯನ್ನು ಹಿಡಿದೆಳೆದರು. ಅವರ ವಿರುದ್ಧ ತೀವ್ರ ಘೋಷಣೆಗಳು ಮೊಳಗಿದವು.



ಲೋಕಶಿಕ್ಷಣ ನಿರ್ದೇಶನಾಲಯದ ಮುಂದೆ ಧರಣಿ

ಪರಿಸ್ಥಿತಿ ವಿಕೋಪಕ್ಕೆ ತಿರುಗಲು ಪ್ರಯತ್ನಿಸುತ್ತಿರುವುದನ್ನು ಗಮನಿಸಿದ ಡಿವೈಎಫ್ಐ ರಾಜ್ಯ ಮುಖಂಡತ್ವ ಪ್ರೇಕರರ ರಾಜ್ಯ ಸಮಿತಿ ಮುಖಂಡರೊಂದಿಗೆ ಮುಂದಿನ ಕಾರ್ಯಕ್ರಮ ಕುರಿತು ಚರ್ಚಿಸಿತು.

ಜಂಟಿ ನಿರ್ದೇಶಕರೊಂದಿಗೆ ಮಾತುಕತೆ: ಡಿವೈಎಫ್ಐ ಮತ್ತು ಪ್ರೇರಕರ ರಾಜ್ಯ ಮುಖಂಡತ್ವ ಮತ್ತು ಜಂಟಿ ನಿರ್ದೇಶಕರು ಈ ಪರಿಸ್ಥಿತಿ ಕುರಿತಂತೆ ಜಂಟಿ ಸಭೆಯನ್ನು ನಡೆಸಿದರು. ಅದರಂತೆ ಈ ಬೇಡಿಕೆಗಳನ್ನು ಈಡೇರಿಸುವ ಕುರಿತು ಅಕ್ಟೋಬರ್ 26 ರಿಂದ 29 ರ ನಡುವೆ ಸಂಘಟನೆಯ ಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಜಂಟಿ ಸಭೆಯನ್ನು ನಡೆಸಲು ನಿರ್ಧರಿಸಲಾಯಿತು. ಆ ಸಮಯದೊಳಗೆ ಈ ಬೇಡಿಕೆಗಳನ್ನು ಬಗೆಹರಿಸಲು ಇರುವ ಮಾರ್ಗಗಳ ಬಗ್ಗೆ ಲಿಖಿತವಾದ ಟಿಪ್ಪಣಿಗಳನ್ನು ಮಾಡಲು ಜಂಟಿ ನಿರ್ದೇಶಕರು ಸಮ್ಮತಿಸಿದ್ದಾರೆ.

ಪ್ರೇರಕರನ್ನು ಒಗ್ಗೂಡಿಸಿದ ಹೋರಾಟ :

ಅಕ್ಟೋಬರ್ 16 ರಂದು ಲೋಕಶಿಕ್ಷಣ ನಿರ್ದೇಶಕರ ಕಛೇರಿ ಎದುರು ನಡೆದ ಪ್ರೇರಕರ ಸಾಮೂಹಿಕ ಪ್ರತಿಭಟನೆಯು ರಾಜ್ಯದ ಪ್ರೇರಕ ಸಮುದಾಯದ ಮಧ್ಯೆ ಹೊಸ ಸ್ಫೂರ್ತಿಯನ್ನು ನೀಡಿದೆ ಮತ್ತು ಸಂಘಟನೆಯ ಮೂಲಕ ಮಾತ್ರ ನಾವು ಏನನ್ನಾದರೂ ಸಾಧಿಸಲು ಸಾಧ್ಯ ಎನ್ನುವ ಆತ್ಮವಿಶ್ವಾಸವನ್ನು ಮೂಡಿಸಿದೆ ಮತ್ತು ಡಿವೈಎಫ್ಐ ಸಂಘಟನೆ ಮಾತ್ರವೇ ನಮ್ಮೆಲ್ಲರ ನೋವುಗಳಿಗೆ ಧ್ವನಿಯಾಗಿ ನಿಲ್ಲಬಲ್ಲದು ಎಂಬ ಗಟ್ಟಿತನವನ್ನು ಮೂಡಿಸಿದೆ.

ಅಕ್ಟೋಬರ್ 15 ಮತ್ತು 16 ರಂದು ಬೆಂಗಳೂರಿನಲ್ಲಿ ನಡೆದ ಹೋರಾಟಗಳಲ್ಲಿ ರಾಜ್ಯದ ಸಾವಿರಾರು ಪ್ರೇರಕರು, ಹಲವಾರು ಕಷ್ಟ ನಷ್ಟಗಳನ್ನು ಅನುಭವಿಸಿ ಭಾಗವಹಿಸಿದ್ದಾರೆ. ವಿಶೇಷವಾಗಿ ಬಾಗಲಕೋಟೆ-ಬಿಜಾಪುರ ಜಿಲ್ಲೆಗಳ ಪ್ರೇರಕರು ಅದರಲ್ಲೂ ಮಹಿಳಾ ಪ್ರೇರಕರು ವಿಪರೀತ ಕಷ್ಟಗಳನ್ನು ದಾರಿ ಮಧ್ಯದಲ್ಲಿ ರೈಲ್ವೇ ಪೊಲೀಸರಿಂದ ಅನುಭವಿಸಿ ಈ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದು ವಿಶೇಷ.

ಪ್ರೇರಕರ ಈ ಹೋರಾಟಗಳ ನೇತೃತ್ವವನ್ನು ರಾಜ್ಯ ಸಮಿತಿ ಅಧ್ಯಕ್ಷರಾದ ಕೆ.ಮಹಾಂತೇಶ್, ಡಿವೈಎಫ್ಐ - ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್, ಪ್ರ.ಕಾರ್ಯದರ್ಶಿ ಶಿವಶರಣಪ್ಪ ಸಂತಾಜಿ, ಖಜಾಂಚಿ ಜಾಕೀರ್ ಹುಸೇನ್, ಉಡುಪಿ ಜಿಲ್ಲೆಯ ಜಿ.ಗಣೇಶ್, ಚಿತ್ರದುರ್ಗದ ನಾನಕೋಟೆ ಮಂಜುನಾಥ, ಚಿಕ್ಕಮಗಳೂರಿನ ರವೀಂದ್ರ ಬೆಳವಾಡಿ, ಬೀದ
ಬಸವರಾಜ್ ಸ್ವಾಮಿ, ಬಿಜಾಪುರದ ಅಶ
ಬಿಜಾಪುರ, ರಾಯಚೂರು ಜಿಲ್
ಕೆ.ಜಿ.ವೀರೇಶ್, ವೆಂಕೋಬ ಕಾ
ಬೆಂಗಳೂರಿನ ಚಂದ್ರಶೇಖರಯ್ಯ, ಬಳ್ಳಾ
ಎಲ್.ಮಂಜುನಾಥ್, ತುಮಕೂ
ರುಶುಕುಮಾರ್ ಮೊದಲಾದವರು ವಹಿಸಿದ

■ ಕೆ.ಮಹಾಂತ

ಮುಷ್ಕರದ ಹಕ್ಕಿಗಾಗಿ ಡಿ. 7 ಸರ್ಕಾರಿ ನೌಕರರ ಪಾರ್ಲಿಮೆಂಟ್ ಚಲೋ

ಮುಷ್ಕರದ ಹಕ್ಕಿಗಾಗಿ ಒತ್ತಾಯಿ
ಸಾಮೂಹಿಕ ಸಹಿಸಂಗ್ರಹದ ಮನವಿ ಸಲ್ಲಿಸ
ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರ
ಜಂಟಿಯಾಗಿ ಡಿಸೆಂಬರ್ 7,2004 ರಂ
"ಪಾರ್ಲಿಮೆಂಟ್ ಚಲೋ" ಕಾರ್ಯಕ್ರ
ನಡೆಸಲು ಆಗಸ್ಟ್ 1 ರಿಂದ 3ರವರ
ಪಾಟ್ನಾದಲ್ಲಿ ನಡೆದ ಅಖಿಲ ಭಾರತ ರಾ
ಸರಕಾರಿ ನೌಕರರ ಒಕ್ಕೂಟದ ರಾಷ್ಟ್ರೀ
ಮಂಡಳಿ ಸಭೆ ತೀರ್ಮಾನಿಸಿದೆ.

ಒಕ್ಕೂಟದ ಅಧ್ಯಕ್ಷರಾದ ಕಾಂ.ಆರ್.
ಕಾರ್ಣಿಕ್‌ರವರ ಅಧ್ಯಕ್ಷತೆಯಲ್ಲಿ ನಡೆದ
ಸಭೆಯಲ್ಲಿ ಅಸ್ಸಾಂ, ಆಂಧ್ರಪ್ರದೇಶದ ಬಿಹಾ
ಛತ್ತಿಸ್‌ಗಡ, ಗೋವಾ, ಹರಿಯಾಣ
ಜಮ್ಮು-ಕಾಶ್ಮೀರ, ಜಾರ್ಖಂಡ್, ಕೇರ
ಕರ್ನಾಟಕ, ಮಧ್ಯಪ್ರದೇಶ, ಮಹಾರಾ
ಓರಿಸ್ಸಾ, ಪಂಜಾಬ್, ರಾಜಸ್ತಾನ
ತಮಿಳುನಾಡು, ತ್ರಿಪುರ, ಉತ್ತರಪ್ರದೇ
ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಒ
23 ಸಂಘಟನೆಗಳಿಂದ 472 ಪ್ರತಿನಿಧಿಗ
ಮತ್ತು 50 ವೀಕ್ಷಕರು ಭಾಗವಹಿಸಿದ್ದರ
ಇವರಲ್ಲಿ 54 ಮಹಿಳಾ ಪ್ರತಿನಿಧಿಗಳ
ಕರ್ನಾಟಕದಿಂದ, ಅಖಿಲ ಕರ್ನಾಟಕ ರಾ
ಸರಕಾರಿ ನೌಕರರ ಒಕ್ಕೂಟ ಮತ್ತು ಕರ್ನಾಟ
ರಾಜ್ಯ ಸರಕಾರಿ ನೌಕರರ ಸಂಘ
ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಧಾನ ಕಾರ್ಯದರ್ಶಿಗಳ ವರದಿ ಮ
[illegible]ಯಗಳ ಬಗ್ಗೆ 12 ಮಹಿಳಾ ಪ್ರನಿಧಿಗಳ
ಸ[illegible]ದಂತೆ ಒಟ್ಟು 71 ಪ್ರತಿನಿಧಿಗಳ
[illegible]ಯಲ್ಲಿ ಭಾಗವಹಿಸಿ ವಿವಿಧ ಅಂಶಗ
[illegible]ಸೂಕ್ತ ಸಲಹೆಗಳನ್ನು ನೀಡಿದರು. ಪ್ರಧಾ
[illegible]ರ್ಯದರ್ಶಿಗಳು ಪ್ರತಿನಿಧಿಗಳ ಚರ್ಚೆ
[illegible]ರ್ಪಕವಾಗಿ ಉತ್ತರಿಸಿದ ನಂತರ ವರ
[illegible] ನಿರ್ಣಯಗಳನ್ನು ಸರ್ವಾನುಮತದಿಂ
ಅಂಗೀಕರಿಸಲಾಯಿತು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಅರುಣ
ಮಿಶ್ರಾರವರು ಸ್ವಾಗತಿಸಿದರು. ಸ್ವಾಗ
ಸಮಿತಿಯ ಕಾರ್ಯದರ್ಶಿ ಸಿ.ಬಿ.ಸಿಂ
ರವರು ವಂದನೆ ಸಲ್ಲಿಸಿದರು. ಪ್ರಚಂ
ಘೋಷಣೆಗಳೊಂದಿಗೆ ಸಮಾವೇಶ
ಮುಕ್ತಾಯಗೊಂಡಿತು.

ಪಿಐ(ಎಂ) ನ 18ನೇ ಅಖಿಲ ಭಾರತ ಹಾಧಿವೇಶನ-ಸಿದ್ಧತೆಗಳು ಆರಂಭ

ನ 18ನೇ ಅಖಿಲ ಭಾರತ. ಮಹಾಧಿವೇಶನ ಯಲ್ಲಿ ಸಘಟಿಸುವ ನಿರ್ಧಾರ ಡಂತೆ ಇಡೀ ದೇಶದಲ್ಲೇ ದ ಚಟುವಟಿಕೆಗಳು ಂಡವು. ಸಮ್ಮೇಳನವೆಂದರೆ ಾರಂಭವಾಗಿರದೆ ಕ್ಷದ ಎಲ್ಲಾ ಬೆಳವಣಿಗೆಗಳ ಸ್ತುನಿಷ್ಟ ಅವಲೋಕನ. ದೇಶದಲ್ಲಿ ನಡೆಯುತ್ತಿರುವ ೀರಾಟವನ್ನು ಇನ್ನೂ ಸಲು ನಡೆಯುವ ಮಹಾ ಂಘಟನಾತ್ಮಕವಾಗಿ ಂದ ಮೇಲು ಹಂತದವರೆಗೂ ಕ್ಷುವ, ಸ್ವವಿಮರ್ಶೆ, ು ಮೂಲಕ ಬೆಳೆಯುವ ತ್ಮಕ ಪ್ರಕ್ರಿಯೆಯ ಅತ್ಯಂತ ರ್ಶನ. ಇಂತಹ ೀಶನ ಘೋಷಿತವಾದ ಬಗ್ಗೆ ಿಯಲಾಗಿದೆ.

ತ ಕಮ್ಯುನಿಸ್ಟ್ ಪಕ್ಷ ಎದಿ) ದ 18ನೇ ಅಖಿಲ ಭಾರತ ಶನ 2005ರ ಏಪ್ರಿಲ್ 2ನೇ ರವದೆಹಲಿಯಲ್ಲಿ ನಡೆಯಲಿದೆ. ಜಧಾನಿಯಾದ ನವದೆಹಲಿಯಲ್ಲಿ ಪಕ್ಷದ ಸಮ್ಮೇಳನ ನಡೆಯುವುದು ಟ್ಟಿ ಮೊದಲನೆಯ ಬಾರಿ. ದೇಶದ ಯಲ್ಲಿ ಸಿಪಿಐ(ಎಂ)ನ ರುವ ಕಾರ್ಮಿಕ, ರೈತ, ಯುವಜನ, ದ್ಯಾರ್ಥಿ ಹಾಗೂ ಸಾಹಿತಿಗಳ ವರ್ಷದ ನಿರಂತರವಾದ ಗಳ ಫಲವಾಗಿ ಬೆಳೆದು ಬಂದ ಳುವಳಿಯೇ ಈ ಮಹಾಧಿವೇಶನಕ್ಕೆ ಡಲಿದೆ.

ಂದರ್ಭದಲ್ಲಿ ದೆಹಲಿಯ ಯುವ ಿದ, ಸಾಹಿತಿ ಕಾ.ಸಫ್ದರ್ ಹಷ್ಮಿ ಹೋರಾಟ ಬೆಂಬಲಿಸಿ 'ಹಲ್ಲಾ ಬೀದಿ ನಾಟಕ ಮಾಡುತ್ತಿದ್ದ ಲ್ಲಿ ಆಡಳಿತ ಪಕ್ಷದ/ಬಂಡವಾಳಗಾರರ ಿಂದ ಹತ್ಯೆಗೆ ಒಳಗಾಗಿ ವನ್ನು ಸ್ಮರಿಸುವುದು ಅಗತ್ಯವಾಗಿದೆ. ಕೆಂಬಾವುಟವನ್ನು ಎತ್ತಿ ಹಿಡಿದ ದ ಈವರೆಗೆ ದೇಶದಲ್ಲಿ ಸಾವಿರಾರು ತ್ರಗಳು ಜೀವ ತೆತ್ತಿವೆ. ಎಳೆಯ ಹಲವಾರು ಹೆಣ್ಣುಮಕ್ಕಳು ರಾಗಿದ್ದಾರೆ. ಇವರಲ್ಲಿ ಒಬ್ಬರು ಹಷ್ಮಿಯವರ ಪತ್ನಿ ಿಯಶ್ರೀ. ಇವರು ಈಗಲೂ ಾಗಿ 'ಜನಂ'ನಲ್ಲಿ ಅವಿರತ ತ್ತಿದ್ದಾರೆ.

ವೇಶನ

ರ ಫೆಬ್ರುವರಿ 28ರ ಒಳಗೆ ಎಲ್ಲಾ ಪಕ್ಷದ ರಾಜ್ಯ ಸಮ್ಮೇಳನ ಕೆಂದು ತೀರ್ಮಾನಿಸಲಾಗಿದೆ. ಕಳೆದ ಾಧಿವೇಶನ 2002ರ ಮಾರ್ಚ್ 24 ರವರೆಗೆ ಹೈದರಾಬಾದಿನಲ್ಲಿ ಪಕ್ಷದ ಈವರೆಗಿನ 17 ೀಶನಗಳಲ್ಲಿ 9 ಮಹಾಧಿವೇಶನಗಳು ದಕ್ಷಿಣ ಭಾರತದಲ್ಲಿ ನಡೆದಿವೆ. ಉತ್ತರ ಭಾರತದ ಪಂಜಾಬ್‌ನಲ್ಲಿ ಒಮ್ಮೆ ಮಹಾಧಿವೇಶನ ನಡೆದಿದೆ. ಉಳಿದ 4 ಮಹಾಧಿವೇಶನಗಳು ಕಲ್ಕತ್ತಾದಲ್ಲಿ ಹಾಗೂ ಒಮ್ಮೆ ಮುಂಬೈನಲ್ಲಿ ನಡೆದಿದೆ.

ಪ್ರಜಾಪ್ರಭುತ್ವ-ಇತರೆ ಪಕ್ಷಗಳ ಮಾದರಿ

ಕಮ್ಯೂನಿಸ್ಟ್ ಪಕ್ಷವೆಂದರೆ ಪ್ರಜಾಪ್ರಭುತ್ವವಿಲ್ಲದ ಪಕ್ಷವೆಂದು, ಕಮ್ಯೂನಿಸ್ಟ್ ಪಕ್ಷದೊಳಗೆ ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲವೆಂದು ಬೂರ್ಜ್ವಾ ಮಾಧ್ಯಮಗಳು ಹಾಗೂ ಬೂರ್ಜ್ವಾ ಪಕ್ಷದವರು ಆರೋಪಿಸುತ್ತಿರುತ್ತಾರೆ. ಭಾರತದ ಎರಡು ಮುಖ್ಯ ಬೂರ್ಜ್ವಾ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿ ಇದರಲ್ಲೂ ವಿಶೇಷವಾಗಿ ಹಿರಿಯ ವಯಸ್ಸಿನ ಕಾಂಗ್ರೆಸ್ ಪಕ್ಷದೊಳಗೆ ಈಗ ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ ಎಂಬುದನ್ನು ಎಲ್ಲರೂ ಕಾಣಬಹುದು. ಮಹಾತ್ಮಾ ಗಾಂಧಿ ಬದುಕಿದ್ದಾಗ ಕಾಂಗ್ರೆಸ್ ಪಕ್ಷದ ಅಖಿಲ ಭಾರತ ಅಧ್ಯಕ್ಷ ಚುನಾವಣೆಯಲ್ಲಿ ಎಐಸಿಸಿ ನಿರ್ದೇಶಿತ ಅಭ್ಯರ್ಥಿಯನ್ನು ಸೋಲಿಸಿ ಸುಭಾಶ್ ಚಂದ್ರ ಬೋಸ್ ಅಧ್ಯಕ್ಷರಾಗಿ ಗೆದ್ದಿದ್ದರು. ಆ ಸಮಯದಲ್ಲಿ ಸ್ವಲ್ಪ ಮಟ್ಟಿಗೆ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದ ಕಾಂಗ್ರೆಸ್ ಪಕ್ಷದ ಇಂದಿನ ಸ್ಥಿತಿ ಏನು? ವರ್ಷ-ವರ್ಷ ಸ್ಸದಸ್ಯತ್ವ ನೊಂದಾವಣಿ ಮಾಡದ ಕಾರಣದಿಂದ ಕಾಂಗ್ರೆಸ್ ಹೈಕಮಾಂಡ್‌ನಲ್ಲಿರುವ ಹಲವರಿಗೆ ಅವರ ಸದಸ್ಯತ್ವ ನವೀಕರಿಸಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ಪಕ್ಷದ ಕೆಳಮಟ್ಟದಲ್ಲಿ ಚುನಾವಣೆಗಳೇ ನಡೆಯುತ್ತಿಲ್ಲ. ಮೇಲಿಂದ ಆದೇಶ ನೀಡುವುದೇ ಕಾಂಗ್ರೆಸ್ ಪಕ್ಷದ ಪ್ರಜಾಪ್ರಭುತ್ವ. ಮೇಲೆ ಇರುವವರಿಗೆ ಕೆಳಮಟ್ಟದಲ್ಲಿ ಏನಾದರೂ ವ್ಯತ್ಯಾಸ ಕಂಡರೆ ಅವರ ಕಥೆ ಅಂದೇ ಮುಗಿಯಿತು. ಕರ್ನಾಟಕದಲ್ಲಿ ಹಲವು ಕಾಂಗ್ರೆಸ್ ಮುಖ್ಯಮಂತ್ರಿಗಳ ಹಾಗೂ ರಾಜ್ಯಾಧ್ಯಕ್ಷರ ಕಥೆಗಳೇ ಇದಕ್ಕೆ ಸಾಕ್ಷಿ.

ಆರ್‌ಎಸ್‌ಎಸ್ ನಿಯಂತ್ರಣದಲ್ಲಿರುವ ಬಿಜೆಪಿ ಮುಖಂಡರು ಆರ್‌ಎಸ್‌ಎಸ್ ನ ನಿರ್ದೇಶನದಲ್ಲಿ ಭಾಷಣ ಮಾಡುವುದು ಹಾಗೂ ಕೆಲಸ ಮಾಡುವುದು ಎಲ್ಲರಿಗೂ ತಿಳಿದ ವಿಷಯ. ಪ್ರಜಾಪ್ರಭುತ್ವವಾದಿ ಪಕ್ಷಗಳೆಂದು ಹೇಳಿಕೊಳ್ಳುವ ಹಲವು ಬೂರ್ಜ್ವಾ ಪಕ್ಷಗಳ ಸ್ಥಿತಿ ಕೂಡಾ ಮೇಲೆ ವಿವರಿಸಿದ ಪರಿಸ್ಥಿತಿಗಿಂತ ಭಿನ್ನವಾಗಿಲ್ಲ. ರೈತರ ಹೆಸರಿನಲ್ಲಿ ಜನಸಾಮಾನ್ಯರ ಹೆಸರಿನಲ್ಲಿ ನಡೆಯುವ ಹಲವು ಪಕ್ಷಗಳ ಸ್ಥಿತಿ ಇದೇ ಆಗಿದೆ. ಇಲ್ಲಿಯೇ ಸಿಪಿಐ(ಎಂ) ಇತರ ಪಕ್ಷಗಳಿಂದ ಭಿನ್ನವಾಗಿರುವುದು.

ಅತ್ಯುನ್ನತ ಪದ್ಧತಿ

ಖಡಾಖಂಡಿತವಾಗಿ ಸಂವಿಧಾನದ ನಿಯಮಗಳನ್ನು ಪಾಲಿಸಿ, ಪಕ್ಷದ ಸಂಘಟನೆಯ ಕೆಳಮಟ್ಟದಿಂದ ಹಿಡಿದು ಕೇಂದ್ರ ಸಮಿತಿಯವರೆಗೆ ಇರುವ ಘಟಕಗಳ ಕೆಲಸ ಕಾರ್ಯಗಳನ್ನು ಗಮನಿಸಿ, ಚುನಾವಣೆ ಮೂಲಕ ನಾಯಕತ್ವವನ್ನು ಆರಿಸುವುದು ಇತ್ಯಾದಿ ಕ್ರಮ ಸಿಪಿಐ(ಎಂ) ನಲ್ಲಿ ಅತ್ಯುನ್ನತ ಮಟ್ಟದಲ್ಲಿ ಕೂಡಾ-ಪ್ರಜಾಪ್ರಭುತ್ವ ವ್ಯವಸ್ಥೆ ಇದೆ ಎಂಬುದನ್ನು ತೋರಿಸುತ್ತದೆ. ಕಮ್ಯೂನಿಸ್ಟ್ ಪಕ್ಷದ ಎಲ್ಲಾ ಘಟಕಗಳಲ್ಲಿ ನಾಯಕತ್ವವನ್ನು ಚುನಾವಣೆ ಮೂಲಕ ಆರಿಸಲಾಗುತ್ತದೆ.

ರಾಜ್ಯ ಸಮ್ಮೇಳನಗಳ ಹಾಗೂ ಪಕ್ಷದ ಅಖಿಲ ಭಾರತ ಕೇಂದ್ರದ ಅಡಿಯಲ್ಲಿರುವ ಪಕ್ಷದ ಘಟಕಗಳಿಂದ ಚುನಾಯಿತರಾದ ಪ್ರತಿನಿಧಿಗಳು ಸೇರಿಯೇ ಪಕ್ಷದ ಅಖಿಲ ಭಾರತ ಮಹಾಧಿವೇಶನ ನಡೆಸುವುದು. ರಾಷ್ಟ್ರದ ಅತ್ಯುನ್ನತ ವೇದಿಕೆಯೇ ಪಕ್ಷದ ಮಹಾಧಿವೇಶನ. ಪಕ್ಷದ ಈ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿ ಮಂಡಿಸುವ ರಾಜಕೀಯ ಹಾಗೂ ಸಂಘಟನಾ ವರದಿಯನ್ನು ಚರ್ಚೆ ಮಾಡಿ, ತಿದ್ದುಪಡಿ ಸೂಚಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ. ಪಕ್ಷದ ಕಾರ್ಯಕ್ರಮ ಹಾಗೂ ಸಂವಿಧಾನವನ್ನು ಪುನರ್ ವಿಮರ್ಶೆ ಹಾಗೂ ತಿದ್ದುಪಡಿ ಮಾಡಬೇಕಾಗಿರುವುದು ಪಕ್ಷದ ಧೋರಣೆ ನಿರ್ಣಯಿಸುವುದು. ಅಗತ್ಯ ಬಿದ್ದಲ್ಲಿ ರಹಸ್ಯ ಮತದಾನದ ಮೂಲಕ ನಿರ್ಣಯಗಳನ್ನು ತೆಗೆದುಕೊಳ್ಳುವುದು, ಹೊಸ ಕೇಂದ್ರ ಸಮಿತಿಯನ್ನು ಆರಿಸುವುದು ಈ ಎಲ್ಲಾ ಪ್ರಕ್ರಿಯೆಗಳು ಪಕ್ಷದ ಮಹಾಧಿವೇಶನದಲ್ಲಿ ನಡೆಯುತ್ತವೆ.

- ಇ.ಕೆ.ಎನ್.ರಾಜನ್

ರಾಜ್ಯ ಸಮ್ಮೇಳನ ಉಡುಪಿಯಲ್ಲಿ

ಪಕ್ಷದ ಅಖಿಲ ಭಾರತ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಪಕ್ಷದ ಸ್ಥಳೀಯ ಶಾಖೆಗಳಿಂದ ಹಿಡಿದು ಎಲ್ಲಾ ಹಂತದ ಘಟಕಗಳ ಸಮ್ಮೇಳನ ನಡೆಯುತ್ತವೆ. ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನ ಜನವರಿಯಲ್ಲಿ ಉಡುಪಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಜಾತಿವಾದಿ ಹಾಗೂ ಕೋಮುವಾದಿ ಶಕ್ತಿಗಳ ಹಾಗೂ ಹಣಕಾಸು ಬಂಡವಾಳಗಾರರ ಕೇಂದ್ರವಾದ ಉಡುಪಿ ಜಿಲ್ಲೆಯಲ್ಲಿ ನಡೆಯುವ ಸಿಪಿಐ(ಎಂ)ನ ರಾಜ್ಯ ಸಮ್ಮೇಳನವನ್ನು ಒಂದು ಚಾರಿತ್ರಾರ್ಹ ಸಂದರ್ಭವಾಗಿ ಮಾರ್ಪಡಿಸಲು ಪಕ್ಷದ ಉಡುಪಿ ಜಿಲ್ಲಾ ಸಮಿತಿ ಸದಸ್ಯರು ಹಾಗೂ ಕಾರ್ಯಕರ್ತರು ತೀರ್ಮಾನ ಕೈಗೊಂಡಿದ್ದಾರೆ. ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳೆಯರ, ಜನಸಾಮಾನ್ಯರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ದಿನನಿತ್ಯ ಹೋರಾಟ ನಡೆಸುವ ಸಿಪಿಐ(ಎಂ) ಪಕ್ಷದ ರಾಜ್ಯ ಸಮ್ಮೇಳನವನ್ನು ರಾಜ್ಯದ ಬೂರ್ಜ್ವಾ ಮಾಧ್ಯಮಗಳು, ಇತರೆ ಪಕ್ಷಗಳು ಯಾವ ರೀತಿಯಲ್ಲಿ ಎದುರು ನೋಡುತ್ತವೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಗಾಗಿ ನಿತ್ಯವೂ ನಡೆದಿರುವ ವರ್ಗಸಂಘರ್ಷ



ರಾಮದುರ್ಗ ಗಲಭೆ......

ಪುಟ 9 ರಿಂದ

ರಾಮದುರ್ಗದ ಜನಜೀವನ ಸಂಪೂರ್ಣ ಹಾಳಾಗುವುದು; ಬಡ ಜನರು ತೊಂದರೆಗೆ ಸಿಲುಕುವರು; ವ್ಯಾಪಾರ ವಹಿವಾಟು ನಿಂತು ಹೋಗುವುದು- ಇತ್ಯಾದಿ ವಿಷಯಗಳನ್ನು ಎಲ್ಲರಿಗೂ ಮನದಟ್ಟಾಗುವಂತೆ ವಿವರಿಸಲಾಯಿತು. ಕೂಡಲೇ ಸದ್ಯದ ಪರಿಸ್ಥಿತಿ ತಿಳಿಗೊಳಿಸಲು ಎಲ್ಲರೂ ಮುಂದಾಗಬೇಕೆಂದು ಅಭಿಪ್ರಾಯಪಡಲಾಯಿತು. ಅಕ್ಟೋಬರ್ 2, ಗಾಂಧೀ ಜಯಂತಿಯ ದಿನವೇ ಸೌಹಾರ್ದ ಮೆರವಣಿಗೆ ಹೊರಡಿಸಲು ತೀರ್ಮಾನಿಸಿ 7 ಜನರನ್ನೊಳಗೊಂಡ ಒಂದು ಸಂಚಾಲಕ ಸಮಿತಿ ರಚಿಸಲಾಯಿತು.

ಸಭೆ ಮುಗಿದ ತಕ್ಷಣ ಠಾಣೆಯಿಂದ ಕರೆ ಬಂದಿತು. ಬೈಲಹೊಂಗಲದಿಂದ ಎ.ಎಸ್.ಪಿ ಬಂದಿದ್ದರು. ಅವರೊಬ್ಬ ಯುವ ಮಹಿಳಾ ಅಧಿಕಾರಿ. ಮುಸಲ್ಮಾನರ ಮತ್ತು ಹಿಂದೂಗಳ ಪ್ರತ್ಯೇಕ ಸಭೆಗಳನ್ನು ಮಾಡಲು ಇಚ್ಛಿಸಿದರು. ಸಿಪಿಐ(ಎಂ) ಇದಕ್ಕೆ ವಿರೋದ ವ್ಯಕ್ತಪಡಿಸಿ, ವಾತಾವರಣ ತಿಳಿಯಾಗುವುದು ಅತ್ಯಂತ ಅವಶ್ಯವಿದ್ದು ಸಹಕರಿಸಲು ತಿಳಿಸಿತು.

ಮರುದಿನ ಅಕ್ಟೋಬರ್ 2 ರಂದು ಅಭೂತಪೂರ್ವ ಮೌನ ಮೆರವಣಿಗೆ ನಡೆಯಿತು. ವಿವಿಧ ಜನವಿಭಾಗಗಳಿಂದ ನೂರಾರು ಜನ ಪಾಲ್ಗೊಂಡರು. ಈ ಮೆರವಣಿಗೆ ಸಾಮಾನ್ಯ ಜನತೆ ಶಾಂತಿ ಬಯಸುತ್ತಾರೆ ಎಂಬುದಕ್ಕೆ ದ್ಯೋತಕವಾಗಿತ್ತು. ಊರಿನ ಪ್ರಮುಖ ಬೀದಿಗಳಲ್ಲಿ ಹಾಯ್ದು ಲೈಬ್ರರಿ ಮೈದಾನದಲ್ಲಿ ಸಮಾವೇಶಗೊಂಡಿತು. ಆರಂಭದಲ್ಲಿ ನಾನು ಪ್ರಾಸ್ತಾವಿಕವಾಗಿ ಮಾತನಾಡಿ ಈ ಗಲಭೆಗಳು ಹೇಗೆ ಎಲ್ಲವನ್ನೂ ನಾಶ ಮಾಡುತ್ತೇವೆ ಎಂದು ವಿವರಿಸಿ ಗಲಭೆಗಳಿಗೆ ಅವಕಾಶ ನೀಡದಂತೆ ವಿನಂತಿಸಿದೆ. ಸ್ಥಳೀಯ ಶಾಸಕ ಯಾದವಾಡ, ಗಣ್ಯ ವೈದ್ಯ ಡಾ.ಕುಲಗೋಡ, ದ.ಸಂ.ಸನ ಗೆಳೆಯ ಬಿ.ಆರ್.ದೊಡಮನಿ, ಪ್ರೊ.ಚಿಕ್ಕನರಗುಂದ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾಂ.ಗೈಬು ಮಾನವರಾಗೋಣ ಗೀತೆಯನ್ನು ಹಾಡಿದರು.

ಅಂದಿನಿಂದ ರಾಮದುರ್ಗದಲ್ಲಿ ಶಾಂತಿ ನೆಲೆಸಿದೆ. ಪೋಲೀಸ್ ಅಧಿಕಾರಿಗಳು, ತಹಶೀಲ್ದಾರರು ಮುಂತಾದವರು ಕಾರ್ಯಕ್ರಮ ನಡೆಸಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂಥದೊಂದು ಮೆರವಣಿಗೆ ನಡೆಸಿ ಸುಮ್ಮನಿರದೇ ಮುಂದೆಂದೂ ಗಲಭೆಗಳಾಗದಂತೆ ಹಾಗೂ ಗಲಭೆಖೋರರನ್ನು ಬಯಲಿಗೆಳೆಯಲು ಸಂಚಾಲಕ ಸಮಿತಿಯ ಪರವಾಗಿ ನಮ್ಮ ಪ್ರಯತ್ನ ಮುಂದುವರೆದಿದೆ.

● ವ್ಹಿ.ಪಿ.ಕುಲಕರ್ಣಿ

ಸಿನಿಮಾ

'ಕಲಾಸಿಪಾಳ್ಯ'ದಲ್ಲೇನಿದೆ ? ಬರೀ ಕೊಚ್ಚೆ !

ಕಲಾಸಿಪಾಳ್ಯದ ರೌಡಿಸಂ ಕುರಿತಾದ ಈ ಚಿತ್ರ ಗೂಂಡಾಗಿರಿಯನ್ನು ಉತ್ತೇಜಿಸುವಂತಹ ಚಿತ್ರ. ದಾದಾಗಿರಿಯಲ್ಲೂ ಒಂದು ಮಜಾ ಇದೆ ಎಂಬಂತೆ ಬಿಂಬಿಸಲು ಹೊರಟಿರುವ ನಿರ್ದೇಶಕರು ಯುವಕರನ್ನು ದಾರಿ ತಪ್ಪಿಸಲು ಹೊರಟಿದ್ದಾರೆ.

ಹೊಡೆದಾಡ, ಬಡಿದಾಟ, ಹಿಂಸೆ, ರಕ್ತದೋಕುಳಿ... ಕಿವಿ ಕಚ್ಚುವ ಹಾಡುಗಳು, ಅದರ ಜೊತೆಯಲ್ಲಿ ತಮಾಷೆಗಾಗಿ ನಡೆಯುವ ದೊಂಬರಾಟ ಇದು ಕಲಾಸಿ ಪಾಳ್ಯದ ಚಿತ್ರಣ. ಹೌದು ರಾಮು ನಿರ್ಮಾಣದ 'ಕಲಾಸಿಪಾಳ್ಯ' ಚಿತ್ರದ ಎರಡೂವರೆ ತಾಸಿನಲ್ಲಿ ಮೂಕಪ್ರೇಕ್ಷಕ ಇವನ್ನೆಲ್ಲ ನೋಡುತ್ತಾ ನರಕಯಾತನೆ ಅನುಭವಿಸಬೇಕಾಗುತ್ತದೆ. ಈ ಚಿತ್ರವು ಹೆಚ್ಚುಕಮ್ಮಿ ತಮಿಳಿನ 'ಧೂಳ್', 'ದಿಲ್' ಮತ್ತು ಹಿಂದಿಯ 'ವಾಸ್ತವ್' ಚಿತ್ರಗಳಿಂದ ಭಟ್ಟಿ ಇಳಿಸಲಾಗಿದೆ. ಇನ್ನೂ ನಾವು ನೋಡದ ಇನ್ಯಾವವ ಚಿತ್ರಗಳಿಂದ ಕದಿಯಲಾಗಿದೆಯೋ? ಈ ಚಿತ್ರದ ನಿರ್ದೇಶಕ ಓಂ ಪ್ರಕಾಶ್. ಈತನ ತಲೆಯಲ್ಲಿ ಏನಿದೆಯೋ ಕಾಣೆ. ಯಾರಿಗಾಗಿ ಸಿನಿಮಾ ತೆಗೆಯುತ್ತಾರೋ? ಸಭ್ಯರಂತು ಇವರ ಸಿನಿಮಾ ನೋಡುವುದು ತುಂಬಾ ಕಷ್ಟ.

ಕಲಾಸಿಪಾಳ್ಯದ ರೌಡಿಸಂ ಕುರಿತಾದ ಈ ಚಿತ್ರ ಗೂಂಡಾಗಿರಿಯನ್ನು ಉತ್ತೇಜಿಸುವಂತಹ ಚಿತ್ರ. ದರ್ಶನ್ ಚಿತ್ರದ ನಾಯಕ. ಚಿತ್ರದಲ್ಲಿ ಕಲಾಸಿಪಾಳ್ಯದ ಹುಡುಗನಾದ ಅವನು ಸ್ವಲ್ಪ ಹುಂಬ. ಘಟಾನುಘಟಿ ರೌಡಿಗಳನ್ನು ಎದುರು ಹಾಕಿಕೊಳ್ಳುತ್ತಾನೆ. ಇದರಿಂದಾಗಿ ತನ್ನ ತಂದೆ ತಾಯಿಯನ್ನು ಕಳೆದುಕೊಳ್ಳುತ್ತಾನೆ. ಅಂತಿಮವಾಗಿ ತನ್ನ ಎದುರಾಳಿಗಳನ್ನೆಲ್ಲಾ ಸದೆ ಬಡಿದು ಕೊಂದು ಹಾಕುತ್ತಾನೆ.



ವಿಪರ್ಯಾಸವೆಂದರೆ ಅವನ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸಲು ಆಗುವುದಿಲ್ಲ. ಏಕೆಂದರೆಸಾಕ್ಷಿ ಹೇಳಲು ಯಾರೂ ಮುಂದೆ ಬರುವುದಿಲ್ಲ. ಸ್ವತಃ ಪೊಲೀಸ್ ಕಮಿಷನರ್‌ರವರು ಅವನು ಹತ್ಯೆಗೈಯುವುದನ್ನು ನೋಡಿದ್ದರೂ ಕಾನೂನು ಕ್ರಮಕ್ಕೆ ಮುಂದಾಗುವುದಿಲ್ಲ. ಇಷ್ಟೇ ಈ ಚಿತ್ರದ ಕಥೆ.

ಇವುಗಳ ಮಧ್ಯೆ ಒಂದಿಷ್ಟು ಕಾಮಿಡಿ ಅಂತ ಇದೆ. ಅದೂ ಬೇರಾವುದೋ ಭಾಷೆಯ ಚಿತ್ರದಿಂದ ಕದ್ದಿದ್ದೇ. ಸಾಧು ಕೋಕಿಲನ ಹಾವ ಭಾವ ಭಯಾನಕ! ಎಲ್ಲವೂ ಕೀಳು ಅಭಿರುಚಿಯವೇ. ಇನ್ನು ಚಿತ್ರದ ನಾಯಕಿ ರಕ್ಷಿತಾ! ತಾನು ಎಲ್ಲಾ ಸಭ್ಯತೆಯನ್ನು ಮೀರಿ ನಟಿಸಬಲ್ಲಳೆಂಬುದನ್ನು ಯಾವುದೇ ಅನುಮಾನಕ್ಕೆ ಎಡೆಯಿಲ್ಲದಂತೆ ಸಾಬೀತುಪಡಿಸಿದ್ದಾರೆ! ಐಟಂ ಸಾಂಗ್‌ಗಳ ನರ್ತಕಿಯರೂ ಇವಳ ಮುಂದೆ ಡಲ್ಲು!

ದಾದಾಗಿರಿಯಲ್ಲೂ ಒಂದು ಮಜಾ ಇದೆ ಎಂಬಂತೆ ಬಿಂಬಿಸಲು ಹೊರಟಿರುವ ನಿರ್ದೇಶಕರು ಯುವಕರನ್ನು ದಾರಿ ತಪ್ಪಿಸಲು ಹೊರಟಿದ್ದಾರೆ. ಯುವ ಜನಾಂಗವೂ ಕೂಡಾ ಇಂತಹ ಚಿತ್ರಗಳಿಂದ ಆಕರ್ಷಿತರಾಗತ್ತಾರೆ.

ಅದಕ್ಕೆ ಉದಾಹರಣೆಯಾಗಿ ಈ ಚಿತ್ರ ಯಶಸ್ವಿಯಾಗಿ ನಡೆಯುತ್ತಿದ್ದು, ಬ್ಲಾಕ್‌ನಲ್ಲಿ ಟಿಕೆಟ್ ಕೊಂಡು ನೋಡುತ್ತಿದ್ದಾರೆ.

ಕನ್ನಡ ಚಿತ್ರಗಳಿಗೆ ಪ್ರೇಕ್ಷಕರಿಲ್ಲ, ಬೇರೆ ಭಾಷೆಯ ಚಿತ್ರಗಳನ್ನು ನಿರ್ಬಂಧಿಸಬೇಕೆಂದು ಹೋರಾಡುವ ಇಂತಹ ಚಿತ್ರಗಳ ನಿರ್ಮಾಪಕರು, ಸಭ್ಯರು ನೋಡುವಂತಹ ಚಿತ್ರಗಳ ನಿರ್ಮಾಣದತ್ತ ಗಮನ ಹರಿಸಬೇಕು. ಅಲ್ಲಿ ಇಲ್ಲಿ ಕದ್ದು ಹಲವು ದೃಶ್ಯಗಳನ್ನು ಜೋಡಿಸಿ ಇಂತಹ ಹೊಲಸು ಚಿತ್ರಗಳನ್ನು ಕನ್ನಡ ಪ್ರೇಕ್ಷಕನ ಮೇಲೆ ಹೇರಿ ಅವರ ಹಾದಿತಪ್ಪಿಸುವಂತಹ ಕೆಲಸ ಮಾಡುವುದು ಎಷ್ಟು ಸರಿ? ಸ್ವಂತಿಕೆ ಎಂಬುದು ಇವರ ಜಾಯಮಾನಕ್ಕೆ ಇಲ್ಲ. ಹಣ ಮಾಡುವುದೊಂದೇ ಗುರಿ, ಕನ್ನಡ-ಗಿನ್ನಡವೆಂಬುದೆಲ್ಲಾ ಬರೀ ಡೋಂಗಿ.

• ನಕುಲ

'ಬಾನಾಮತಿ' - ನಿಗೂಢ ಜಗತ್ತಿನಲ್ಲಿ ಅಂಧ ಪಯಣ



ಯಾವುದೋ ಊರು. ಅಲ್ಲೊಬ್ಬನಿಗೆ ತಿರುಪತಿ ತಿಮ್ಮಪ್ಪನೊಂದಿಗೆ ತನ್ನ ಮದುವೆ ಮಾಡಬೇಕೆಂದು ಸೊಲ್ಲಾಪುರದ ಮಹಾಲಕ್ಷ್ಮಿ ಕನಸಿನಲ್ಲಿ ಬಂದು ಕೇಳಿಕೊಂಡಳಂತೆ! ಸರಿ ಮಾಡುವುದಕ್ಕಿನ್ನೇನಿದೆ ಕೆಲಸ - ದುಡ್ಡು ದೋಚುವುದಕ್ಕೆ ಸಿಕ್ಕಿತಲ್ಲ ನೆಪ! ತಿರುಪತಿ ತಿಮ್ಮಪ್ಪನಿಗೂ-ಸೊಲ್ಲಾಪುರದ ಮಹಾಲಕ್ಷ್ಮಿಗೂ ಮದುವೆ ಆಗಿಯೇ ಹೋಯಿತು! ಇಷ್ಟು ಸಾಲದೆ, ಆ ಪೂಜಾರಿ ಮನೆಯ ಹೆಣ್ಣೊಬ್ಬಳ ಮೈಮೇಲೆ ಆಕೆ ಬಂದು ಹಲವು ಕಷ್ಟ-ಕೋಟಲೆಗಳಲ್ಲಿ ಮುಳುಗಿರುವ ಭಕ್ತ ಮಹಾಶಯರಿಗೆ ದಾರಿ ತೋರುತ್ತಾಳೆ! ಇಷ್ಟೇ ಸಾಕಲ್ಲ, ಜನ ಮರುಳು-ಪೂಜಾರಿ ಖಜಾನೆ ಭರ್ತಿ!

ಅಂಧ ಶ್ರದ್ಧೆಗಳನ್ನು ಬೆನ್ನಟ್ಟಿ ಬೇಧಿಸದ 'ಬಾನಾಮತಿ' ಧಾರವಾಹಿ ಅಜ್ಞಾನವನ್ನೇ ಹೆಚ್ಚಿಸುವ ರಹದಾರಿಯಾಗಿದೆ.

ಇದು 'ಈ - ಟಿ.ವಿ.' ಕನ್ನಡದಲ್ಲಿ ಶನಿವಾರ-ಭಾನುವಾರದಂದು ಬರುವ 'ಭಾನಾಮತಿ' ಧಾರವಾಹಿಯಲ್ಲಿನ ಒಂದು ಎಪಿಸೋಡ್. ಈ ಮೇಲಿನ ಘಟನೆಯನ್ನು ಕೇಳಿದವರಿಗೆ ಸ್ವಲ್ಪವೇನಾದರೂ ಬುದ್ಧಿಯಿದ್ದಲ್ಲಿ ಸಲೀಸಲಾಗಿ ಯೋಚಿಸಬಹುದು ಇದರಲ್ಲಿ ಪೂಜಾರಿ ಮನೆಯರ ಠಕ್ಕುತನವಿದೆಯೆಂಬುದನ್ನು. ಆದರೆ ಈ ಧಾರಾವಾಹಿ ನಿರ್ಮಾತೃಗೆ ಇದು ಹೊಳೆಯುವುದೇ ಇಲ್ಲ. ಆ ಜನರ ನಂಬಿಕೆ, ಅವರ ಕಷ್ಟಕೋಟಲೆಗಳು ಪರಿಹಾರವಾದದ್ದನ್ನು ಕೇಳಿ ದಿಗ್ಮೂಢರಾಗಿ ಅಲ್ಲಿ ಪ್ರಶ್ನಿಸುವುದಕ್ಕೇನೂ ಉಳಿದಿಲ್ಲವೆಂಬಂತೆ ಹಿಂದಿರುಗುತ್ತಾರೆ.

ಇನ್ನೊಂದು ಎಪಿಸೋಡ್‌ನಲ್ಲಿ ಒಬ್ಬ ತಾನು ಪ್ರಗತಿಪರ, ನಾಸ್ತಿಕನೆಂದು ಪೋಜು ಕೊಡುತ್ತಾನೆ. ಆದರೆ ಆತನು ತನಗಾದ ಅದ್ಭುತ ಅನುಭವವೊಂದನ್ನು ಅತೀಂದ್ರಿಯ ಶಕ್ತಿಯೆಂದು ಡೋಂಗಿ ಹೊಡೆಯುತ್ತಾನೆ. ತನ್ನ ಸಹಚರರೊಂದಿಗೆ ಕೋಲಾರದ ಅಂತರಗಂಗೆ ಬೆಟ್ಟ ಹತ್ತಿದ ಆತ ಹಿಂದಿರುಗುವಲ್ಲಿ ಕತ್ತಲೆಯಾಗುತ್ತದಂತೆ. ಕತ್ತಲೆಯಲ್ಲಿ ದಾರಿ ಕಾಣದೆ ಊಹೆಯ ಮೇಲೆ ಬಂಡೆಗಳಿಂದ ಕೆಳಗೆ ನೆಗೆಯುತ್ತಾ ಕೆಳಗಿಳಿಯುತ್ತಿದ್ದಂತೆ. ಒಮ್ಮೆ ಕೆಳಗೆ ನೆಗಯಲು ಹೊರಟಾಗ ಮಿಂಚಿತಂತೆ, ಆ ಮಿಂಚಿನ ಬೆಳಕಲ್ಲಿ ಕೆಳಗೆ ನೋಡಿದರೆ ಪ್ರಪಾತವಂತೆ! ಸ್ವಲ್ಪದಲ್ಲೇ ಅವನು ಪ್ರಾಣಾಪಯದಿಂದ ಪಾರಾದನಂತೆ!

ಕಣ್ಣಿಲ್ಲದ ಕುರುಡರೂ ನಡೆಯಲು ಕೋಲು ಬಳಸುತ್ತಾರೆ. ಆತನಿಗೆ ಅಲ್ಲಿ ಯಾವುದೇ ಕೋಲು ಸಿಗಲಿಲ್ಲವೇ? ಅದಿರಲಿ, ಯಾರಿಗೇ ಆಗಲಿ ಎಂತಹ ಕತ್ತಲ್ಲಿದ್ದರೂ ಅದಕ್ಕೆ ಹೊಂದಿಕೊಂಡ ನಂತರ ನಮ್ಮ ಮುಂದಿರುವುದು ಮಸುಕಾಗಿಯಾದರೂ ಗೋಚರಿಸುತ್ತದೆ. ಈ ಮೂಢನದು ಇದೊಂದೇ ಅನುಭವವಲ್ಲ. ಇನ್ನೊಂದು ಇದೆ. ಅದೇನೆಂದರೆ ಅದೇ ಬೆಟ್ಟದಲ್ಲಿ ರಾತ್ರಿ ಬಿರಿಯಾನಿ ತಿಂದು ಉಳಿದಿದ್ದನ್ನು ಅಲ್ಲೇ ಇಟ್ಟು ಮಲಗಿದ್ದರಂತೆ. ಬೆಳಗೆದ್ದು ನೋಡಿದರೆ ಬಿರಿಯಾನಿ ಖಾಲಿಯಂತೆ!. ಯಾವ ನಾಯಿ-ನರಿ ತಿಂದು ಹಾಕಿತೋ! ಭ್ರಾಂತಿಗೊಳಗಾದ ಈ ಆಸಾಮಿ ಅದನ್ನು ಇನ್ನೊಬ್ಬರಿಗೂ ದಾಟಿಸಲು ಯತ್ನಿಸಿದ್ದಾರೆ. ಅವರ ಈ ಅನುಭವವನ್ನು ಕಂಡು 'ಬಾನಾಮತಿ' ತಂಡ ಮೂಕವಿಸ್ಮಿತರಾಗುತ್ತಾರೆ.

ಇವಿಷ್ಟೇ ಅಲ್ಲ. ಪ್ರತಿಯೊಂದು ಕಂತಿನಲ್ಲೂ 'ಬಾನಾಮತಿ' ತಂಡ ಇಂತಹ ದೆವ್ವ-ಭೂತದ ಕಥೆಗಳನ್ನು ವೀಕ್ಷಕರ ಮುಂದಿಡುತ್ತಾ, ಅದ್ಭುತಗಳನ್ನು ಕಂಡಂತೆ ಬೀಗುತ್ತಾರೆ. ಇಂತಹ ನಡವಳಿಕೆಗಳಿಗೆ ಕಾರಣಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಅಲ್ಪ ಪ್ರಯತ್ನವನ್ನೂ ಮಾಡದೇ ಕೇಳಿದ್ದೇ ಸತ್ಯವೆಂದು ಬಿಂಬಿಸಲು ಹೊರಟಿರುವುದು ಅಕ್ಷಮ್ಯ.

ಈಗಾಗಲೇ ಹಲವಾರು ವಿಜ್ಞಾನಿಗಳು, ಮನೋ ವೈದ್ಯರು ಇಂತಹ ನಡವಳಿಕೆಗೆ ಇರಬಹುದಾದ ಕಾರಣಗಳನ್ನು ವಿಶ್ಲೇಷಿಸಿದ್ದಾರೆ. ಅಂತಹ ತಜ್ಞರನ್ನು ಸಂಪರ್ಕಿಸಿ ತಾವು ಕಂಡ ಘಟನೆಗಳಿಗೆ ಕಾರಣಗಳೇನಿರಬಹುದೆಂಬ ಉತ್ತರವನ್ನು ಕಂಡುಕೊಳ್ಳುವ ಬಯಕೆಯೇ ಇಲ್ಲದಂತಿದೆ ಈ ತಂಡಕ್ಕೆ.

ನಗರವಾಸಿಗಳಾದರೋ ಅಲ್ಪಸ್ವಲ್ಪವಾದರೂ ಯೋಚಿಸಬಲ್ಲರು. ಆದರೆ ಗ್ರಾಮೀಣ ಜನತೆ ಇಂತದ್ದೇ ಮೂಢನಂಬಿಕೆಗಳಿಂದ ಈಗಲೂ ನರಳುತ್ತಿದ್ದಾರೆ. ಅವರು ಇಂತಹ ಧಾರವಾಹಿಗಳನ್ನು ನೋಡಿ, ತಾವು ನಂಬಿದ್ದೇ ಸರಿ ಎಂಬ ತೀರ್ಮಾನಕ್ಕೆ ಬಂದು, ಅವರ ಅಜ್ಞಾನವನ್ನು ಹೆಚ್ಚಿಸಲಿಕ್ಕೆ ದಾರಿಯಾಗಿದೆ ಈ ಧಾರವಾಹಿ.

• ರಾಮು

ತಿಮ್ಮಪ್ಪ

ಗೊತ್ತೇನು ಈ ಇವನ ಹೆಸರು ತಿಮ್ಮಪ್ಪ
ಮತ್ತಿನ್ನೂ ಎಲ್ಲರಿಗೆ ಇವನಂತೆ ಅಪ್ಪ
ಇವನದೇ ಮಕ್ಕಳಿಗೆ ಸಿಗದಿಂದು ಊಟ
ಈ ಅಪ್ಪ ಧರಿಸುತಿಹ ವಜ್ರಕಿರೀಟ.
ಮುಗ್ಧ ಜನರೆಲ್ಲರೊಳು ಹುಟ್ಟಿಸುತ ಭೀತಿ
ತಿಮ್ಮಪ್ಪ ಗಳಿಸಿದನು ಹಣ ಕೋಟಿ ಕೋಟಿ
ಮುತ್ತೈದೆ ನೆತ್ತಿಗೂ ಕತ್ತರಿಯ ಹಾಕಿ
ಬೋಳಿಸಿದ ಈ ಇವನು ಇನ್ನೇನು ಬಾಕಿ?

- ವಿಡಂಬಾರಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH